ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 20 ಶುಕ್ರವಾರ 2022

ಸಂಪುಟ: 43 | ಸಂಚಿಕೆ: 34 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ವಿದ್ಯಾರ್ಥಿಸ್ನೇಹಿ ಮೌಲ್ಯಮಾಪನದ ಹಿನ್ನೆಲೆ: ದಶಕದ ಫಲಿತಾಂಶ ಮೀರಿದ ಸಾಧನೆ; ಈ ಬಾರಿಯೂ ಬಾಲಕಿಯರದ್ದೇ ಮೇಲುಗೈ

SSLC ಫಲಿತಾಂಶ: ಶೇ.85.63ರಷ್ಟು ತೇರ್ಗಡೆ

145 ಮಂದಿ 625ಕ್ಕೆ 625, 309 ಮಂದಿ 624, 472 ಮಂದಿ 623, 615 ಮಂದಿ 622 ಅಂಕ ಗಳಿಕೆ

ಬೆಂಗಳೂರು, ಮೇ 19 (ಕೆಎಂಶಿ)– ಕೋವಿಡ್ ಸಂಕಷ್ಟದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ದಾಖಲೆಯ ಫಲಿತಾಂಶ ಬಂದಿದೆ.

ಕಳೆದ ಮಾರ್ಚ್ ಮಾಹೆಯಲ್ಲಿ ನಡೆದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇಕಡ 85.63ರಷ್ಟು ವಿದ್ಯಾರ್ಥಿಗಳು ತೇರ್ಗಡೆ ಹೊಂದಿ, ಕಳೆದ ಹತ್ತು ವರ್ಷದ ದಾಖಲೆಗಳನ್ನು ಮುರಿದಿದ್ದಾರೆ.


ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ.ನಾಗೇಶ್, 145 ಮಕ್ಕಳು ಪೂರ್ಣ ಅಂಕ 625ಕ್ಕೆ 625 ಪಡೆದು ತೇರ್ಗಡೆ ಹೊಂದಿದ್ದಾರೆ ಎಂದರು.

ಈ ಬಾರಿ 8,53,436 ವಿದ್ಯಾರ್ಥಿಗಳು ಪರೀಕ್ಷೆ ತೆಗೆದುಕೊಂಡಿದ್ದು, ಅದರಲ್ಲಿ 7,30,881 ವಿದ್ಯಾರ್ಥಿಗಳು ಪಾಸಾಗಿದ್ದಾರೆ. ಒಟ್ಟಾರೆ ಶೇ.85.63 ತೇರ್ಗಡೆ ಹೊಂದಿದಂತಾಗಿದೆ ಎಂದರು.

309 ವಿದ್ಯಾರ್ಥಿಗಳು 624 ಅಂಕ ಪಡೆದು 2ನೇ ಸ್ಥಾನದಲ್ಲಿದ್ದಾರೆ. ಈ ವರ್ಷ ಮಾರ್ಚ್ 28ರಿಂದ ಏಪ್ರಿಲ್ 11ರವರೆಗೆ ಪರೀಕ್ಷೆ ನಡೆದಿತ್ತು. ಈ ಸಲ 15,387 ಶಾಲೆಗಳಿಂದ 8,73,859 ವಿದ್ಯಾರ್ಥಿಗಳು ಪರೀಕ್ಷೆಗೆ ನೋಂದಾಯಿಸಿಕೊಂಡಿದ್ದರು. ರಾಜ್ಯಾದ್ಯಂತ 3,444 ಪರೀಕ್ಷಾ ಕೇಂದ್ರದಲ್ಲಿ ಪರೀಕ್ಷೆ ನಡೆದಿತ್ತು ಎಂದರು.

2019–20ನೇ ಸಾಲಿನಿಂದಲೇ ರ್‍ಯಾಂಕ್ ಬದಲಿಗೆ ಗ್ರೇಡ್ ನೀಡುವ ಪದ್ಧತಿ ಜಾರಿಯಲ್ಲಿದೆ. ಹೀಗಾಗಿ ಈ ವರ್ಷವೂ ಗ್ರೇಡ್ ನೀಡಲಾಗಿದೆ. ಈ ಸಲ ಮೌಲ್ಯಮಾಪನ ವಿದ್ಯಾರ್ಥಿಸ್ನೇಹಿಯಾಗಿ ಮಾಡಿದ್ದೇವೆ. ಹೀಗಾಗಿ ಹೆಚ್ಚು ಫಲಿತಾಂಶ ಬಂದಿದೆ.

ಪ್ರಶ್ನೆ ಪತ್ರಿಕೆ ಕೂಡಾ ವಿದ್ಯಾರ್ಥಿಸ್ನೇಹಿಯಾಗಿತ್ತು. ಶೇ.10 ಮಾತ್ರ ಕಠಿಣ ಪ್ರಶ್ನೆಗಳನ್ನು ಪತ್ರಿಕೆಯಲ್ಲಿ ನೀಡಲಾಗಿದ್ದು, ಶೇ.10ರಷ್ಟು ಗ್ರೇಸ್ ಮಾರ್ಕ್ಸ್ ನೀಡಲಾಗಿದೆ. 175 ಅಂಕ ಪಡೆದವರು ಮಾತ್ರ ಇದಕ್ಕೆ ಎಲಿಜಬಲ್ ಆಗಿರುತ್ತಾರೆ. 35,931 ವಿದ್ಯಾರ್ಥಿಗಳಿಗೆ 1 ವಿಷಯದಲ್ಲಿ ಮಾತ್ರ ಗ್ರೇಸ್ ಮಾರ್ಕ್ಸ್ ನೀಡಿದ್ದೇವೆ. 3,940 ವಿದ್ಯಾರ್ಥಿಗಳಿಗೆ ಎರಡು ವಿಷಯದಲ್ಲಿ ▶ 8ನೇ ಪುಟಕ್ಕೆ



ಸುದ್ದಿಗೋಷ್ಠಿಯಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಎಸ್‌ಎಸ್‌ಎಲ್‌ಸಿ ಫಲಿತಾಂಶ ಪ್ರಕಟಿಸಿದರು.

ಲಿಂಗವಾರು ಫಲಿತಾಂಶ

	ಹಾಜರಾತಿ	ಉತ್ತೀರ್ಣ	ಶೇಕಡಾ
ಬಾಲಕಿಯರು–	4,12,334	3,72,278	90.29%
ಬಾಲಕರು–	4,41,099	3,58,602	81.30%

ಶಾಲಾವಾರು ಫಲಿತಾಂಶ

ಸರ್ಕಾರಿ–88.00%, ಅನುದಾನಿತ–87.84%
ಅನುದಾನರಹಿತ – 92.29%

ನಗರ ಮತ್ತು ಗ್ರಾಮೀಣವಾರು ಫಲಿತಾಂಶ

ನಗರ – 2,92,946 – 86.64%
ಗ್ರಾಮೀಣ– 4,28,385 – 91.32%

ಗ್ರೇಡ್	ವಿದ್ಯಾರ್ಥಿಗಳು	ಶೇಕಡಾವಾರು
A+ ಗ್ರೇಡ್–	1,18,875	16.48%
A ಗ್ರೇಡ್	1,82,600	25.31%
B+ ಗ್ರೇಡ್	1,73,528	24.06%
B ಗ್ರೇಡ್	1,43,900	19.95%
C+ ಗ್ರೇಡ್	87,801	12.17%
C ಗ್ರೇಡ್	14,627	2.03%

ಪೂರಕ ಪರೀಕ್ಷೆ ದಿನಾಂಕ ಘೋಷಣೆ

ಬೆಂಗಳೂರು: ಎಸ್‌ಎಸ್‌ಎಲ್‌ಸಿ ಫಲಿತಾಂಶ ಪ್ರಕಟಗೊಂಡಿದ್ದು, ಕೆಲ ವಿದ್ಯಾರ್ಥಿಗಳು ಕಡಿಮೆ ಅಂಕ ಗಳಿಸಿದ್ದರೆ, ಇನ್ನು ಕೆಲವರಿಗೆ ಪರೀಕ್ಷೆ ಬರೆಯಲು ಸಾಧ್ಯವಾಗಿರಲಿಲ್ಲ. ಇನ್ನು ಕೆಲವರು ಹಿಂದಿನ ವರ್ಷಗಳಲ್ಲಿ ತೇರ್ಗಡೆಯಾಗಿರಲಿಲ್ಲ. ಇವರಿಗೆಲ್ಲ ಅನುಕೂಲ ಆಗುವ ನಿಟ್ಟಿನಲ್ಲಿ ಪೂರಕ ಪರೀಕ್ಷೆಯ ದಿನಾಂಕ ಪ್ರಕಟಿಸಲಾಗಿದೆ. ಜೂ.27ರಿಂದ ಜುಲೈ 4ರವರೆಗೆ ಪೂರಕ ಪರೀಕ್ಷೆ ನಡೆಯಲಿದೆ. ಆನ್‌ಲೈನ್ ಮೂಲಕ ಕೂಡ ನೋಂದಾಯಿಸಲು ಅವಕಾಶ ಕಲ್ಪಿಸಲಾಗಿದ್ದು, ಮೇ 30ರವರೆಗೆ ಅವಕಾಶ ನೀಡಲಾಗಿದೆ. ಬೆಳಗ್ಗೆ 10.30ರಿಂದ 1.45ರವರೆಗೆ ಪರೀಕ್ಷೆ ನಡೆಯಲಿದೆ. ▶ 8ನೇ ಪುಟಕ್ಕೆ

ಮೈಸೂರಿನ 6 ಮಂದಿ 625 ಅಂಕ ಸಾಧನೆ



ಎಂ.ಜಿ.ಏಕ್ತಾ | ಬಿ.ಎಂ.ದಿಶಾ | ಕೆ.ಚಾರುಕೀರ್ತಿ | ಬಿ.ಎಸ್.ಅದಿತಿ | ಯಶಸ್ವಿ ಅರಸ್ | ಜಿ.ದೇವಕಿ

ಮೈಸೂರು, ಮೇ 19(ಎಂಟಿವೈ)– ಮೈಸೂರು ಜಿಲ್ಲೆಯ ಆರು ವಿದ್ಯಾರ್ಥಿನಿಯರು 625ಕ್ಕೆ 625 ಅಂಕ ಪಡೆಯುವ ಮೂಲಕ ಗಮನಾರ್ಹ ಸಾಧನೆ ಮಾಡಿದ್ದಾರೆ.

ರಾಜ್ಯದಲ್ಲಿ ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 145 ವಿದ್ಯಾರ್ಥಿಗಳು 625ಕ್ಕೆ 625 ಅಂಕ ಪಡೆದು ಸಾಧನೆ ಮಾಡಿದ್ದು, ಆ ಸಾಧಕರ ಸಾಲಿಗೆ ಮೈಸೂರಿನ 6 ವಿದ್ಯಾರ್ಥಿನಿಯರು ಸೇರಿದ್ದಾರೆ. ಅದರಲ್ಲೂ ಖಾಸಗಿ ಶಾಲೆಗಳಿಗೆ ಸೆಡ್ಡು ಹೊಡೆದಿರುವ ಸರ್ಕಾರಿ ಶಾಲೆಯ ವಿದ್ಯಾರ್ಥಿನಿ ಕೂಡ 625ಕ್ಕೆ 625 ಅಂಕ ಪಡೆಯುವ ಮೂಲಕ ಸರ್ಕಾರಿ ಶಾಲೆಗಳತ್ತ ಜನರು ದೃಷ್ಟಿ ಹಾಯಿಸುವಂತೆ ಮಾಡಿದ್ದಾರೆ. ಜಿಲ್ಲೆಯ ಆರು ಮಂದಿ ಟಾಪರ್‌ಗಳಿಗೂ ಅವರ ಶಾಲೆಗಳ ಆಡಳಿತ ಮಂಡಳಿ, ಶಿಕ್ಷಕರು, ಬೋಧಕೇತರ ಸಿಬ್ಬಂದಿ ಹಾಗೂ ಸಂಬಂಧಿಗಳು ಅಭಿನಂದಿಸುವ ಮೂಲಕ ಸಾಧಕ ವಿದ್ಯಾರ್ಥಿಗಳಿಗೆ ಇನ್ನಷ್ಟು ಪ್ರೋತ್ಸಾಹ ನೀಡಿದ್ದಾರೆ.

ಸರ್ಕಾರಿ ಆದರ್ಶ ಶಾಲೆಯ ವಿದ್ಯಾರ್ಥಿನಿ: ಮೈಸೂರಿನ ಜಾಕಿ ಕ್ವಾಟ್ರಸ್‌ನಲ್ಲಿರುವ ಸರ್ಕಾರಿ ಆದರ್ಶ ಶಾಲೆಯ ವಿದ್ಯಾರ್ಥಿನಿ ಎಂ.ಜಿ.ಏಕ್ತಾ 625 ಅಂಕ ಪಡೆದು ಗಮನ ಸೆಳೆದಿದ್ದಾರೆ. ಈಕೆ ಮೈಸೂರಿನ ಸಿದ್ದಾರ್ಥನಗರದ ನಿವಾಸಿ ಎಲ್‌ಐಸಿ ಏಜೆಂಟ್ ಎಂ.ಸಿ.ಗಣಪತಿ ಹಾಗೂ ಎಂ.ಎಸ್.ಗಂಗಮ್ಮ ದಂಪತಿ ಪುತ್ರಿ. ಆಂಗ್ಲ ಮಾಧ್ಯಮ ಸರ್ಕಾರಿ ಶಾಲೆಯಾಗಿರುವ ಆದರ್ಶ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದ ಏಕ್ತಾ ಪ್ರತಿಭಾನ್ವಿತ ವಿದ್ಯಾರ್ಥಿನಿಯಾಗಿದ್ದು ಇದೀಗ ಎಲ್ಲರ ಪ್ರಶಂಸೆಗೆ ಪಾತ್ರರಾಗಿದ್ದಾರೆ.

ಟ್ಯೂಷನ್‌ಗೇ ಹೋಗಿಲ್ಲ

“ನಾನು ಟ್ಯೂಷನ್‌ಗೆ ಹೋಗಿಲ್ಲ. ಶಾಲೆಯಲ್ಲಿ ಶಿಕ್ಷಕರು ಕಲಿಸಿದ್ದನ್ನೇ ಮನನ ಮಾಡಿಕೊಳ್ಳುತ್ತಿದ್ದೆ. ಶಾಲೆಯ ಶಿಕ್ಷಕರು ನನ್ನ ಸಾಧನೆಗೆ ಪ್ರೇರಣೆ ನೀಡಿದ್ದಾರೆ. ಮನೆಯಲ್ಲಿ ಪೋಷಕರು ನನಗೆ ಆತ್ಮಸ್ಥೈರ್ಯ ತುಂಬಿದರು. ಇದರಿಂದ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಲು ಸಾಧ್ಯವಾಯಿತು. ಈ ಹಿಂದೆ ಶಾಲೆಯ ಕಾರ್ಯಕ್ರಮವೊಂದಕ್ಕೆ ಬಂದಿದ್ದ ಶಾಸಕ ಎಸ್.ಎ. ರಾಮದಾಸ್ ಅವರು ಸಾಧನೆ ಮಾಡುವಂತೆ ಪ್ರೇರಣೆ ನೀಡಿದ್ದರು. ಈ ಎಲ್ಲಾ ಅಂಶಗಳು ನನ್ನ ಈ ಸಾಧನೆಗೆ ಸಹಕಾರಿಯಾದವು. ಮುಂಬರುವ ದಿನಗಳಲ್ಲಿ ಸೇನೆಗೆ ಸೇರಬೇಕೆಂಬ ಹಂಬಲ ನನ್ನದಾಗಿದೆ. –ಎಂ.ಜಿ.ಏಕ್ತಾ

ರೈತನ ಮಗಳ ಸಾಧನೆ: ತಿ.ನರಸೀಪುರ ತಾಲೂಕು ಬನ್ನೂರಿನ ಬಿಜಿಎಸ್ ಶಾಲೆಯ ವಿದ್ಯಾರ್ಥಿನಿ ಬಿ.ಎಂ.ದಿಶಾ 625ಕ್ಕೆ 625 ಅಂಕ ಪಡೆದ ಗ್ರಾಮೀಣ ವಿದ್ಯಾರ್ಥಿನಿ. ಬನ್ನೂರಿನ ಬವನಹಳ್ಳಿ ಗ್ರಾಮದ ಮಹೇಶ್ ಹಾಗೂ ಲಕ್ಷ್ಮೀ ದಂಪತಿ ಪುತ್ರಿ ಬಿ.ಎಂ.ದಿಶಾ ಕೃಷಿಕ ಕುಟುಂಬದಿಂದ ಬಂದವರಾಗಿದ್ದಾರೆ. ಈಕೆ ಟ್ಯೂಷನ್‌ಗೆ ಹೋಗದೆ ಸಾಧನೆ ಮಾಡಿರುವ ವಿದ್ಯಾರ್ಥಿನಿ. ಶಾಲೆಯ ಮುಖ್ಯ ಶಿಕ್ಷಕಿ ಪಲ್ಲವಿ ನೇತೃತ್ವದಲ್ಲಿ ಇಂದು ಮಧ್ಯಾಹ್ನ ಶಾಲೆಯ ಶಿಕ್ಷಕರು ಹಾಗೂ ಸಿಬ್ಬಂದಿ ದಿಶಾ ಹಾಗೂ ಆಕೆಯ ಪೋಷಕರಿಗೆ ಸನ್ಮಾನಿಸಿ, ಉತ್ತೇಜಿಸಿದ್ದಾರೆ.

ಡಾಕ್ಟರ್ ಆಗಬೇಕೆಂಬ ಹಂಬಲ: ಫಲಿತಾಂಶದಿಂದ ಸಂತಸಗೊಂಡಿರುವ ದಿಶಾ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ನನಗೆ ಪರೀಕ್ಷೆಯಲ್ಲಿ 600 ಅಂಕ ಬರಬಹುದೆಂದು ನಿರೀಕ್ಷಿಸಿದ್ದೆ. ಪರೀಕ್ಷೆಯನ್ನು ಚೆನ್ನಾಗಿ ಬರೆದಿದ್ದರಿಂದ ಉತ್ತಮ ಅಂಕದೊಂದಿಗೆ ಪಾಸಾಗುವ ಆತ್ಮವಿಶ್ವಾಸವಿತ್ತು. ಪೂರ್ಣ ಪ್ರಮಾಣದಲ್ಲಿ ಅಂಕ ಗಳಿಸಿದ್ದಕ್ಕೆ ಸಂತೋಷವಾಗಿದೆ. ನನ್ನ ಈ ಸಾಧನೆಗೆ ಪೋಷಕರು ಹಾಗೂ ಶಾಲೆಯ ಶಿಕ್ಷಕರು ನೀಡಿದ ಪ್ರೋತ್ಸಾಹವೇ ಕಾರಣ ಎಂದರು. ಕೋವಿಡ್ ಹಿನ್ನೆಲೆಯಲ್ಲಿ ಕಳೆದ 2 ವರ್ಷದಿಂದ ಸರಿಯಾದ ಶಿಕ್ಷಣ ದೊರೆತಿರಲಿಲ್ಲ. ಇಂತಹ ಸಂದರ್ಭದ ನಡುವೆಯೂ ಶಾಲೆಯ ಶಿಕ್ಷಕರು ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣ ನೀಡಿ, ಪ್ರೋತ್ಸಾಹ ನೀಡಿದರು. ನಾನು ಮುಂದೆ ನೀಟ್ ಪರೀಕ್ಷೆಗೆ ▶ 8ನೇ ಪುಟಕ್ಕೆ

ಎಸ್‌ಎಸ್‌ಎಲ್‌ಸಿ ಫೇಲ್: ನೇಣು ಬಿಗಿದುಕೊಂಡು ಆತ್ಮಹತ್ಯೆ



ಸಂಜಯ್‌ಕುಮಾರ್

ಹನಗೋಡು, ಮೇ 19(ಮಹೇಶ್)– ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಫೇಲಾದ ಹಿನ್ನೆಲೆಯಲ್ಲಿ ವಿದ್ಯಾರ್ಥಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ದುರಂತ ನಡೆದಿದೆ. ಇಲ್ಲಿಗೆ ಸಮೀಪದ ಭೂತಾಳೆ ಪೇಂಜಳ್ಳಿ ನಿವಾಸಿ ವಿಜಯ್ ಅವರ ಪುತ್ರ ಹಾಗೂ ನಾಗಪುರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಸಂಜಯ್‌ಕುಮಾರ್(16) ಆತ್ಮಹತ್ಯೆ ಮಾಡಿಕೊಂಡ ವಿದ್ಯಾರ್ಥಿ.

ವಿವರ: ಗುರುವಾರ ರಾಜ್ಯಾದ್ಯಂತ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಫಲಿತಾಂಶ ಪ್ರಕಟವಾಗಿತ್ತು. ಸಂಜಯ್‌ಕುಮಾರ್ ಕೂಡ ಪರೀಕ್ಷೆಯಲ್ಲಿ ಉತ್ತೀರ್ಣನಾಗುವ ವಿಶ್ವಾಸದಲ್ಲಿದ್ದ. ಆದರೆ ಇಂಗ್ಲಿಷ್‌ನಲ್ಲಿ 25 ಅಂಕ ಹಾಗೂ ಸಮಾಜ ವಿಜ್ಞಾನದಲ್ಲಿ 30 ಅಂಕ ಪಡೆದು ಅನುತ್ತೀರ್ಣನಾಗಿದ್ದ. ಈ ವಿಷಯ ಪೋಷಕರಿಗೆ ತಿಳಿದರೆ ಅವರು ಬೈಯ್ಯುತ್ತಾರೆ ಎಂಬ ಭಯದಿಂದ ಸಂಜಯ್ ಇಂದು ಮಧ್ಯಾಹ್ನ ತಂದೆ, ತಾಯಿ ಕೂಲಿ ಕೆಲಸಕ್ಕೆ ತೆರಳಿದ್ದ ವೇಳೆ ಮನೆಯಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾನೆ. ಸಂಜಯ್ ತಂದೆ ತಾಯಿ ಕೆಲಸದಿಂದ ಮನೆಗೆ ಬಂದಾಗ ಪ್ರಕರಣ ಬೆಳಕಿಗೆ ಬಂದಿದ್ದು, ಸ್ಥಳಕ್ಕೆ ಹುಣಸೂರು ಗ್ರಾಮಾಂತರ ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದರು. ಬಳಿಕ ಶವವನ್ನು ಹುಣಸೂರು ಸಾರ್ವಜನಿಕ ಆಸ್ಪತ್ರೆಗೆ ರವಾನಿಸಿ, ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಮೈಸೂರು ಜಿಲ್ಲೆಯಲ್ಲಿ ಶೇ.91.38ರಷ್ಟು ತೇರ್ಗಡೆ

ಮೈಸೂರು, ಮೇ 19(ಎಸ್‌ಬಿಡಿ)– ಮೈಸೂರು ಜಿಲ್ಲೆಗೆ ಈ ಬಾರಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.91.38ರಷ್ಟು ಫಲಿತಾಂಶ ಬಂದಿದೆ.

ಜಿಲ್ಲೆಯಲ್ಲಿ 2021–22ನೇ ಸಾಲಿನ 16,114 ಬಾಲಕರು ಹಾಗೂ 16,898 ಬಾಲಕಿಯರು ಸೇರಿ ಒಟ್ಟು 33,012 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಈ ಬಾರಿ ನಗರ ಪ್ರದೇಶಕ್ಕಿಂತ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ಮೇಲುಗೈ ಸಾಧಿಸಿದ್ದಾರೆ. ಕೊರೊನಾ ಕಾರಣದಿಂದ 8 ಹಾಗೂ 9ನೇ ತರಗತಿಯಲ್ಲಿ ಸರಿಯಾಗಿ ಪರೀಕ್ಷೆ ನಡೆಯದಿದ್ದರೂ ಪಬ್ಲಿಕ್ ಪರೀಕ್ಷೆಯಲ್ಲಿ ಅತ್ಯುತ್ತಮ ಸಾಧನೆ ಮಾಡಿರುವುದು ವಿಶೇಷ. ಕೊರೊನಾ ಹಿನ್ನೆಲೆಯಲ್ಲಿ ಕಳೆದ 2020–21ನೇ ಸಾಲಿನಲ್ಲಿ ಪರೀಕ್ಷೆಗೆ ಹಾಜರಾದ ಎಲ್ಲಾ ವಿದ್ಯಾರ್ಥಿಗಳನ್ನೂ ಉತ್ತೀರ್ಣಗೊಳಿಸಿದ ಕಾರಣ ಸಹಜವಾಗಿ ಶೇ.100ರಷ್ಟು ಫಲಿತಾಂಶ ಬಂದಿತ್ತು. 2019–20ನೇ ಸಾಲಿನಲ್ಲಿ ಶೇ.74.45ರಷ್ಟು ವಿದ್ಯಾರ್ಥಿಗಳು ಮಾತ್ರ ಉತ್ತೀರ್ಣರಾಗಿದ್ದರು. ▶ 8ನೇ ಪುಟಕ್ಕೆ

ಜಿಲ್ಲಾವಾರು ಫಲಿತಾಂಶ

ಹಾಸನ– ಶೇ.95.60
ಮಂಡ್ಯ– ಶೇ.94.70
ಚಾ.ನಗರ– ಶೇ.92.13
ಕೊಡಗು– ಶೇ.91.44

ಪಿರಿಯಾಪಟ್ಟಣಕ್ಕೆ ಅಗ್ರಸ್ಥಾನ

ಮೈಸೂರು: ಜಿಲ್ಲೆಯಲ್ಲಿ ಪಿರಿಯಾಪಟ್ಟಣ ತಾಲೂಕು ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ ಅಗ್ರಸ್ಥಾನ ಪಡೆದುಕೊಂಡಿದೆ. ಪರೀಕ್ಷೆಗೆ ಹಾಜರಾಗಿದ್ದ 3006ರಲ್ಲಿ 2,845 ವಿದ್ಯಾರ್ಥಿಗಳು ಪಾಸ್ ಆಗಿದ್ದು, ಇದರೊಂದಿಗೆ ಶೇ.94.64ರಷ್ಟು ಸಾಧನೆಯಾಗಿದೆ. ಹೆಚ್.ಡಿ.ಕೋಟೆ ಶೇ.93.77ರೊಂದಿಗೆ ದ್ವಿತೀಯ, ಹುಣಸೂರು ಶೇ.93.64ರೊಂದಿಗೆ ತೃತೀಯ ಸ್ಥಾನದಲ್ಲಿವೆ. ಮೈಸೂರು ಗ್ರಾಮಾಂತರ 93.27, ನಂಜನಗೂಡು ಶೇ.92.10, ತಿ.ನರಸೀಪುರ ಶೇ.91.03, ಮೈಸೂರು ಉತ್ತರ ವಲಯ ಶೇ.89.07, ದಕ್ಷಿಣ ವಲಯ ಶೇ.88.67, ಕೆ.ಆರ್.ನಗರ ತಾಲೂಕು ಶೇ.87.35ರಷ್ಟು ಪಡೆದಿವೆ.

ದಕ್ಷಿಣ ಪದವೀಧರ ಕ್ಷೇತ್ರದಿಂದ ಚುನಾವಣೆ

ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ನಾಮಪತ್ರ ಸಲ್ಲಿಕೆ



ಮೈಸೂರು, ಮೇ 19–ದಕ್ಷಿಣ ಪದವೀಧರ ಕ್ಷೇತ್ರದಿಂದ ವಿಧಾನಪರಿಷತ್‌ಗೆ ನಡೆಯಲಿರುವ ಚುನಾವಣೆಗೆ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಗುರುವಾರ ಮೈಸೂರಲ್ಲಿ ನಾಮಪತ್ರ ಸಲ್ಲಿಸಿದರು. ಪ್ರಾದೇಶಿಕ ಆಯುಕ್ತರ ಕಚೇರಿಯಲ್ಲಿ ಸಹಾಯಕ ಪ್ರಾದೇಶಿಕ ಆಯುಕ್ತೆ ರೂಪಶ್ರೀ ಅವರಲ್ಲಿ ರವಿಶಂಕರ್ ▶ 4ನೇ ಪುಟಕ್ಕೆ

ರಾಜ್ಯಸಭೆ, ಪರಿಷತ್‌ಗೆ ಅಭ್ಯರ್ಥಿಗಳ ಆಂಯ್ಕೆ ವಿಚಾರದಲ್ಲೂ

ಡಿಕೆಶಿ, ಸಿದ್ದರಾಮಯ್ಯ ಜಂಗೀಕುಸ್ತಿ



ಬೆಂಗಳೂರು, ಮೇ 19 (ಕೆಎಂಶಿ)–ರಾಜ್ಯಸಭೆ ಮತ್ತು ವಿಧಾನಪರಿಷತ್ ಅಭ್ಯರ್ಥಿಗಳ ಆಯ್ಕೆ ವಿಚಾರದಲ್ಲೂ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ.ಶಿವಕುಮಾರ್, ವಿಧಾನಸಭೆಯ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ನಡುವೆ ಜಂಗೀಕುಸ್ತಿ ನಡೆದಿದೆ.

ಇದರಿಂದ ನಿನ್ನೆ ನಡೆಯಬೇಕಿದ್ದ ಸಭೆಯು ಮುಂದೂಡಲ್ಪಟ್ಟಿದೆ. ತಮ್ಮ ತಮ್ಮ ಅಭ್ಯರ್ಥಿಗಳನ್ನು ಕಣಕ್ಕಿಳಿಸಲು ಪಟ್ಟು ಹಿಡಿದಿರುವುದರಿಂದ ಅಭ್ಯರ್ಥಿಗಳ ಆಯ್ಕೆ ಗೊಂದಲಕ್ಕೆ ಬಿದ್ದಿದೆ. ಈ ಮಧ್ಯೆ ಸಿದ್ದರಾಮಯ್ಯ ತಮ್ಮ 2 ದಿನಗಳ ಪ್ರವಾಸ ರದ್ದುಗೊಳಿಸಿ, ಬೆಂಗಳೂರಿನಲ್ಲೇ ▶ 4ನೇ ಪುಟಕ್ಕೆ

ಬ್ಯಾಗ್ ಖರೀದಿ, ಈಜುಕೊಳ, ಜಿಮ್ ನಿರ್ಮಾಣ, ಕೊರೊನಾ ಸಾವಿನ ತಪ್ಪು ಮಾಹಿತಿ ಸಂಬಂಧ

ರೋಹಿಣಿ ಸಿಂಧೂರಿ ವಿರುದ್ಧ ತನಿಖೆಗೆ ಆದೇಶ

ಹಿರಿಯ ಐಎಎಸ್ ಅಧಿಕಾರಿ ಎನ್.ಜಯರಾಂ ತನಿಖಾಧಿಕಾರಿ



ರೋಹಿಣಿ ಸಿಂಧೂರಿ



ಎನ್.ಜಯರಾಮ್

ಬೆಂಗಳೂರು,ಮೇ 19–ಮಾರುಕಟ್ಟೆ ದರಕ್ಕಿಂತ ಹೆಚ್ಚಿನ ದರದಲ್ಲಿ ಬಟ್ಟೆ ಬ್ಯಾಗ್ ಖರೀದಿ, ಜಿಲ್ಲಾಧಿಕಾರಿಗಳ ಅಧಿಕೃತ ನಿವಾಸವಾದ ಪಾರಂಪರಿಕ ಕಟ್ಟಡ ವ್ಯಾಪ್ತಿಯಲ್ಲಿ ಈಜುಕೊಳ, ಜಿಮ್ ನಿರ್ಮಾಣ ಹಾಗೂ ಕೊರೊನಾ ಸೋಂಕಿನಿಂದ ಮೃತಪಟ್ಟವರ ಬಗ್ಗೆ ತಪ್ಪು ಮಾಹಿತಿ ನೀಡಿರುವ ಆರೋಪಗಳ ಮೇರೆಗೆ ಮೈಸೂರಿನ ಹಿಂದಿನ ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ ವಿರುದ್ಧ ತನಿಖೆಗೆ ಸರ್ಕಾರ ಆದೇಶ ಹೊರಡಿಸಿದ್ದು, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಅಧ್ಯಕ್ಷರಾದ ಹಿರಿಯ ಐಎಎಸ್ ಅಧಿಕಾರಿ ಎನ್.ಜಯರಾಂ ಅವರನ್ನು ತನಿಖಾಧಿಕಾರಿಯಾಗಿ ನೇಮಿಸಲಾಗಿದೆ.

ಮೈಸೂರು ಜಿಲ್ಲಾ ವ್ಯಾಪ್ತಿಯಲ್ಲಿರುವ ನಗರ ಮತ್ತು ಗ್ರಾಮಾಂತರ ಸ್ಥಳೀಯ ಸಂಸ್ಥೆಗಳಿಗೆ ಪರಿಸರ ಸ್ನೇಹಿ ಬಟ್ಟೆ ಬ್ಯಾಗ್‌ಗಳನ್ನು ಖರೀದಿಸುವ ಸಂಬಂಧ 2021ರ ಏಪ್ರಿಲ್ 9 ರಂದು ಮೈಸೂರು ಜಿಲ್ಲಾಧಿಕಾರಿಗಳ ಕಚೇರಿಯಿಂದ ಕಾರ್ಯಾದೇಶ ಹೊರಡಿಸಲಾಗಿತ್ತು. ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದಿಂದ ಬಟ್ಟೆ ಬ್ಯಾಗ್‌ಗಳ ದರಪಟ್ಟಿ ಪಡೆದಿದ್ದು, ಅದರಂತೆ 4 ಕೆಜಿ ಮತ್ತು 10 ಕೆಜಿ ಸಾಮರ್ಥ್ಯದ ಬಟ್ಟೆ ಬ್ಯಾಗ್‌ವೊಂದಕ್ಕೆ ಜಿಎಸ್‌ಟಿ ಸೇರಿ 52 ರೂ.ಗಳಂತೆ 14,71,458 ಬ್ಯಾಗ್ ಖರೀದಿಸಲು ರೋಹಿಣಿ ಸಿಂಧೂರಿ ಅವರು ಅನುಮೋದನೆ ನೀಡಿದ್ದರು. ಸದರಿ ಬಟ್ಟೆ ಬ್ಯಾಗ್ ವಿತರಣೆ ಸಂಬಂಧ ಮೈಸೂರು ನಗರಪಾಲಿಕೆ ಜಿಪಂ ವ್ಯಾಪ್ತಿಗೆ ಒಳಪಡುವ ಗ್ರಾಪಂ ಹಾಗೂ ಪುರಸಭೆಗಳ ಸಾಮಾನ್ಯ ಸಭೆಯಲ್ಲಿ ಯಾವುದೇ ವಿಧವಾದ ಅನುಮೋದನೆ ಪಡೆಯದೇ ಈ ಸಂಸ್ಥೆಗಳಲ್ಲಿನ ಜನಪ್ರತಿನಿಧಿಗಳ ಅಧಿಕಾರವನ್ನು ಮೊಟಕುಗೊಳಿಸುವ ಉದ್ದೇಶದಿಂದ ರೋಹಿಣಿ ಸಿಂಧೂರಿ ಈ ಕಾರ್ಯಾದೇಶ ಹೊರಡಿಸಿದ್ದರು. ಮುಕ್ತ ಮಾರುಕಟ್ಟೆಯಲ್ಲಿ 10ರಿಂದ 13 ರೂ.ಗಳಿಗೆ ಚಿಲ್ಲರೆ ಮಾರಾಟದಲ್ಲಿ ದೊರೆಯುವ ಬ್ಯಾಗ್‌ಗಳಿಗೆ ಸಗಟು ದರದಲ್ಲಿ 52 ರೂ. ನಿಗದಿಪಡಿಸಿ ಅನುಮೋದನೆ ನೀಡಿರುವುದು ಸಾರ್ವಜನಿಕ ಹಣದ ಅಪವ್ಯಯವಾಗಿದೆ ಎಂದು ಕಾಗದ ಪತ್ರಗಳ ಸಮಿತಿ ಅಧ್ಯಕ್ಷರೂ ಆದ ಶಾಸಕ ಸಾ.ರಾ.ಮಹೇಶ್ 2021ರ ಸೆಪ್ಟೆಂಬರ್ 3ರಂದು ಸರ್ಕಾರಕ್ಕೆ ▶ 4ನೇ ಪುಟಕ್ಕೆ

ಚುಂಚನಕಟ್ಟೆ ಶ್ರೀರಾಮ ಸಕ್ಕರೆ ಕಾರ್ಖಾನೆ ಮೇ.ನಿರಾಣಿ ಶುಗರ್ಸ್‌ಗೆ 40 ವರ್ಷಕ್ಕೆ ಗುತ್ತಿಗೆ

● 120 ಕೋಟಿ ರೂ. ಗುತ್ತಿಗೆ ಮೊತ್ತ ● ರೈತರ ಕಬ್ಬಿಗೆ ಸಕಾಲದಲ್ಲಿ ಬಿಲ್ ಪಾವತಿ ಷರತ್ತು



ಮೈಸೂರು, ಮೇ 19–ಕೆ.ಆರ್.ನಗರ ತಾಲೂಕು ಚುಂಚನಕಟ್ಟೆಯಲ್ಲಿರುವ ಶ್ರೀರಾಮ ಸಕ್ಕರೆ ಕಾರ್ಖಾನೆಯನ್ನು ಮೇ.ನಿರಾಣಿ ಶುಗರ್ಸ್‌ಗೆ 40 ವರ್ಷ ಗುತ್ತಿಗೆಗೆ ನೀಡಲು ರಾಜ್ಯ ಸರ್ಕಾರ ಅನುಮೋದಿಸಿದ್ದು, ಗುತ್ತಿಗೆ ಮೊತ್ತವನ್ನು 120 ಕೋಟಿ ರೂ.ಗಳಿಗೆ ನಿಗದಿಪಡಿಸಲಾಗಿದೆ.

ಗುತ್ತಿಗೆ ನೀಡುವ ಕಾರ್ಯಾದೇಶವನ್ನು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ನೀಡತಕ್ಕದ್ದು. ಗುತ್ತಿಗೆ ಒಪ್ಪಂದ ಏರ್ಪಟ್ಟ ಮೂರು ತಿಂಗಳ ಒಳಗಾಗಿ ಗುತ್ತಿಗೆದಾರರನ್ನು ಸಂಬಂಧಪಟ್ಟ ನೋಂದಣಿ ಪ್ರಾಧಿಕಾರದಲ್ಲಿ ನೋಂದಾಯಿಸತಕ್ಕದ್ದು. ಭದ್ರತಾ ಠೇವಣಿ ಮೊತ್ತ 50 ಲಕ್ಷ ರೂ.ಗಳನ್ನು ನಿರಾಣಿ ಶುಗರ್ಸ್‌ನವರು ಕಾರ್ಖಾನೆಗೆ ಪಾವತಿಸಿದ ನಂತರ ಗುತ್ತಿಗೆ ಕರಾರು ಒಪ್ಪಂದವನ್ನು ಮಾಡಿಕೊಳ್ಳತಕ್ಕದ್ದು. ಗುತ್ತಿಗೆದಾರರು ಮುಂಗಡ ಹಣ 2.50 ಕೋಟಿಗಳನ್ನು ಕರಾರಿನ ಪ್ರಕಾರ ಪಾವತಿಸತಕ್ಕದ್ದು. ಭದ್ರತಾ ಠೇವಣಿ ಹಣ 50 ಲಕ್ಷ ರೂ. ಮುಂಗಡ ಹಣ 2.50 ಕೋಟಿ ರೂ. ಹಾಗೂ ವಾರ್ಷಿಕ ಗುತ್ತಿಗೆ ಹಣವನ್ನು ವ್ಯವಸ್ಥಾಪಕ ನಿರ್ದೇಶಕರು, ಶ್ರೀರಾಮ ಸಹಕಾರಿ ಸಕ್ಕರೆ ಕಾರ್ಖಾನೆ ಮತ್ತು ▶ 4ನೇ ಪುಟಕ್ಕೆ

ಮೈಸೂರು ಮಿತ್ರ ಶುಕ್ರವಾರ 20 ಮೇ 2022



ಗುರುವಾರ ಹುಟ್ಟುಹಬ್ಬ ಆಚರಿಸಿಕೊಂಡ ಮೈಸೂರಿನ ಪ್ರಥಮ ದರ್ಜೆ ಗುತ್ತಿಗೆದಾರರು ಹಾಗೂ ಹೆಸರಾಂತ ಉದ್ಯಮಿ ಗೋವಿಂದೇಗೌಡ ದಂಪತಿಯನ್ನು ರಿಯೋ ಮೆರಿಡಿಯನ್ ಕಿರಣ್, ಶ್ರೀನಿವಾಸ್, ಭೈರವ, ಜಗದೀಶ್, ಮಧು ಅಭಿನಂದಿಸಿ, ಶುಭಾಶಯ ಕೋರಿದರು.

ರೈಲ್ವೆ ಕೊಡವ ಅಸೋಸಿಯೇಷನ್‌ನ ನೂತನ ಪದಾಧಿಕಾರಿಗಳು



ಮೈಸೂರು, ಮೇ 19– ಮೇ 15ರಂದು ಮೈಸೂರಿನ ವಿಜಯನಗರದಲ್ಲಿರುವ 'ಸಿಂಪ್ಲಿ ಕೊಡವಾಸ್'ನಲ್ಲಿ ನಡೆದ ವಾರ್ಷಿಕ ಸಭೆಯಲ್ಲಿ ರೈಲ್ವೆ ಕೊಡವ ಅಸೋಸಿಯೇಷನ್‌ನ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ಇದೇ ವೇಳೆ ಸೇವೆಯಿಂದ ನಿವೃತ್ತಿ ಹೊಂದಿದ ಬಾಚಮಾಡ ವಸಂತ ಮತ್ತು ಕೊಳುವಂಡ ಚೆಂಗಪ್ಪ ಅವರನ್ನು ಅವರ ಕುಟುಂಬ ಸದಸ್ಯರ ಸಮ್ಮುಖದಲ್ಲಿ ಸನ್ಮಾನಿಸಲಾಯಿತು. ಚಿತ್ರದಲ್ಲಿ (ಎಡದಿಂದ): ಬಾಳೆಯಡ ಹೇಮಲತಾ–ಖಜಾಂಚಿ, ನಲ್ಲಮಾಡ ಕಾರಿಯಪ್ಪ–ಕಾರ್ಯದರ್ಶಿ, ಕುಲ್ಲಚಂಡ ಕೇಸರಿ–ಅಧ್ಯಕ್ಷ, ನೂರೇರಾ ಯಶು ಬಿಪಿನ್–ಜಂಟಿ ಕಾರ್ಯದರ್ಶಿ; (ನಿಂತಿರುವವರು ಎಡದಿಂದ): ಕೊಳುವಂಡ ಚೆಂಗಪ್ಪ, ಚೇಂದಂಡ ನಿರ್ಮಲ ಸುಬ್ರಮಣಿ, ಬಾಚಮಾಡ ವಸಂತ–ಸಮಿತಿ ಸದಸ್ಯರನ್ನು ಕಾಣಬಹುದು.



ಮೈಸೂರು ಜಿಲ್ಲಾ ಪಂಚಾಯಿತಿ ಕಚೇರಿ ಎದುರು 'ವಾಮಿಕ ಅಸೋಸಿಯೇಟ್ಸ್'ನ ವಕೀಲರ ನೂತನ ಕಚೇರಿಯನ್ನು ಗುರುವಾರ ಹಿರಿಯ ವಕೀಲ ಪಿ.ಡಿ.ಮೇದಪ್ಪ ಉದ್ಘಾಟಿಸಿದರು. ಈ ವೇಳೆ ಶಾಸಕರಾದ ಸಾ.ರಾ.ಮಹೇಶ್, ಸಿ.ಎನ್.ಮಂಜೇಗೌಡ, ಮಾವಿನಹಳ್ಳಿ ಸಿದ್ದೇಗೌಡ, ಮುಡಾ ಕಾರ್ಯದರ್ಶಿ ವೆಂಕಟರಾಜು, ವಕೀಲರಾದ ಗಂಗಾಧರಗೌಡ, ಆರ್.ಸುರೇಶ್‌ಕುಮಾರ್ ಇನ್ನಿತರರು ಉಪಸ್ಥಿತರಿದ್ದರು.

ಇಂದು, ನಾಳೆ ಮಕ್ಕಳಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ

ಮೈಸೂರು,ಮೇ 19–ಮೈಸೂರಿನ ದಟ್ಟಗಳ್ಳಿಯಲ್ಲಿರುವ ನಯನ ಕುಮಾರ್ಸ್ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ವತಿಯಿಂದ ಮೇ 20 ಮತ್ತು 21ರಂದು ಬೆಳಗ್ಗೆ 10ರಿಂದ ಸಂಜೆ 5ರವರೆಗೆ ಆಸ್ಪತ್ರೆ ಆವರಣದಲ್ಲಿ ಮಕ್ಕಳಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ ಏರ್ಪಡಿಸಿದೆ. ಮಾಹಿತಿಗೆ ಮೊ. 9513310100, 8762850960 ಮೂಲಕ ಸಂಪರ್ಕಿಸಬಹುದು. ಶಿಬಿರದಲ್ಲಿ ಕುಪೋಷಣೆ, ರಕ್ತಹೀನತೆ, ಬಿಟ್ಟು–ಬಿಟ್ಟು ಬರುವ ಜ್ವರ, ಭೇದಿ, ಹೊಟ್ಟೆನೋವು, ಅಸ್ತಮಾ, ಉಬ್ಬಸ, ಬೊಜ್ಜುತನ, ಅತಿಸಾರ, ಜಂತುಹುಳು ಸಮಸ್ಯೆ, ಕಲಿಕಾ ಸಾಮರ್ಥ್ಯದಲ್ಲಿ ಹಿನ್ನಡೆ ಸೇರಿದಂತೆ ಇನ್ನಿತರ ತೊಂದರೆಗಳಿಗೆ ಉಚಿತ ಸಮಾಲೋಚನೆ ಮತ್ತು ಸಲಹೆ ನೀಡಲಾಗುವುದು ಎಂದು ಆಸ್ಪತ್ರೆ ಪ್ರಕಟಣೆ ತಿಳಿಸಿದೆ.



ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರ 80ನೇ ವರ್ಧಂತಿ ಅಂಗವಾಗಿ ಮೇಕೆದಾಟುವಿನಿಂದ ದತ್ತಪೀಠದ ಶ್ರೀ ದತ್ತ ವಿಜಯಾನಂದ ಸ್ವಾಮೀಜಿ ವಿಶ್ವಶಾಂತಿ ಪಾದಯಾತ್ರೆ ಸಂಪನ್ನಗೊಳಿಸಿ, ಆಶ್ರಮ ಪ್ರವೇಶಿಸಿದ ವೇಳೆ ವಿಪ್ರ ಮುಖಂಡ ನಂ.ಶ್ರೀಕಂಠಕುಮಾರ್, ಪುಷ್ಪ ಅರ್ಪಿಸಿ, ಭಕ್ತಿಪೂರ್ವಕವಾಗಿ ಬರಮಾಡಿಕೊಂಡರು.

ಕಾವೇರಿ ಹಾಸ್ಪಿಟಲ್‌ನಲ್ಲಿ ಅಂತರ ರಾಷ್ಟ್ರೀಯ ದಾದಿಯರ ದಿನಾಚರಣೆ



ಮೈಸೂರು, ಮೇ 19–ಅಂತರರಾಷ್ಟ್ರೀಯ ದಾದಿಯರ ದಿನದ ಅಂಗವಾಗಿ ಕಾವೇರಿ ಹಾರ್ಟ್ ಅಂಡ್ ಮಲ್ಟಿ ಸ್ಪೆಷಾಲಿಟಿ ಹಾಸ್ಪಿಟಲ್‌ನಲ್ಲಿ ಸಮಾರಂಭವನ್ನು ಆಯೋಜಿಸಲಾಗಿತ್ತು.

ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿದ್ದ ಮೈಸೂರು ಜಿಲ್ಲಾ ಪಂಚಾಯ್ತಿ ಸಿಇಓ ಕಾರ್ಯಕ್ರಮ ಶ್ರೀಮತಿ ಬಿ.ಆರ್.ಪೂರ್ಣಿಮಾ ಕಾರ್ಯಕ್ರಮ ಉದ್ಘಾಟಿಸಿದರು. ಅವರು ತಮ್ಮ ಭಾಷಣದಲ್ಲಿ, ಶುಶ್ರೂಷಕರು ಪೂರ್ಣ ಹೃದಯದಿಂದ ಸಮರ್ಪಣಾ ಭಾವ ಮತ್ತು ಪ್ರಾಮಾಣಿಕತೆಯಿಂದ ಸೇವೆ ಸಲ್ಲಿಸಬೇಕು ಎಂದು ಅಭಿಪ್ರಾಯಪಟ್ಟರು.

ಸಮಾರಂಭದ ಅಧ್ಯಕ್ಷತೆಯನ್ನು ಆಸ್ಪತ್ರೆ ಅಧ್ಯಕ್ಷ ಡಾ. ಜಿ.ಆರ್.ಚಂದ್ರಶೇಖರ್ ವಹಿಸಿದ್ದರು. ವ್ಯವಸ್ಥಾಪಕ ನಿರ್ದೇಶಕರಾದ ಡಾ. ಸರಳಾ ಚಂದ್ರಶೇಖರ್, ಆಸ್ಪತ್ರೆಯ ದಾದಿಯರು, ಅರೆವೈದ್ಯಕೀಯ ಸಿಬ್ಬಂದಿ, ವೈದ್ಯರು, ಸಲಹೆಗಾರರು ಮತ್ತು ಸಹಾಯಕ ಸಿಬ್ಬಂದಿ ಈ ವೇಳೆ ಉಪಸ್ಥಿತರಿದ್ದರು. ಕಾರ್ಯಕ್ರಮದ ನಂತರ ಹಾಸ್ಪಿಟಲ್ ದಾದಿಯರಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು. ಈ ಸಂದರ್ಭದಲ್ಲಿ ಇಬ್ಬರು ಖ್ಯಾತ ದಾದಿಯರಾದ ಸಿಸ್ಟರ್ ಸಲ್ಮಾ ಕೆ.(ಪ್ರಾಥಮಿಕ ಆರೋಗ್ಯ ಅಧಿಕಾರಿ, ಜಬಿ ಪಾಳ್ಯ, ಮೈಸೂರು–2), ಬ್ರದರ್ ಸಂದೀಪ್ ಕುಮಾರ್ (ಎ.ಜೆ.ನರ್ಸಿಂಗ್ ಅಧಿಕಾರಿ, ಬಿ.ಡಿ.ಕಾರ್ಮಿಕರ ಕೇಂದ್ರ ಆಸ್ಪತ್ರೆ, ಮೈಸೂರು) ಅವರನ್ನು ಸನ್ಮಾನಿಸಲಾಯಿತು.

ಮೈಸೂರಿನ ಸಿಎಫ್‌ಟಿಆರ್‌ಐನಲ್ಲಿ ಮೂರು ದಿನಗಳ 'ಟೆಕ್‌ಭಾರತ್' ಕೃಷಿ, ಆಹಾರ ತಂತ್ರಜ್ಞಾನ ಮೇಳ ಆರಂಭ

ದೇಶದ ವಿವಿಧ ಭಾಗಗಳ ಉದ್ಯಮಿಗಳಿಂದ 100ಕ್ಕೂ ಹೆಚ್ಚು ಮಳಿಗೆಗಳ ಬೃಹತ್ ವಸ್ತುಪ್ರದರ್ಶನಕ್ಕೂ ಚಾಲನೆ

ಮೈಸೂರು, ಮೇ 19 (ಆರ್‌ಕೆ)– ಮೈಸೂರಿನ ಸಿಎಫ್‌ಟಿಆರ್‌ಐನಲ್ಲಿ ಮೂರು ದಿನಗಳ 'ಟೆಕ್‌ಭಾರತ್ –2022' ಕೃಷಿ, ಆಹಾರ ಸಂಸ್ಕರಣೆ ಮೇಳ ಹಾಗೂ ವಸ್ತು ಪ್ರದರ್ಶನ ಇಂದಿನಿಂದ ಆರಂಭವಾಯಿತು.

ಲಘು ಉದ್ಯೋಗ ಭಾರತಿ, ಐಎಂಎಸ್ ಫೌಂಡೇಷನ್ ಮತ್ತು ಸಿಎಫ್‌ಟಿಆರ್‌ಐ ಸಂಯುಕ್ತಾಶ್ರಯದಲ್ಲಿ ಆಯೋಜಿಸಿರುವ ಟೆಕ್‌ಭಾರತ್–2022 3ನೇ ಆವೃತ್ತಿಯ ಮೇಳವನ್ನು ಕೇಂದ್ರ ಕೃಷಿ ಮತ್ತು ರೈತರ ಕ್ಷೇಮಾಭಿವೃದ್ಧಿ ಸಚಿವ ಕೈಲಾಸ್ ಚೌಧರಿ ಗುರುವಾರ ಬೆಳಗ್ಗೆ ಉದ್ಘಾಟಿಸಿದರು.

ಕೃಷಿ ಸಚಿವ ಬಿ.ಸಿ. ಪಾಟೀಲ್, ಕೇಂದ್ರ ವಾಣಿಜ್ಯ ಇಲಾಖೆ ಐಎಇಡಿಎ ಅಧ್ಯಕ್ಷ ಡಾ.ಎಂ.ಅಂಗಮುತ್ತು, ಇನ್‌ಫೋಸಿಸ್ ಮಾಜಿ ಸಿಇಓ ಕ್ರಿಸ್ ಗೋಪಾಲ ಕೃಷ್ಣನ್, ಸಿಎಫ್‌ಟಿಆರ್‌ಐ ನಿರ್ದೇಶಕಿ ಡಾ.ಶ್ರೀದೇವಿ ಅನ್ನಪೂರ್ಣಸಿಂಗ್, ಲಘು ಉದ್ಯೋಗ ಭಾರತಿ ರಾಜ್ಯ ಅಧ್ಯಕ್ಷ ಸಚಿನ್ ಬಿ.ಸಬ್ನಿಸ್, ಉಪಾಧ್ಯಕ್ಷೆ ಛಾಯಾ ನಂಜಪ್ಪ, ಕಾರ್ಯದರ್ಶಿ ಭೋಜರಾಜ್, ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಸೇರಿದಂತೆ ಹಲವು ಗಣ್ಯರು ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿದ್ದರು.

ಅಗ್ರಿಟೆಕ್, ಫುಡ್‌ಟೆಕ್ ಮತ್ತು ಫುಡ್ ಪ್ರೊಸೆಸ್ಸಿಂಗ್ ಟೆಕ್ನಾಲಜಿ ಕುರಿತಂತೆ ಮೂರು ದಿನಗಳ ಕಾಲ ನಡೆಯುವ ವಿವಿಧ ಗೋಷ್ಠಿಗಳಲ್ಲಿ ದೇಶ–ವಿದೇಶಗಳ ಸಂಶೋಧಕರು ತಂತ್ರಜ್ಞರು, ಪ್ರಗತಿಪರ ರೈತರು, ಆಹಾರ ಉತ್ಪಾದನಾ ಕ್ಷೇತ್ರದ ಉದ್ಯಮಿಗಳು ಭಾಗವಹಿಸಿ ಚಿಂತನ ಮಂಥನ ನಡೆಸುವರು.

Transforming India's Food tech and agronomic landscape ಧ್ಯೇಯದೊಂದಿಗೆ ಸಿಎಫ್‌ಟಿಆರ್‌ಐ ಆವರಣದಲ್ಲಿ ಏರ್ಪಡಿಸಿರುವ ವಸ್ತುಪ್ರದರ್ಶನದಲ್ಲಿ ದೇಶದ ವಿವಿಧ ಭಾಗಗಳ ಉದ್ಯಮ, ಕೈಗಾರಿಕೆ, ತಂತ್ರಜ್ಞಾನ ಅಭಿವೃದ್ಧಿ ಕಂಪನಿಗಳ 100ಕ್ಕೂ ಹೆಚ್ಚು ಮಳಿಗೆಗಳನ್ನು ತೆರೆಯಲಾಗಿದ್ದು, ಕೃಷಿ ಮತ್ತು ಆಹಾರ ತಂತ್ರಜ್ಞಾನ ಕುರಿತು ಪ್ರಾತ್ಯಕ್ಷಿಕೆ ನಡೆಸಲಾಗುತ್ತಿದೆ. ಸಿಎಫ್‌ಟಿಆರ್‌ಐ ಅಭಿವೃದ್ಧಿಪಡಿಸಿದ ರಾಗಿ ಆಧಾರಿತ ಬ್ರೆಡ್ ತಯಾರಿಕೆ (Instant Beverage mix from malted ragi) ಉತ್ಪನ್ನವನ್ನು ಸಚಿವ ಬಿ.ಸಿ.ಪಾಟೀಲ್ ಬಿಡುಗಡೆ ಮಾಡಿದರು. ಸಂಸ್ಥೆ ಸಿದ್ಧಪಡಿಸಿರುವ ಮೊಬೈಲ್ ಫುಡ್ ಪ್ರೊಸೆಸ್ಸಿಂಗ್ ಮತ್ತು ಡೆಮಾನ್‌ಸ್ಟ್ರೇಷನ್ ಘಟಕವನ್ನು ಕೇಂದ್ರ ಸಚಿವ ಕೈಲಾಶ್ ಚೌಧರಿ ಉದ್ಘಾಟಿಸಿದರು.

ಸಿಎಫ್‌ಟಿಆರ್‌ಐನಿಂದ ಅಭಿವೃದ್ಧಿಪಡಿಸಿ ಉಚಿತವಾಗಿ ಸಮರ್ಪಣೆ ಮಾಡಿರುವ 22 ತಂತ್ರಜ್ಞಾನಗಳ ಮಾಹಿತಿ ಹೊಂದಿರುವ ಪುಸ್ತಕವನ್ನು ಬಿಡುಗಡೆ ಮಾಡಿದರು. ಆಮ್ಲಕ್ಯಾಂಡಿ, ಸೆರಿಯಲ್ ಫ್ಲೇಕ್ಸ್, ರೈಸ್, ಚಿಕನ್ ಸೂಪ್ ಮಿಕ್ಸ್, ಕಾಂಪೋಸಿಟಿವ್ ರಾಗಿ ಮಿಕ್ಸ್, ಕ್ಯೂರಿಂಗ್ ಆಫ್ ನ್ಯೂ ಪ್ಯಾಡಿ, ಫ್ರೂಟ್ ಸ್ಪ್ರೆಡ್, ಜಿಂಜರ್ ಡೀಹೈಡ್ರೇಷನ್, ಗ್ರೀನ್ ಚಿಲ್ಲಿಸಾಸ್, ಪಾರ್ ಬಾಯ್ಲಿಂಗ್ ಆಫ್ ಪ್ಯಾಡಿ, ಪ್ರೋಟೀನ್ ಬನ್ಸ್, ರೆಡಿಮಿಕ್ಸ್ ಇಡ್ಲಿ ರೆಡಿಮಿಕ್ಸ್ ಸಾಂಬಾರ್, ರೀಟೇಲ್ ಪ್ಯಾಕ್‌ಗಳಲ್ಲಿ ದೋಸೆ, ರಿಫೈನ್ಡ್ ಮಿಲೆಟ್ ಫ್ಲೋರ್, ರೈಸ್ ಮಿಲ್ಕ್ ಮಿಕ್ಸ್, ಟರ್ಮರಿಕ್ ಕ್ಯೂರಿಂಗ್, ಲೀಫ್ ಕಫ್ ಮೆಷಿನ್, ಹ್ಯಾಂಡ್ ಆಪರೇಟಿವ್ ಪಾಪಡ್ ಪ್ರೆಸ್, ಪೆಡಲ್ ಆಪರೇಟೆಡ್ ಮಿಲೆಟ್ ಡೆಹುಲ್ಲರ್ ತಂತ್ರಜ್ಞಾನಗಳನ್ನು ಸಂಸ್ಥೆಯು ಉಚಿತವಾಗಿ ನೀಡುತ್ತಿದ್ದು, ಸಿಎಫ್‌ಟಿಆರ್‌ಐ ವೆಬ್‌ಸೈಟ್‌ನಿಂದ ಅವುಗಳನ್ನು ಸಾರ್ವಜನಿಕರು ಡೌನ್‌ಲೋಡ್ ಮಾಡಿಕೊಂಡು ಉದ್ದಿಮೆ ಆರಂಭಿಸಬಹುದಾಗಿದೆ. ಈ ವೇಳೆ ಡ್ರೋನ್ ಆಧಾರಿತ ತಂತ್ರಜ್ಞಾನ ಕುರಿತಂತೆ ಪ್ರಾತ್ಯಕ್ಷಿಕೆ ಮಾಡಲಾಗುತ್ತಿದೆ. ಬೆಳಗ್ಗೆ 10ರಿಂದ ಸಂಜೆ 6 ಗಂಟೆಯವರೆಗೆ ಸಾರ್ವಜನಿಕರು, ಯುವ ಉದ್ಯಮಿಗಳು, ವೀಕ್ಷಿಸಲು ವಸ್ತುಪ್ರದರ್ಶನಕ್ಕೆ ಉಚಿತ ಪ್ರವೇಶವಿರುತ್ತದೆ. ಕೃಷಿ, ಆಹಾರ ಕ್ಷೇತ್ರಗಳಲ್ಲಿ ನಿರತರಾದ ಉತ್ಸಾಹಿ ನವ ಉದ್ಯಮಿ ಆಕಾಂಕ್ಷಿಗಳು, ಸಂಶೋಧಕರು, ತಂತ್ರಜ್ಞರು ದೇಶ ವಿದೇಶಗಳಿಂದ ಟೆಕ್‌ಭಾರತ್ ಮೇಳದಲ್ಲಿ ಭಾಗವಹಿಸಿದ್ದಾರೆ.



ಮೈಸೂರಿನ ಸಿಎಫ್‌ಟಿಆರ್‌ಐನಲ್ಲಿ ಗುರುವಾರ ಆರಂಭವಾದ ಮೂರು ದಿನಗಳ 'ಟೆಕ್‌ಭಾರತ್' ಮೇಳವನ್ನು ಕೇಂದ್ರ ಕೃಷಿ ಸಚಿವ ಕೈಲಾಸ್ ಚೌಧರಿ ಉದ್ಘಾಟಿಸಿದರು. (ಎಡದಿಂದ) ಸಿಎಫ್‌ಟಿಆರ್‌ಐ ನಿರ್ದೇಶಕಿ ಡಾ.ಶ್ರೀದೇವಿ ಅನ್ನಪೂರ್ಣ ಸಿಂಗ್, ಕೇಂದ್ರ ಕೃಷಿ–ಸಂಸ್ಕರಣಾ ಆಹಾರ ಉತ್ಪನ್ನಗಳ ರಫ್ತು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ.ಎಂ.ಅಂಗಮುತ್ತು, ರಾಜ್ಯ ಕೃಷಿ ಸಚಿವ ಬಿ.ಸಿ.ಪಾಟೀಲ್, ಇನ್‌ಫೋಸಿಸ್ ಮಾಜಿ ಸಿಇಓ ಗೋಪಾಲ್‌ಕೃಷ್ಣನ್, ಲಘು ಉದ್ಯೋಗ್ ಭಾರತಿ ರಾಜ್ಯ ಅಧ್ಯಕ್ಷ ಸಚಿನ್ ಬಿ.ಸಬ್‌ನಿಸ್ ಚಿತ್ರದಲ್ಲಿದ್ದಾರೆ.

ಕೃಷಿಗೆ ಕೇಂದ್ರ ಬಜೆಟ್‌ನಲ್ಲಿ ಹೆಚ್ಚಿನ ಅನುದಾನ ಮೀಸಲು

ಕೇಂದ್ರ ಕೃಷಿ ಸಚಿವ ಕೈಲಾಸ್ ಚೌಧರಿ

ಮೈಸೂರು: ಕೃಷಿಗೆ ಕೇಂದ್ರ ಸರ್ಕಾರವು ಹೆಚ್ಚಿನ ಅನುದಾನ ಮೀಸಲಿರಿಸಿ, ರೈತರ ಆದಾಯ ದ್ವಿಗುಣಗೊಳಿಸಲು ಆದ್ಯತೆ ನೀಡಲಾಗಿದೆ ಎಂದು ಕೇಂದ್ರ ಕೃಷಿ ಮತ್ತು ರೈತರ ಕ್ಷೇಮಾಭಿವೃದ್ಧಿ ಸಚಿವ ಕೈಲಾಸ್ ಚೌಧರಿ ತಿಳಿಸಿದ್ದಾರೆ.

ಈ ಹಿಂದೆ ಕೃಷಿಯನ್ನು ನಿರ್ಲಕ್ಷಿಸಲಾಗುತ್ತಿತ್ತು. ರೈತರ ಬೆಳೆಗೆ ಮಾರುಕಟ್ಟೆ, ಉತ್ತಮ ಬೆಲೆ ಸಿಗದ ಕಾರಣ ಕೃಷಿ ಮಾಡಲು ಹಿಂದೇಟು ಹಾಕುತ್ತಿದ್ದರಿಂದ ಈ ಕ್ಷೇತ್ರದ ಅಭಿವೃದ್ಧಿಗೆ ಪ್ರಧಾನಿ ಮೋದಿ ಅವರು ಹೆಚ್ಚಿನ ಆದ್ಯತೆ ನೀಡಿದ್ದಾರೆ ಎಂದರು.

ಕೇಂದ್ರ ಬಜೆಟ್‌ನಲ್ಲಿ ಕೃಷಿಗೆ ಕೇವಲ 23,000 ಕೋಟಿ ಮೀಸಲಿರಿಸುತ್ತಿದ್ದ ಅನುದಾನವನ್ನು ನಮ್ಮ ಸರ್ಕಾರದಲ್ಲಿ 1 ಲಕ್ಷ ಕೋಟಿಗೂ ಅಧಿಕ ಹಣವನ್ನು ನೀಡುತ್ತಿದ್ದು, ವ್ಯವಸಾಯ ಮಾಡುವ ರೈತರಿಗೆ ಒತ್ತಾಸೆಯಾಗಿ ಹಲವು ಯೋಜನೆಗಳನ್ನು ನೀಡುತ್ತಿರುವುದರಿಂದ ಯುವಕರೂ ಸಹ ಕೃಷಿಯತ್ತ ಆಸಕ್ತಿ ತೋರುತ್ತಿದ್ದಾರೆ ಎಂದು ಸಚಿವರು ನುಡಿದರು.

ಕೃಷಿ, ಆಹಾರ ಉತ್ಪಾದನೆಗೆ ಬೇಕಾದ ಅತ್ಯಾಧುನಿಕ ತಂತ್ರಜ್ಞಾನ ವರ್ಗಾಯಿಸುವ ಮೂಲಕ ಕೃಷಿ ಕ್ಷೇತ್ರವನ್ನು ಸದೃಢಗೊಳಿಸಲಾಗುತ್ತಿದ್ದು, ಲಘು ಉದ್ಯೋಗ ಭಾರತಿ ಸಂಸ್ಥೆಯಿಂದ ಹಲವು ಕಾರ್ಯಕ್ರಮಗಳನ್ನು ಸರ್ಕಾರ ಅನುಷ್ಠಾನಗೊಳಿಸುತ್ತಿರುವ ಕಾರಣ ಲಕ್ಷಾಂತರ ಉದ್ಯೋಗ ಸೃಷ್ಟಿಯಾಗಿದೆ. ಯುವ ಉದ್ಯಮಿಗಳಿಗೂ ಸಣ್ಣ, ಅತೀ ಸಣ್ಣ ಉದ್ಯಮ ನಡೆಸಲು ಸಹಕಾರಿಯಾಗಿದೆ. ರೈತರಿಗಾಗಿ ಕಿಸಾನ್ ಸಮ್ಮಾನ್ ಯೋಜನೆಯು ದೇಶದ ಲಕ್ಷಾಂತರ ಮಂದಿ ಅನ್ನದಾತರ ನೆರವಿಗೆ ಬಂದಿದೆ ಎಂದರು.

ಹೊಸದಾಗಿ ಅಭಿವೃದ್ಧಿಯಾಗುವ ತಂತ್ರಜ್ಞಾನಗಳನ್ನು ರೈತರಿಗೆ ವರ್ಗಾವಣೆ ಮಾಡಿ ಭೂಮಿಯ ಗುಣ ಮತ್ತು ಹವಾಮಾನಕ್ಕೆ ತಕ್ಕಂತಹ ಬೆಳೆ ಬೆಳೆಯಲು ಹಾಗೂ ಆಹಾರ ಉತ್ಪನ್ನಗಳನ್ನು ದೇಶ–ವಿದೇಶಗಳಲ್ಲಿ ಮಾರಾಟ ಮಾಡಲು ಅನುಕೂಲವಾಗುತ್ತಿದೆ ಎಂದು ಕೈಲಾಸ್ ಚೌಧರಿ ಇದೇ ವೇಳೆ ನುಡಿದರು.

ತಾನು ಬೆಳೆದ ಬೆಳೆಯನ್ನು ಪ್ಯಾಕ್ ಮಾಡಿ ತನ್ನದೇ ಬ್ರಾಂಡ್‌ನಲ್ಲಿ ನೇರವಾಗಿ ಗ್ರಾಹಕರಿಗೆ ಮಾರಾಟ ಮಾಡುವುದು, ಮಾರುಕಟ್ಟೆ ಸೃಷ್ಟಿ, ರಫ್ತು ಉದ್ಯಮಕ್ಕೆ ಪ್ರೋತ್ಸಾಹ ನೀಡುವ ಮೂಲಕ ಪ್ರಧಾನ ಮಂತ್ರಿಗಳು ರೈತರ ಆದಾಯ ದ್ವಿಗುಣಗೊಳಿಸಲು ಹಲವು ಯೋಜನೆಗಳನ್ನು ನೀಡಿದ್ದಾರೆ ಎಂದು ತಿಳಿಸಿದರು.

ಕೃಷಿ ಉಳಿದರೆ ದೇಶದ ಉಳಿವು: ಬಿ.ಸಿ.ಪಾಟೀಲ್

ಮೈಸೂರು: ಕೃಷಿ ಉಳಿದರೆ ಮಾತ್ರ ದೇಶದ ಉಳಿವು ಸಾಧ್ಯ ಎಂದು ರಾಜ್ಯ ಕೃಷಿ ಸಚಿವ ಬಿ.ಸಿ.ಪಾಟೀಲ್ ಅಭಿಪ್ರಾಯಪಟ್ಟಿದ್ದಾರೆ.

ರಾಗಿ ಆಧಾರಿತ ಬ್ರೆಡ್ ಉತ್ಪನ್ನ ಬಿಡುಗಡೆಗೊಳಿಸಿ ಮಾತನಾಡುತ್ತ, ಕೃಷಿಗೆ ಈ ಹಿಂದೆ ಪ್ರೋತ್ಸಾಹವಿರಲಿಲ್ಲ. ರೈತನನ್ನು ಕೇವಲ ಬೆಳೆ ಬೆಳೆಯುವುದಕ್ಕೆ ಸೀಮಿತಗೊಳಿಸಲಾಗಿತ್ತು. ರೈತ ಮತ್ತು ಗ್ರಾಹಕರ ನಡುವೆ ಉಂಟಾಗಿದ್ದ ಕಂದಕ ಮುಚ್ಚಲು ಸರ್ಕಾರ ಹಲವು ಯೋಜನೆಗಳನ್ನು ಜಾರಿಗೊಳಿಸಿದೆ ಎಂದರು.

ತಾನು ಬೆಳೆದ ಉತ್ಪನ್ನಕ್ಕೆ ತಾನೇ ಬ್ರಾಂಡ್ ಮಾಡಿ ನೇರವಾಗಿ ಗ್ರಾಹಕನಿಗೆ ಮಾರಾಟ ಮಾಡುವ ವ್ಯವಸ್ಥೆಯಿಂದ ರೈತನ ಆದಾಯ ಹೆಚ್ಚಾಗಿದೆ. ಮಾರುಕಟ್ಟೆ ಸೃಷ್ಟಿಸಿ ರಫ್ತು ಮಾಡಲೂ ಪ್ರೋತ್ಸಾಹ ನೀಡುತ್ತಿರುವುದರಿಂದ ಸಾಕಷ್ಟು ಉದ್ಯೋಗ ಸೃಷ್ಟಿಯಾಗುತ್ತಿದೆ. ಈಗ ಕೃಷಿ ಕ್ಷೇತ್ರದಲ್ಲಿ 474 ಅಗ್ರಿ ಸ್ಟಾರ್ಟ್‌ಅಪ್‌ಗಳು ಆಹಾರ ಉದ್ಯಮದಲ್ಲಿ ತೊಡಗಿದ್ದು, ಯುವಕರು ಕೃಷಿಯತ್ತ ಆಸಕ್ತಿ ತೋರುತ್ತಿರುವುದು ಉತ್ತಮ ಬೆಳವಣಿಗೆ ಎಂದರು.

ಕೃಷಿ, ಕೃಷಿಕ ಉಳಿಯದಿದ್ದರೆ ದೇಶ ಉಳಿಯುವುದಿಲ್ಲ. ಬೇಸಾಯವೆಂದರೆ ಕೀಳರಿಮೆ ಇತ್ತು. ಈಗ ಅದು ಆದಾಯದ ಉದ್ದಿಮೆಯಾಗಿದೆ. ಅದೇ ರೀತಿ ಕೋಲಾರದ ನಾಗರಾಜ ಎಂಬುವರು ತಮ್ಮ ಒಂದೂವರೆ ಎಕರೆ ಭೂಮಿಯಲ್ಲಿ ರೇಷ್ಮೆ ಬೆಳೆದು 8 ಲಕ್ಷ ರೂ. ಆದಾಯ ಗಳಿಸುತ್ತಿರುವುದು ಇತರರಿಗೆ ಮಾದರಿಯಾಗಿದೆ ಎಂದು ನುಡಿದರು.

ಸಿಎಫ್‌ಟಿಆರ್‌ಐನಂತಹ ಸಂಶೋಧನಾ ಸಂಸ್ಥೆಗಳಲ್ಲಿ ಅಭಿವೃದ್ಧಿಪಡಿಸಿರುವ ತಂತ್ರಜ್ಞಾನ ಬಳಸಿಕೊಂಡು ಆಹಾರ ಉತ್ಪಾದನೆ, ಸಂಸ್ಕರಣೆ ಮಾಡಿ ಆಹಾರ ಪದಾರ್ಥಗಳನ್ನು ರಫ್ತು ಮಾಡಿದಲ್ಲಿ ಆದಾಯ ದ್ವಿಗುಣಪಡಿಸಿಕೊಳ್ಳಲು ಅವಕಾಶವಿದೆ. ಸರ್ಕಾರ ಯುವ ಉದ್ಯಮಿಗಳಿಗೆ ಪ್ರೋತ್ಸಾಹ ನೀಡುತ್ತಿದ್ದು, ಬೆಂಗಳೂರು ನಗರವೊಂದರಲ್ಲೇ 4,000 ಸ್ಟಾರ್ಟ್‌ಅಪ್‌ಗಳು ಆರಂಭವಾಗಿರುವುದು ಅಭಿವೃದ್ಧಿ ಪಥದ ಸಂಕೇತ ಎಂದರು.

ಮೈಸೂರು ಪಾರಂಪರಿಕ ಕಟ್ಟಡಗಳ ದುಸ್ಥಿತಿಗೆ ನಗರ ಪಾಲಿಕೆಯೇ ಹೊಣೆ

ವಾಣಿ ವಿಲಾಸ ಮಾರುಕಟ್ಟೆ ಬಾಡಿಗೆದಾರರ ಸಂಘದಿಂದ ಗಂಭೀರ ಆರೋಪ

ತಜ್ಞರ ಸಮಿತಿ ರಚಿಸಿ ಪಾರಂಪರಿಕ ಕಟ್ಟಡಗಳ ಸಂರಕ್ಷಣೆಗೆ ಆಗ್ರಹ







ಮೈಸೂರು, ಮೇ 19–ಮೈಸೂರಿನ ಪಾರಂಪರಿಕ ಕಟ್ಟಡಗಳಾದ ದೇವರಾಜ ಮಾರುಕಟ್ಟೆ, ವಾಣಿವಿಲಾಸ ಮಾರುಕಟ್ಟೆ ಮತ್ತು ಮಂಡಿ ಮಾರುಕಟ್ಟೆಯ ಇಂದಿನ ದುಸ್ಥಿತಿಗೆ ಮೈಸೂರು ಮಹಾನಗರ ಪಾಲಿಕೆ ನಿರ್ಲಕ್ಷ್ಯವೇ ಕಾರಣ ಎಂದು ಮೈಸೂರು ಮಹಾನಗರ ಪಾಲಿಕೆ ವಾಣಿವಿಲಾಸ ಮಾರುಕಟ್ಟೆ ಬಾಡಿಗೆದಾರರ ಸಂಘದ ಕಾರ್ಯದರ್ಶಿ ಶಿವಕುಮಾರ್ ಆಪಾದಿಸಿದ್ದಾರೆ.

ಮೈಸೂರು ನಗರ ಪಾಲಿಕೆ ವ್ಯಾಪ್ತಿಗೆ ಒಳಪಡುವ ದೇವರಾಜ ಮಾರುಕಟ್ಟೆ, ವಾಣಿ ವಿಲಾಸ ಮಾರುಕಟ್ಟೆ ಮತ್ತು ಮಂಡಿ ಮಾರುಕಟ್ಟೆ ನಿರ್ವಹಣೆಯ ಬಗ್ಗೆ ನಗರ ಪಾಲಿಕೆ ನಿರ್ಲಕ್ಷ್ಯ ವಹಿಸಿರುವುದೇ ಇವುಗಳ ಇಂದಿನ ಈ ಪರಿಸ್ಥಿತಿಗೆ ಕಾರಣವಾಗಿದೆ ಎಂದು ತಮ್ಮ ಪತ್ರಿಕಾ ಹೇಳಿಕೆಯಲ್ಲಿ ನೇರವಾಗಿ ಆರೋಪಿಸಿದ್ದಾರೆ.

ಈ ಮಾರುಕಟ್ಟೆಗಳು ಅಂದಿನ ಮಹಾರಾಜರಾದ ಶ್ರೀ ಕೃಷ್ಣರಾಜ ಒಡೆಯರ್ ಅವರ ಆಡಳಿತಾವಧಿಯಲ್ಲಿ ನಿರ್ಮಾಣಗೊಂಡ ಪಾರಂಪರಿಕ ಕಟ್ಟಡಗಳಾಗಿವೆ. ಅಂದಿನ ಮಹಾರಾಜರ ದೂರದೃಷ್ಟಿಯಿಂದ ಮೈಸೂರು ನಗರ ಮತ್ತು ಜಿಲ್ಲೆಯ ನಾಗರಿಕರ ಅವಶ್ಯಕತೆಗಳಿಗನುಗುಣವಾಗಿ ನಿರ್ಮಾಣಗೊಂಡಿರುವ ಈ ಬೃಹತ್ ಮಾರುಕಟ್ಟೆಗಳು ಕಳೆದೊಂದು ಶತಮಾನದಿಂದ ಮೈಸೂರು ನಾಗರಿಕರ ಹೆಮ್ಮೆಯ ಪಾರಂಪರಿಕ ಕಟ್ಟಡಗಳೆಂಬ ಹೆಗ್ಗಳಿಕೆ ಹೊಂದಿ, ಕರ್ನಾಟಕ ಮಾತ್ರವಲ್ಲದೆ ದೇಶ ಮತ್ತು ವಿದೇಶಗಳಲ್ಲೂ ಪ್ರಖ್ಯಾತಿ ಹೊಂದಿವೆ ಎಂದು ತಿಳಿಸಿದ್ದಾರೆ.

ಮೈಸೂರು ಮಹಾನಗರ ಸಭೆಯು ನಗರ ಪಾಲಿಕೆಯಾಗಿ 39 ವರ್ಷಗಳಾಗಿದೆ. ಅಲ್ಲಿಂದ ಈ 3 ಮಾರುಕಟ್ಟೆಗಳು ಪಾಲಿಕೆ ವ್ಯಾಪ್ತಿಗೆ ಒಳಪಟ್ಟಿವೆ. ಬಾಡಿಗೆ ವಸೂಲಿ ಸಹ ಪಾಲಿಕೆಗೆ ಸೇರಿದ್ದಾಗಿದೆ. ಆದರೆ ಈ ಮಹಾನಗರ ಪಾಲಿಕೆ ಬಾಡಿಗೆ ವಸೂಲಿ ಮಾತ್ರ ಮಾಡುತ್ತಿದ್ದು, ಸರ್ಕಾರಿ ಕಟ್ಟಡಗಳ ನಿರ್ವಹಣೆ ಬಗ್ಗೆ ಇರುವ ಸರ್ಕಾರದ ನಿಯಮ, ರೀತಿ, ರಿವಾಜುಗಳನ್ನು ಗಾಳಿಗೆ ತೂರಿ ಇಲ್ಲಿವರೆವಿಗೂ ಈ ಕಟ್ಟಡಗಳ ನಿರ್ವಹಣೆಗೆ ಒಂದೇ ಒಂದು ರೂಪಾಯಿಗಳನ್ನು ಖರ್ಚು ಮಾಡದೆ ನಿರ್ಲಕ್ಷ್ಯ ವಹಿಸಿದೆ ಎಂದು ಅವರು ದೂರಿದ್ದಾರೆ.

ಈ ಕಟ್ಟಡಗಳ ಸಂರಕ್ಷಣೆಗೆ ಅವಶ್ಯವಾದ ಸಣ್ಣ ರಿಪೇರಿಯಾಗಲೀ, ಮೇಲ್ಭಾಗದ ನೆಲಹಾಸನ್ನು ಸ್ವಚ್ಛಗೊಳಿಸಿ ನೀರು ಸೋರಿಕೆಯನ್ನು ತಡೆಗಟ್ಟಲು ರಾಸಾಯನಿಕ ಪದಾರ್ಥಗಳ ಲೇಪನವಾಗಲೀ, ಸುಣ್ಣ–ಬಣ್ಣ ಹೊಡೆಯುವುದಾಗಲೀ ಮಾಡದೇ ನಿರ್ಲಕ್ಷ್ಯ ತಾಳಿರುವುದೇ ಈ ಮಾರುಕಟ್ಟೆಗಳ ಇಂದಿನ ದುಸ್ಥಿತಿಗೆ ಕಾರಣವಾಗಿದೆ ಎಂದು ಪಾಲಿಕೆ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

ಮೈಸೂರು ಮಹಾನಗರ ಪಾಲಿಕೆಯ ಮುಖ್ಯ ಕಟ್ಟಡ ಮತ್ತು ಇದರ ಆಡಳಿತಕ್ಕೆ ಒಳಪಟ್ಟ ಇತರೆ ಕಟ್ಟಡಗಳನ್ನು ಕಾಲ ಕಾಲಕ್ಕೆ ಅಧಿಕಾರಿಗಳು ಮತ್ತು ಚುನಾಯಿತ ಪ್ರತಿನಿಧಿಗಳು ನಿರ್ವಹಣೆ ಮಾಡಿಕೊಂಡು, ಕಾಪಾಡುತ್ತಿದ್ದಾರೆ. ಅದರಂತೆ ಇದು ಪಾಲಿಕೆ ಸ್ವಂತ ಆಸ್ತಿಯೆಂದು ಮತ್ತು ಮಹಾರಾಜರು ಕಟ್ಟಿಸಿದ ಪಾರಂಪರಿಕ ಕಟ್ಟಡಗಳು ಕರ್ನಾಟಕ ಜನತೆಯ ಆಸ್ತಿಯೆಂದು ಪರಿಗಣಿಸಿ, ಇನ್ನು ಮುಂದಾದರೂ ಮಾರುಕಟ್ಟೆ ಕಟ್ಟಡಗಳ ನಿರ್ವಹಣೆಗೆ ಒಂದು ಸಮಿತಿ ರಚಿಸಿ ಸಂರಕ್ಷಿಸಬೇಕಾದ ಅವಶ್ಯಕತೆ ಇದೆ ಎಂದು ಅವರು ಸಲಹೆ ನೀಡಿದ್ದಾರೆ.

ಮೈಸೂರು ನಗರದ ಎಲ್ಲ ಪಾರಂಪರಿಕ ಕಟ್ಟಡಗಳು ಮತ್ತು ಮಾರುಕಟ್ಟೆಗಳ ನಿರ್ವಹಣೆಗೆ ಸರ್ಕಾರದಿಂದ ಒಂದು ಸ್ವತಂತ್ರ ನಿರ್ವಹಣಾ ಸಮಿತಿಯನ್ನು ರಚಿಸಿ, ಇದರಲ್ಲಿ ಪಾರಂಪರಿಕ ಕಟ್ಟಡಗಳ ಬಗ್ಗೆ ಆಸಕ್ತಿ ಮತ್ತು ಅಭಿರುಚಿವುಳ್ಳ ಅಧಿಕಾರಿಗಳನ್ನು ಮತ್ತು ಕಟ್ಟಡಗಳ ಸಂರಕ್ಷಣೆ ನಮ್ಮ ಗುರಿಯೆಂಬ ಧ್ಯೇಯೋದ್ದೇಶ ಹೊಂದಿರುವಂತಿರುವ ಇತರೆ ತಜ್ಞರನ್ನು ನೇಮಿಸಿ ಮೈಸೂರಿನ ಹೆಮ್ಮೆಯ ಈ ಪಾರಂಪರಿಕ ಕಟ್ಟಡಗಳ ಜೊತೆ ಕಡೆಗಣಿಸಲ್ಪಟ್ಟಿರುವ ಈ ಮೂರು ಮಾರುಕಟ್ಟೆಗಳನ್ನು ತುರ್ತಾಗಿ ದುರಸ್ತಿ ಮಾಡಿಸಲು ಕ್ರಮ ಕೈಗೊಳ್ಳಬೇಕು ಎಂದು ಅವರು ಆಗ್ರಹಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

20.05.2022 ಶುಕ್ರವಾರ, ಮಳೆ ನಕ್ಷತ್ರ : ಕೃತಿಕ 11.05.2022 ರಿಂದ 24.05.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ
ತಿಥಿ: ಪಂಚಮಿ, ನಕ್ಷತ್ರ : ಪೂಷಾ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

■ **ಅವಧೂತ ದತ್ತಪೀಠ, ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ :** ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ 80ನೇ ಜನ್ಮ ದಿನೋತ್ಸವ, ಬೆಳಗ್ಗೆ 6.30ಕ್ಕೆ ಸಾಮೂಹಿಕ ಉಪನಯನ, ಸ್ಥಳ: ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ.

■ **ಹಿರಣ್ಮಯಿ ಪ್ರತಿಷ್ಠಾನ ಮತ್ತು ಕಾವೇರಿ ಬಳಗ :** ವಿದ್ಯಾರ್ಥಿಗಳಿಗೆ ಲೇಖನ ಸಾಮಗ್ರಿ ವಿತರಣೆ, ಅಧ್ಯಕ್ಷತೆ : ಮುಖ್ಯ ಶಿಕ್ಷಕಿ ಸುಗುಣಾವತಿ, ಉದ್ಘಾಟನೆ : ಸಾಹಿತಿ ಬನ್ನೂರು ಕೆ. ರಾಜು, ಲೇಖನ ಸಾಮಗ್ರಿ ವಿತರಣೆ : ಸಮಾಜ ಸೇವಾ ಕಾರ್ಯಕರ್ತೆ ಮಾಲಿನಿ ಆರ್. ಪಾಲಾಕ್ಷ, ಪ್ರಾಸ್ತಾವಿಕ ನುಡಿ : ಹಿರಣ್ಮಯಿ ಪ್ರತಿಷ್ಠಾನ ಅಧ್ಯಕ್ಷ ಎ. ಸಂಗಪ್ಪ, ಸ್ಥಳ: ಅಕ್ಕನ ಬಳಗ ಶಾಲೆ, ತ್ಯಾಗರಾಜ ರಸ್ತೆ, ಬೆಳಗ್ಗೆ 11ಕ್ಕೆ.

■ **ಮೈಸೂರು ಕನ್ನಡ ವೇದಿಕೆ:** ಕಾರ್ಮಿಕ ದಿನಾಚರಣೆ ಪ್ರಯುಕ್ತ ಕಾಯಕಯೋಗಿ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ: ಸಮಾಜ ಸೇವಕ ಶ್ರೀಷಾ ಭಟ್, ಉಪಸ್ಥಿತರು: ಸಹಾಯಕ ಕಾರ್ಮಿಕ ಆಯುಕ್ತೆ ನಾಜಿಯಾ ಸುಲ್ತಾನ, ಸಾಹಿತಿ ಬನ್ನೂರು ಕೆ.ರಾಜು, ವಕೀಲ ರಾಮಕೃಷ್ಣ, ನಾಲಾಬೀದಿ ರವಿ, ಅಧ್ಯಕ್ಷತೆ: ಮೈಸೂರು ಕನ್ನಡ ವೇದಿಕೆ ಅಧ್ಯಕ್ಷ ಎಸ್.ಬಾಲಕೃಷ್ಣ, ಸ್ಥಳ: ಸಂಗೊಳ್ಳಿ ರಾಯಣ್ಣ ಮಂಟಪ, ಸ್ವಾತಂತ್ರ್ಯ ಹೋರಾಟಗಾರರ ಉದ್ಯಾನವನ, ಬೆಳಗ್ಗೆ 11.30ಕ್ಕೆ.

■ **ಟೈಗರ್ ಅಡ್ವೆಂಚರ್ ಫೌಂಡೇಷನ್ :** ಎನ್‌ಸಿಸಿ ಗ್ರೂಪ್ ಕಮಾಂಡರ್ ಆರ್.ಆರ್. ಮೆನನ್ ಅವರಿಂದ 70ನೇ ಚಾರಣಕ್ಕೆ ಚಾಲನೆ, ಸ್ಥಳ: ರೋಟರಿ ಸೆಂಟರ್, ಬೆಳಗ್ಗೆ 10.55ಕ್ಕೆ.

■ **ಮೈಸೂರು ಉತ್ಸವ :** ವಸ್ತುಪ್ರದರ್ಶನ, ಸ್ಥಳ: ಜೆಎಸ್‌ಎಸ್ ಮೈದಾನ, ದೊಡ್ಡಕೆರೆ ಮೈದಾನದ ಪಕ್ಕ, ಸಂಜೆ 6ಕ್ಕೆ.

■ **ಶ್ರೀ ಶ್ರೀನಿವಾಸಸ್ವಾಮಿ ಕೈಂಕರ್ಯ ಸಭಾ :** ಶ್ರೀ ಶ್ರೀನಿವಾಸಸ್ವಾಮಿಯವರ ವಾರ್ಷಿಕ ಮಹೋತ್ಸವ, ಸಂಜೆ 6ಕ್ಕೆ ಮುಡಿ ಉತ್ಸವ, ಗರುಡೋತ್ಸವ, ಸ್ಥಳ: ಸಭಾ ಆವರಣ, ತಿಲಕ್‌ನಗರ, ಸಂಜೆ 6ಕ್ಕೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಅಮೃತ ಸ್ವಾತಂತ್ರ್ಯ ಮಾಲಿಕೆ 'ಆಧಾರ ಶಿಲೆ' ಮೈಸೂರು ಸುತ್ತಲಿನ ಪ್ರಾಗೈತಿಹಾಸ ತಾಣಗಳ ಪರಿಚಯ–ಡಾ.ಎಸ್.ಜಿ.ರಾಮದಾಸರೆಡ್ಡಿ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ, ಗಾಯನ–ಗೀತಾ ವೈ ಪುಟ್ಟಿ, ಎಂ.ಎ.ಶೋಭಾ, ಟಿ.ಎಸ್.ಸ್ನೇಹಾ, ವ್ಯಾಖ್ಯಾನ–ಡಾ.ಜಿ.ಆರ್.ತಿಪ್ಪೇಸ್ವಾಮಿ, 9.00 ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ಆರೋಗ್ಯ ಕಾರ್ಯಕ್ರಮ, 9.30 ಭಾರತದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ದೈನಂದಿನ ವಿಶೇಷ ಕಾರ್ಯಕ್ರಮ ಸರಣಿ 'ಸ್ವಾತಂತ್ರ್ಯ ಚಳವಳಿಯ ಪಯಣ–ಆಕಾಶವಾಣಿಯೊಂದಿಗೆ', 10.00 ಎಂ.ಎಸ್.ರಾಮನಾಥನ್–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ, 12.45 ಕಾದಂಬರಿ ವಿಹಾರ, ಪ್ರಸ್ತುತಿ –ಉಮೇಶ್ ಎಸ್.ಎಸ್., 1.20 ಭಾವಗೀತೆ–ಕೆ.ಬಿ. ಸುನೀತಾ ಆಚಾರ್ಯ, 2.50 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ– ಜಿ.ಕೆ. ರವೀಂದ್ರ ಕುಮಾರ್, 3.00 ಎಸ್.ರಾಜೇಶ್– ವೇಣುವಾದನ, 4.00 ಮಹಿಳಾರಂಗ, ಸಖೀಸಂವಾದ, 'ಮಹಿಳೆಯರಿಗೆ ಉದ್ಯಮ ಸಲಹೆ', ಪ್ರಸ್ತುತಿ–ಕೆ.ಬಿ.ಮೀನಾ, 4.30 ವೃತ್ತಿ ಮಾರ್ಗದರ್ಶನ–ಉನ್ನತ ವ್ಯಾಸಂಗ ಮತ್ತು ವಿದೇಶಗಳಲ್ಲಿ ಉನ್ನತ ವ್ಯಾಸಂಗಕ್ಕೆ ಅಗತ್ಯವಿರುವ ಸಿದ್ಧತೆ, ಲಭ್ಯವಿರುವ ಸೌಲಭ್ಯಗಳು ಕುರಿತು ಪ್ರಶಾಂತ್ ಎಸ್. ಚಿನ್ನಪ್ಪನವರ್ ಮತ್ತು ಸಚಿನ್ ದೇಶಪಾಂಡೆ ಅವರೊಂದಿಗೆ ಮಾತುಕತೆ, 6.50 ಕೃಷಿರಂಗ–ಕಿಸಾನ್‌ವಾಣಿ, ಹೈನು ರಾಸುಗಳ ನಿರ್ವಹಣೆ ಕುರಿತು ಡಾ. ರಕ್ಷಿತ್ ರಾಜ್ ಅವರೊಡನೆ ಸಂದರ್ಶನ, 7.45 ಈಸಿ ಇಂಗ್ಲೀಷ್–ಕನ್ನಡದ ಮೂಲಕ ಇಂಗ್ಲೀಷ್ ಕಲಿಕೆಯ ಬಾನುಲಿ ಸರಣಿ, ರಚನೆ ಮತ್ತು ಪ್ರಸ್ತುತಿ–ಸಿ.ಕೆ.ವಿಜಯನಾರಸಿಂಹ ನಿರ್ಮಾಣ–ಎಸ್.ಲಕ್ಷ್ಮೀ ನಾರಾಯಣ, 9.00 ವಿಜ್ಞಾನ ಭಾರತಿ–ವನ್ಯಜೀವಿ ಛಾಯಾಗ್ರಾಹಕ ಹಾಗೂ ಪರಿಸರ ತಜ್ಞ ಡಾ. ಸಂಜಯ್ ಅವರೊಡನೆ ಸಂದರ್ಶನ, ಸಂದರ್ಶಕರು–ಅಬ್ದುಲ್ ರಶೀದ್, 10.30 ಸವಿನೆನಪು

■ **ಪ್ರಯೋಗ ಮೈಸೂರು:** ಪ್ರಯೋಗ ತಂಡದ ಉದ್ಘಾಟನೆ ಮತ್ತು ರಾಜ್ ದಿ ಇನ್ಸ್‌ಪಿರೇಷನ್ ನಾಟಕ ಪ್ರದರ್ಶನ, ಮುಖ್ಯ ಅತಿಥಿಗಳು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಮಲ್ಲಿಕಾರ್ಜುನಸ್ವಾಮಿ, ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಸ್ಥಳ: ಕಿರುರಂಗ ಮಂದಿರ, ಕಲಾಮಂದಿರ, ಸಂಜೆ 7ಕ್ಕೆ.

ಹಿನಕಲ್‌ನಲ್ಲಿಂದು (ಮೈಸೂರು ತಾಲೂಕು)

■ **ಹಿನಕಲ್ ಶ್ರೀ ಮಾರಮ್ಮನ ದೇವಸ್ಥಾನ:** ಬ್ರಹ್ಮಶಿಲಾ (ಕರುಕಲ್ಲು) ಪ್ರತಿಷ್ಠಾಪನೆ ಮತ್ತು ಪೂಜಾ ಮಹೋತ್ಸವ, ಮಧ್ಯಾಹ್ನ 1.15ರಿಂದ ಗಣಪತಿ ಪೂಜೆ, ಕಲಾವೃದ್ಧಿ ಹೋಮ, ಶಿಲಾ ಪ್ರತಿಷ್ಠೆ ಕೂಶ್ಮಾಂಡ ಛೇದನ, ಪೂರ್ಣಾಹುತಿ, ಮಹಾಮಂಗಳಾರತಿ, ಸಂಜೆ 4ರಿಂದ ನಿಸರ್ಗ ಮತ್ತು ವಿಸ್ಮಯರಿಂದ ಭಕ್ತಿಸುಧೆ ಗಾಯನ, ಸಂಜೆ 6ಗಂಟೆಗೆ ಗೌರವ ಸಮರ್ಪಣೆ, ವಿಶೇಷ ಆಹ್ವಾನಿತರು: ಮಾಜಿ ಸಿಎಂ ಸಿದ್ದರಾಮಯ್ಯ, ಅಧ್ಯಕ್ಷತೆ: ಶಾಸಕ ಜಿ.ಟಿ.ದೇವೇಗೌಡ, ಮುಖ್ಯ ಅತಿಥಿಗಳು: ಸಂಸದ ಪ್ರತಾಪ್ ಸಿಂಹ, ಮಾಜಿ ಸಚಿವ ಹೆಚ್.ಸಿ.ಮಹದೇವಪ್ಪ, ಶಾಸಕರಾದ ಡಾ.ಯತೀಂದ್ರ ಸಿದ್ದರಾಮಯ್ಯ, ಅನಿಲ್ ಚಿಕ್ಕಮಾದು, ಡಾ.ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ಮಾಜಿ ಸಚಿವ ಸಿ.ಹೆಚ್.ವಿಜಯಶಂಕರ್, ಸ್ಥಳ: ಶ್ರೀ ಶನೇಶ್ವರಸ್ವಾಮಿ ದೇವಸ್ಥಾನದ ಮುಂಭಾಗ, ಹಿನಕಲ್.

ನಕ್ಕರೆ ಅದೇ ಸ್ವರ್ಗ

ಪತ್ನಿ : ರೀ ಈ ವಾರ ಫುಲ್ ಸಿನಿಮಾಗೆ ಹೋಗೋಣಾ..
ಬರುವ ವಾರ ಫುಲ್ ಶಾಪಿಂಗ್ ಮಾಡೋಣ..
ಪತಿ : ಅದರ ಮುಂದಿನ ವಾರ ಫುಲ್ ದೇವಸ್ಥಾನಕ್ಕೆ ಹೋಗೋಣಾ.
ಪತ್ನಿ : ಯಾಕೆ?
ಪತಿ : ಭಿಕ್ಷೆ ಬೇಡೋಕೆ!

ಮೈಸೂರು ಮಿತ್ರ

ಶುಕ್ರವಾರ, 20 ಮೇ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ಸಣ್ಣವರು ಮಾಡುವ ದೊಡ್ಡ ತಪ್ಪಿಗಿಂತ ದೊಡ್ಡವರು ಮಾಡುವ ಸಣ್ಣ ತಪ್ಪು ಹೆಚ್ಚು ವಿಷಾದಕರ – ಗಯಟೆ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಬಲ್ಲವನೇ ಬಲ್ಲ ಬೆಲ್ಲದ ರುಚಿಯ

ನಿಮ್ಮ ಪತ್ರಗಳು

ನಾಮಕರಣದ ಉದ್ದೇಶ ಈಡೇರಲಿ

ಮಾನ್ಯರೆ,

ಮೈಸೂರು ಮಹಾ ನಗರಪಾಲಿಕೆಯು ಹಲವು ವರ್ಷಗಳ ಹಿಂದೆಯೇ ಕುವೆಂಪು ನಗರದ ವಾಣಿಜ್ಯ ಸಂಕೀರ್ಣದ ಎದುರಿನ ವೃತ್ತಕ್ಕೆ ಡಾ. ಹೆಡಗೆವಾರ್ ವೃತ್ತ ಎಂದು ನಾಮಕರಣ ಮಾಡಿದೆ. ಹಾಗೆಯೇ ಅಲ್ಲಿ ಆ ಹೆಸರಿನ ಶಿಲಾ ಫಲಕವನ್ನೂ ಅಳವಡಿಸಿದೆ. ಆದರೆ ಪಾಲಿಕೆಯು ತನ್ನ ಕಡತಗಳಲ್ಲಿ ಎಲ್ಲೂ ಆ ಸ್ಥಳವನ್ನು ಡಾ. ಹೆಡಗೆವಾರ್ ವೃತ್ತ ಎಂದು ದಾಖಲಿಸುತ್ತಿಲ್ಲ. ನಗರ ಸಾರಿಗೆ ಬಸ್‌ಗಳ ನಾಮಫಲಕಗಳಲ್ಲಿ ಇಂದಿಗೂ ಆ ನಿಲುಗಡೆಯನ್ನು ಕಾಂಪ್ಲೆಕ್ಸ್ ಎಂದು ಬರೆಯಲಾಗುತ್ತಿದೆ. ಹಿಂದೆ ಅಲ್ಲಿ ಶಾಂತಿಸಾಗರ್ ಎನ್ನುವ ಹೋಟೆಲ್ ಇದ್ದ ಕಾರಣ ಆ ವೃತ್ತವನ್ನು ಶಾಂತಿ ಸಾಗರ್ ವೃತ್ತ ಎಂದೂ ಕರೆಯಲಾಗುತ್ತಿದೆ. ಕೆಲವರು ಅದನ್ನು ಕುವೆಂಪುನಗರ ಸರ್ಕಲ್ ಎಂದೂ ಕರೆಯುವುದಿದೆ. ಸ್ವತಃ ಮಹಾನಗರಪಾಲಿಕೆಯೇ ಆ ವೃತ್ತಕ್ಕೆ ಡಾ. ಹೆಡಗೇವಾರ್ ವೃತ್ತ ಎಂದು ಅಧಿಕೃತವಾಗಿ ನಾಮಕರಣ ಮಾಡಿದ ಮೇಲೂ ಆ ವೃತ್ತವನ್ನು ಯಾವುದೋ ಕಟ್ಟಡದ ಹೆಸರಿನಲ್ಲಿ, ಹೋಟೆಲ್ ಹೆಸರಿನಲ್ಲಿ, ಬಡಾವಣೆಯ ಹೆಸರಿನಲ್ಲಿ ಕರೆಯುವ ಅಗತ್ಯ ಏನಿದೆ? ಮಹಾನಗರಪಾಲಿಕೆಯು ವೃತ್ತಗಳಿಗೆ, ರಸ್ತೆಗಳಿಗೆ ನಾಮಕರಣ ಮಾಡಿ ಫಲಕ ಅಳವಡಿಸುವ ಉದ್ದೇಶವಾದರೂ ಏನು?



ಇನ್ನಾದರೂ ನಗರದ ಪ್ರಮುಖ ವೃತ್ತಗಳಲ್ಲಿ ಒಂದಾದ ಡಾ. ಹೆಡಗೆವಾರ್ ವೃತ್ತವನ್ನು ಡಾ. ಹೆಡಗೆವಾರ್ ವೃತ್ತ ಎಂದೇ ಎಲ್ಲರೂ ಬಳಸುವಂತೆ ಪಾಲಿಕೆಯು ನೋಡಿಕೊಳ್ಳಲಿ.**–ಪ್ರವೀಣ್‌ಕುಮಾರ್ ಮಾವಿನಕಾಡು, ತೊಣಚಿಕೊಪ್ಪಲು, ಮೈಸೂರು**

ಶಾಲೆಗಳ ಸಬಲೀಕರಣಕ್ಕಾಗಿ ಸಹಭಾಗಿಗಳಾಗೋಣ

ಮಾನ್ಯರೆ,

'ಮೈಸೂರು ಮಿತ್ರ' ದಿನಪತ್ರಿಕೆಯ ಗುರುವಾರದ ಸಮಾಜಮುಖಿ ಅಂಕಣದಲ್ಲಿ ಸಮಾಜಶಾಸ್ತ್ರಜ್ಞರಾದ ಪ್ರೊ. ಇಂದಿರಾ ರವರ **ತೆರೆದವು ಶಾಲೆಗಳು: ಜ್ಞಾನಾರ್ಜನೆಯನ್ನು ಸುರಕ್ಷಿತ ಸುಸ್ಥಿರ ಅನುಭವವನ್ನಾಗಿಸುವುದು ಹೇಗೆ?** ಎಂಬ ಅಂಕಣವು ಪ್ರಸ್ತುತ ಶೈಕ್ಷಣಿಕ ವ್ಯವಸ್ಥೆಗೆ ಹಿಡಿದ ಕನ್ನಡಿಯಂತಿದೆ. ಕಳೆದ ಎರಡು ವರ್ಷಗಳಿಂದ ಕೊರೊನಾ ಎಂಬ ವೈರಾಣುವಿನ ಹಾವಳಿಯಿಂದ ಮುಚ್ಚಿದ್ದ ಶಾಲೆಗಳು ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ ಬಹಳ ಭರವಸೆಯಿಂದ ಆಶಾದಾಯಕವಾಗಿ ತೆರೆದಿದ್ದು, ಕಳೆದೊಂದು ವಾರದಿಂದ ಶಾಲೆಯ ಆವರಣದಲ್ಲಿ ಮಕ್ಕಳ ಕಲರವದಿಂದ ಶಾಲೆಗೆ ಹೊಸಕಳೆಬಂದಂತಾಗಿದೆ. ಪ್ರೊ.ಇಂದಿರಾರವರು ಪ್ರಸ್ತಾಪಿಸಿರುವಂತೆ ಈ ಎರಡು ವರ್ಷಗಳಲ್ಲಿ ಭೌತಿಕ ತರಗತಿಗಳು ನಡೆಯದ ಹಿನ್ನೆಲೆಯಲ್ಲಿ ಮಕ್ಕಳಿಗೆ ಕಲಿಕಾ ನಷ್ಟ ಉಂಟಾಗಿರುವುದು ಅಕ್ಷರಶಃ ಸತ್ಯ ಅದಕ್ಕಾಗಿಯೇ ಸಾರ್ವಜನಿಕ ಶಿಕ್ಷಣ ಇಲಾಖೆಯು ಬಹಳ ಕಳಕಳಿಯಿಂದ ಕಲಿಕಾ ಚೇತರಿಕಾ ಕಾರ್ಯಕ್ರಮವನ್ನು ಜಾರಿಗೊಳಿಸಿದ್ದು, ಇದರ ಅನುಷ್ಠಾನವನ್ನು ಶಿಕ್ಷಕವಲಯ ಬಹಳ ಉತ್ಸುಕತೆಯಿಂದ ಮಾಡುತ್ತಿದೆ. ಇದಕ್ಕೆ ಪೂರಕವೆಂಬಂತೆ ಶಾಲೆಯ ಭೌತಿಕ ಪರಿಸರವು ಮುಖ್ಯ. ಇಂದಿಗೂ ಹಲವು ಶಾಲೆಯಲ್ಲಿ ವಿದ್ಯಾರ್ಥಿಗಳನ್ನು ಕೂರಿಸಿ ಪಾಠ ಬೋಧನೆ ಮಾಡಲಾಗದ ಸ್ಥಿತಿಯಲ್ಲಿದೆ. ಆದ್ದರಿಂದ ಸಮಾಜದ ಸರ್ವವರ್ಗಗಳು ಆಯಾ ವ್ಯಾಪ್ತಿಯಲ್ಲಿರುವ ಶಾಲೆಗಳಿಗೆ ಕಾಯಕಲ್ಪ ನೀಡಿದರೆ ಶಾಲೆಗಳು ಸುರಕ್ಷಿತ ಸುಸ್ಥಿರ ಜ್ಞಾನಾರ್ಜನೆ ನೀಡಬಹುದಾಗಿದೆ. ಈ ನಿಟ್ಟಿನಲ್ಲಿ ಸರ್ವರೂ ಯೋಚಿಸಬೇಕಾಗಿದೆ.

–ಸಾಲುಂಡಿ ಎಸ್. ದೊರೆಸ್ವಾಮಿ, ಮೈಸೂರು.



ಪ್ರೊ. ಎ.ವಿ. ನರಸಿಂಹಮೂರ್ತಿ
ಮಾಜಿ ಮುಖ್ಯಸ್ಥರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ ಶಾಸ್ತ್ರ ವಿಭಾಗ,
ಮೈಸೂರು ವಿಶ್ವವಿದ್ಯಾನಿಲಯ.

ಇತಿಹಾಸದ ಪುಟಗಳು

ತಿ.ನರಸೀಪುರ ಸಂಗಮದ ಪವಿತ್ರ ದೇವಾಲಯಗಳು

ತಿರುಮಕೂಡಲು ನರಸೀಪುರ ಮೈಸೂರು ಜಿಲ್ಲೆಯ ಒಂದು ತಾಲೂಕು. ಸಾಮಾನ್ಯವಾಗಿ ಈ ಊರನ್ನು ಸಂಕ್ಷಿಪ್ತವಾಗಿ ಟಿ. ನರಸೀಪುರ ಎಂದು ಕರೆಯುತ್ತಾರೆ. ಇಲ್ಲಿ ಕೈಮಗ್ಗದ ಬಟ್ಟೆ ತಯಾರಿಕೆ ಹಾಗೂ ರೇಷ್ಮೆ ಹುಳು ಸಾಕಾಣಿಕೆಯೂ ಅಲ್ಪ ಪ್ರಮಾಣದಲ್ಲಿದೆ. ಈ ತಾಲೂಕಿನಲ್ಲಿರುವ ಗರ್ಗೇಶ್ವರಿಯಲ್ಲಿ ಗಾರ್ಗೇಶ್ವರ ದೇವಾಲಯವಿದೆ. ಕಾವೇರಿ ಹಾಗೂ ಕಪಿಲಾ ನದಿಗಳು ಸೇರುವ ಸ್ಥಳದಲ್ಲಿ ಅಗಸ್ತೇಶ್ವರ ದೇವಾಲಯವಿದೆ.

ಕಾವೇರಿ ಮತ್ತು ಕಪಿಲಾ ನದಿಗಳ ತಳದಲ್ಲಿ ಗುಪ್ತವಾದ ಸ್ಫಟಿಕ ಸರೋವರವೂ ಇಲ್ಲಿದೆಯೆಂದು ವಿಷ್ಣು ಧರ್ಮೋದ್ಧರ ಪುರಾಣದಲ್ಲಿ ಹೇಳಿದೆ. ನರಸೀಪುರದಲ್ಲಿರುವ ಅಗಸ್ತೇಶ್ವರ ಈ ತಾಲೂಕಿನ ಪ್ರಮುಖ ಆಕರ್ಷಣೆ.

ಅಗಸ್ತ್ಯ ಮಹರ್ಷಿಗಳು ಲಿಂಗಪೂಜೆಯನ್ನು ಮಾಡಬೇಕೆಂದು ಅಪೇಕ್ಷಿಸಿ, ಹನುಮಂತನಿಗೆ ನರ್ಮದಾ ನದಿಯಿಂದ ಒಂದು ಲಿಂಗವನ್ನು ತರುವಂತೆ ಹೇಳಿದರು. ಆದರೆ ಹನುಮಂತನು ಸರಿಯಾದ ಸಮಯಕ್ಕೆ ಬರಲಿಲ್ಲ. ಇದರಿಂದ ಅಗಸ್ತ್ಯರು ತಾವೇ ಮರಳಿನಿಂದ ಒಂದು ಲಿಂಗವನ್ನು ನಿರ್ಮಿಸಿ, ಅದನ್ನೇ ಪೂಜಿಸಿದರೆಂದು ಸ್ಥಳೀಯರು ನಂಬಿದ್ದಾರೆ. ಹನುಮಂತನು ಹಿಂತಿರುಗಿ ಬಂದು, ಅಗಸ್ತ್ಯರ ಈ ಕಾರ್ಯದಿಂದ ಕೋಪಗೊಂಡು, ಈ ಲಿಂಗವನ್ನು ಬೇರು ಸಮೇತ ಕಿತ್ತೆಸೆಯಲು ಪ್ರಯತ್ನಿಸಿದರು. ಆದರೆ ಹನುಮಂತನಿಗೆ ಇದು ಸಾಧ್ಯವಾಗಲಿಲ್ಲ. ಸ್ವಲ್ಪ ಸಮಯದ ನಂತರ ಹನುಮಂತನು ತಂದ ಲಿಂಗವನ್ನು ನರಸೀಪುರದಲ್ಲಿರುವ ದೇವಾಲಯದಲ್ಲಿ ಪ್ರತಿಷ್ಠಾಪಿಸಲಾಯಿತು.

ಅಗಸ್ತ್ಯೇಶ್ವರ ದೇವಾಲಯ ದ್ರಾವಿಡ ಶೈಲಿಯ ಕಟ್ಟಡ. ಗರ್ಭಗುಡಿಯೂ ಸೇರಿದಂತೆ ಇತರ ಭಾಗಗಳು ಕ್ರಿ.ಶ. ಹನ್ನೊಂದನೆಯ ಶತಮಾನದಲ್ಲಿ ನಿರ್ಮಾಣವಾಗಿದೆ. ಇಲ್ಲಿರುವ ಅನೇಕ ಕಂಬಗಳ ಮೇಲೆ ಪಿಟೀಲುವಾದಕಿ, ದುರ್ಗಾದೇವಿ ಮುಂತಾದ ಸುಂದರ ಕಲ್ಲಿನ ಶಿಲ್ಪಗಳಿವೆ. ನವರಂಗದಲ್ಲಿ ಸುಬ್ರಹ್ಮಣ್ಯಸ್ವಾಮಿ, ಹೊಯ್ಸಳ ಕಾಲದ ಮಹಿಷಾಸುರ ಮರ್ಧಿನಿ ಹಾಗೂ ಸೂರ್ಯನಾರಾಯಣನ ವಿಗ್ರಹಗಳಿವೆ. ಇಲ್ಲಿ ವಿಜಯನಗರ ಕಾಲದ ಕೆಲವು ಕಂಚಿನ ವಿಗ್ರಹಗಳನ್ನು ಕಾಣಬಹುದು. ಈ ದೇವಾಲಯದ ಉತ್ತರದ ಗುಡಿಯಲ್ಲಿ ಪಾರ್ವತೀ ದೇವಿಯನ್ನು ಪ್ರತಿಷ್ಠಾಪಿಸಿದ್ದಾರೆ. ಇದು ಪಾಳೇಗಾರರ ಕಾಲದಲ್ಲಿ ನಿರ್ಮಿತವಾದದ್ದು. ಈ ದೇವಿಯನ್ನು ಪೂರ್ಣಮಂಗಳ ಕಾಮಾಕ್ಷಿ ಎಂದು ಪಾಳೇಗಾರರ ಶಾಸನವು ಉಲ್ಲೇಖಿಸಿದೆ. ಕಾಮಾಕ್ಷಿಯ ವಿಗ್ರಹ ನಾಲ್ಕು ಅಡಿಗಳು ಎತ್ತರದ್ದಾಗಿದೆ. ಕಾಮಾಕ್ಷಿಯ ವಿಗ್ರಹದ ಎಡಭಾಗದಲ್ಲಿ ನಂದಿ, ಮಹಾ ವಿಷ್ಣು, ದಕ್ಷಿಣಾಮೂರ್ತಿ ಮುಂತಾದ ಕಲ್ಲಿನ ವಿಗ್ರಹಗಳನ್ನು ಅಗಸ್ತ್ಯೇಶ್ವರ ದೇವಾಲಯದಲ್ಲಿ ನೋಡಬಹುದು. ಇಲ್ಲಿರುವ ಅಶ್ವತ್ಥನಾರಾಯಣನ ಮೂರ್ತಿಯು ಸುಮಾರು ಎರಡು ಅಡಿಗಳಷ್ಟು ಎತ್ತರವಾಗಿದ್ದು, ನೃತ್ಯ ಭಂಗಿಯಲ್ಲಿದೆ. ಎಂಟು ಕೈಗಳನ್ನು ಹೊಂದಿದೆ. ಅಗಸ್ತ್ಯೇಶ್ವರ ದೇವಾಲಯದಲ್ಲಿ ಸೋಮೇಶ್ವರ ಹಾಗೂ ಮಾರ್ಕಂಡೇಯ ಲಿಂಗಗಳೂ ಇವೆ. ಈ ದೇವಾಲಯದಲ್ಲಿರುವ ಮಹಾದ್ವಾರದ ಮೇಲೆ ಒಂದು ಚಿಕ್ಕ ಗೋಪುರವಿದೆ. ಈ ದೇವಾಲಯದ ಮುಂಭಾಗದಲ್ಲಿ ಒಂದು ದೊಡ್ಡ ಉಯ್ಯಾಲೆ ಕಂಬ ಹಾಗೂ ಎರಡು ದೀಪಸ್ತಂಭಗಳಿವೆ.



ತ್ರಿಕೂಟೇಶ್ವರ ದೇವಾಲಯ



ಅಗಸ್ತ್ಯೇಶ್ವರ ದೇವಾಲಯ

ಈ ದೇವಾಲಯದ ಹೊರಭಾಗದಲ್ಲಿರುವ ಅಶ್ವತ್ಥನಾರಾಯಣ ಸ್ವಾಮಿಯ ವೃಕ್ಷ ಅನಾದಿ ಕಾಲದಿಂದಲೂ ಇದೆಯೆಂದೂ ಹಾಗೂ ಇದನ್ನು ಬ್ರಹ್ಮದೇವನು ಪೂಜಿಸಿದ್ದನೆಂದು ಐತಿಹ್ಯವಿದೆ. ಇದರ ಸುತ್ತಲೂ ನಾಗರ ಕಲ್ಲುಗಳನ್ನು ಮತ್ತು ಹನುಮಂತನ ವಿಗ್ರಹಗಳನ್ನು ಪ್ರತಿಷ್ಠಾಪಿಸಲಾಗಿದೆ. ಇದಕ್ಕೆ ಅನತಿ ದೂರದಲ್ಲಿ ವ್ಯಾಸರಾಯರ ಮಠವಿದೆ ಹಾಗೂ ಈ ಮಠದಲ್ಲಿ ಕೆಲವು ಗುರುಗಳ ಬೃಂದಾವನಗಳಿವೆ.

ನರಸೀಪುರದ ಎದುರು ಭಾಗದಲ್ಲಿ ಹಾಗೂ ಎಡದಂಡೆಯಲ್ಲಿ ಆನಂದೇಶ್ವರ, ಭಿಕ್ಷೇಶ್ವರ ಎಂಬ ಶಿವಾಲಯಗಳಿವೆ. ಆನಂದೇಶ್ವರ ದೇವಾಲಯವನ್ನು ಸುಮಾರು ಹದಿನೆಂಟನೆಯ ಶತಮಾನದಲ್ಲಿ ಚಿದಾನಂದ ಸ್ವಾಮಿಗಳು ಕಟ್ಟಿಸಿದರೆಂದು ಇಲ್ಲಿ ದೊರಕಿರುವ ಒಂದು ಶಾಸನವು ತಿಳಿಸುತ್ತದೆ.

ತಿರುಮಕೂಡಲು ಹಾಗೂ ನರಸೀಪುರವನ್ನು ಸೇರಿಸುವ ಸೇತುವೆಯೊಂದನ್ನು ಕಪಿಲಾನದಿಗೆ ಅಡ್ಡಲಾಗಿ ಕಟ್ಟಲಾಗಿದೆ. ನರಸೀಪುರದಲ್ಲಿ ಒಂದು ವಿಜ್ಞಾನ ಕಾಲೇಜು, ಆಸ್ಪತ್ರೆಗಳು ಹಾಗೂ ರೇಷ್ಮೆ ನೂಲಿನ ಸ್ಥಳವೂ ಇದೆ.

ನರಸೀಪುರಕ್ಕೆ ಈ ಹೆಸರು ಬಂದಿರುವುದು ಗುಂಜಾನರಸಿಂಹಸ್ವಾಮಿಯ ದೇವಾಲಯದಿಂದ ಎಂಬುದನ್ನು ಗಮನಿಸಬೇಕು.

ನರಸೀಪುರದಲ್ಲಿ ದೊರಕಿರುವ ಶಾಸನದ ಪ್ರಕಾರ ವಿಜಯನಗರ ಕಾಲದ್ದು (ರಾಜನ ಹೆಸರು ಹೇಳಿಲ್ಲ) ಎಂದೂ ಕೃಷ್ಣದೇವರಾಯನು ದೇವಾಲಯಕ್ಕೆ ನೀಡಿದ ದತ್ತಿಯ ವಿಚಾರವನ್ನು ತಿಳಿಸುತ್ತದೆ. ಮೂಗೂರು ದೊರೆಗಳು ಹಾಗೂ ಮೈಸೂರಿನ ಮುಮ್ಮಡಿ ಕೃಷ್ಣರಾಜ ಒಡೆಯರು ನರಸೀಪುರದ ದೇವಾಲಯವನ್ನು ಮತ್ತಷ್ಟು ವಿಸ್ತರಿಸಿದರು. ದ್ರಾವಿಡ ಶೈಲಿಯಲ್ಲಿ ನಿರ್ಮಿತವಾಗಿರುವ ಅಗಸ್ತ್ಯೇಶ್ವರ ದೇವಾಲಯದಲ್ಲಿ ಗರ್ಭಗೃಹ, ಸೊಗಸಾದ ಮಂಟಪ, ಪ್ರಾಕಾರ ಹಾಗೂ ಮಹಾದ್ವಾರವಿದೆ. ಮತ್ತು ಎತ್ತರದ ಗೋಪುರಗಳಿಂದ ಕೂಡಿದ ವಿಶಾಲವಾದ ದೇವಾಲಯವಾಗಿದೆ. ಮಂಟಪದ ಮುಂದೆ ಬಲಿಪೀಠದ ಎದುರಿಗಿರುವ ಕಂಬಗಳ ಮೇಲೆ ಅಂಜಲಿಬದ್ಧ ರೀತಿಯಲ್ಲಿರುವ ಮತ್ತು ಗಡ್ಡಧಾರಿಯಾದ ಎರಡು ಕಲ್ಲಿನ ಶಿಲ್ಪಗಳಿವೆ. ಇವು ಮೂಗೂರು ಅರಸರ ಹಾಗೂ ಈ ದೇವಾಲಯವನ್ನು ಕಟ್ಟಿಸಿದವರನ್ನು ಪ್ರತಿನಿಧಿಸುತ್ತದೆ. ಇದೇ ರೀತಿ ಮತ್ತೊಂದು ಮಹಾದ್ವಾರದಲ್ಲಿ ಶ್ರೀರಾಮ, ಶ್ರೀಕೃಷ್ಣ, ವರದರಾಜಸ್ವಾಮಿ ಹಾಗೂ ಆಂಡಾಳ್ ಮುಂತಾದ ಮೂರ್ತಿಗಳನ್ನೊಳಗೊಂಡ ಎಂಟು ಚಿಕ್ಕ ಗುಡಿಗಳಿವೆ. ನರಸೀಪುರದ ದೇವಾಲಯದ ಸುತ್ತಲೂ ಮಹಾವಿಷ್ಣುವಿನ ವಿವಿಧ ರೂಪಗಳೂ ಹಾಗೂ ದಶಾವತಾರಗಳ ಗಾರು ಮೂರ್ತಿಗಳಿವೆ. ಕೆಲವು ಮೂರ್ತಿಗಳ ಕೆಳಗೆ ಅವುಗಳನ್ನು ಕೆತ್ತಿದ ಕೆಲವು ಹೆಸರುಗಳು ಕಾಣಬರುತ್ತವೆ. ಈ ದೇವಾಲಯದ ದಕ್ಷಿಣ ಮತ್ತು ಪಶ್ಚಿಮದ ಗೋಡೆಗಳಲ್ಲಿ ಹಿರಣ್ಯ ಕಶ್ಯಪ ಸಂಹಾರ, ಯೋಗಾನರಸಿಂಹ, ಲಕ್ಷ್ಮೀನರಸಿಂಹ ಹಾಗೂ ನರಸಿಂಹ ಸ್ವಾಮಿಯ ಒಂಬತ್ತು ವಿವಿಧ ರೂಪಗಳನ್ನು ಗಾರೆಯಲ್ಲಿ ಕೆತ್ತಲಾಗಿದೆ.

ಮೂಲದೇವರ ಬಲಗೈ ಹೆಬ್ಬೆರಳು ಮತ್ತು ತೋರು ಬೆರಳುಗಳ ನಡುವೆ ಗುಂಜಾ ಸಸ್ಯವನ್ನು ಗಾರೆಯಲ್ಲಿ ಬಿಡಿಸಲಾಗಿದೆ. ನರಸೀಪುರ ಕ್ಷೇತ್ರ ಪಾವಿತ್ರ್ಯದಲ್ಲಿ ಕಾಶಿಗಿಂತ ಒಂದು ಗುಲಗಂಜಿ ತೂಕಕ್ಕಿಂತ ಹೆಚ್ಚು ಎಂಬುದನ್ನು ಎಲ್ಲರೂ ನಂಬಿದ್ದಾರೆ. ನರಸೀಪುರದ ದೇವಾಲಯಕ್ಕೆ ಎಡಭಾಗದಲ್ಲಿ ಸುಮಾರು ಒಂದು ಮೈಲಿ ದೂರದಲ್ಲಿ ಸೊಗಾದ ಜನಾರ್ಧನ ಮೂರ್ತಿಯ ಕಲ್ಲಿನ ಚಿಕ್ಕಗುಡಿಯಿದೆ. ಈ ದೇವಾಲಯದ ಪಶ್ಚಿಮಕ್ಕೆ 1855ರಲ್ಲಿ ನಿರ್ಮಾಣಗೊಂಡ ಪ್ರಹ್ಲಾದ ಮಂಟಪವಿದೆ.

ನರಸೀಪುರದ ಹೇಮಾವತಿ ನದಿಯ ಎಡಭಾಗದಲ್ಲಿ ಮೂಲಸ್ಥಾನೇಶ್ವರ ಗುಡಿ ಇದೆ. ಇದು ಬಹುಶಃ ಕ್ರಿ.ಶ. 1300 ರಲ್ಲಿ ಕಟ್ಟಲಾಗಿತ್ತು. ಮಳೆ ಹಾಗೂ ಗಾಳಿಯಿಂದ ಇದು ಹಾಳಾದ ನಂತರ ಈ ದೇವಾಲಯವನ್ನು ಹತ್ತೊಂಬತ್ತನೆಯ ಶತಮಾನದಲ್ಲಿ ಪುನಃನಿರ್ಮಿಸಲಾಯಿತು.

ಈಗ ಹಾಸನ ಜಿಲ್ಲೆಯ ಗೊರೂರಿನ ತ್ರಿಕೂಟೇಶ್ವರ ದೇವಾಲಯವನ್ನು ಗಮನಿಸಬಹುದು. ಇದು ಹೇಮಾವತಿ ನದಿಯ ಮೇಲಿರುವ ಒಂದು ಗ್ರಾಮ. ಶಾಸನಗಳಲ್ಲಿ ಈ ಊರಿನ ಹೆಸರು ಗೊರವೂರು ಎಂದು ಕಂಡು ಬರುತ್ತದೆ. ಈ ಊರಿಗೆ ಪ್ರಾಚೀನ ಕಾಲದಲ್ಲಿ ಶತರುದ್ರೀಯ ಪುರ ಎಂಬ ಹೆಸರಿದ್ದಿತು. ವಿಜಯಾದಿತ್ಯ ಹೆಗ್ಗಡೆ ಎಂಬುವನು ಇಲ್ಲಿ ತ್ರಿಕೂಟಲಿಂಗವನ್ನು ಸ್ಥಾಪನೆ ಮಾಡಿ, ಈ ಊರಿಗೆ ವಿಜಯಾದಿತ್ಯಪುರವೆಂಬ ಹೆಸರನ್ನಿಟ್ಟನೆಂದು 1166ರ ಹೊಯ್ಸಳರ ಶಾಸನವೊಂದು ತಿಳಿಸುತ್ತದೆ. ವಿಜಯಾದಿತ್ಯ ಸ್ಥಾಪಿಸಿದ ತ್ರಿಕೂಟೇಶ್ವರ ದೇವಾಲಯವು ಹೊಯ್ಸಳರ ಕಾಲದ ಚಿಕ್ಕದಾದ ಹಾಗೂ ಸುಂದರವಾದ ದೇವಾಲಯ. ಈ ದೇವಾಲಯದಲ್ಲಿ ಮೂರು ಗರ್ಭಗೃಹಗಳಿವೆ. ಗರ್ಭಗುಡಿಗಳ ಶಿಖರಗಳು ಕದಂಬ ನಾಗರಶೈಲಿಯಲ್ಲಿವೆ. ಈ ದೇವಾಲಯದ ಮುಂಭಾಗದಲ್ಲಿ ಹೊಯ್ಸಳರ ಶಿಲ್ಪವಿದ್ದಿತು. ಈಗ ಇವು ಉಳಿದಿಲ್ಲ.

ಇವು ಹೊಯ್ಸಳ ಮಾದರಿಯ ಕಂಬಗಳಾಗಿದ್ದು, ವಿಶೇಷವಾದ ಹೊಳಪಿನಿಂದ ಕೂಡಿವೆ. ಈ ದೇವಾಲಯದ ಎರಡೂ ಕಡೆಗಳಲ್ಲಿ ಭಗ್ನವಾಗಿರುವ ದ್ವಾರಪಾಲಕರ ಕಲ್ಲಿನ ವಿಗ್ರಹಗಳಿವೆ. ದ್ವಾರದ ಮೇಲ್ಭಾಗದಲ್ಲಿ **ಪಾಂಡವೇಶ್ವರ ಶಿಲ್ಪ** ಹಾಗೂ ಗರ್ಭಗೃಹದಲ್ಲಿ ಮೂರು ಈಶ್ವರ ವಿಗ್ರಹಗಳಿವೆ. ಒಳಭಾಗದಲ್ಲಿ ಹೊಯ್ಸಳ ಶೈಲಿಯ (ಒಳಪದರ ಕಲ್ಲಿನಿಂದ ಮಾಡಿದ) **ಗಣಪತಿ** ಮತ್ತು **ಮಹಿಷಾ ಸುರ ಮರ್ಧಿನಿ** ಹಾಗೂ **ಸೂರ್ಯ ನಾರಾಯಣ** ಮತ್ತು **ಸಪ್ತ ಮಾತೃಕೆಯರ** ವಿಗ್ರಹಗಳಿವೆ.

ತ್ರಿಕೂಟೇಶ್ವರ ದೇವಾಲಯದ ಸಮೀಪದಲ್ಲಿ ಕೈಲಾಸೇಶ್ವರ ಗುಡಿ ಇದೆ. ಇದು ಬಹುಶಃ ಪಾಳೇಗಾರರ ಸಮಯದಲ್ಲಿ ನಿರ್ಮಿಸಲಾದ ಏಕಕೂಟ ದೇವಾಲಯ.

ಗೊರೂರಿನ ಮಧ್ಯಭಾಗದಲ್ಲಿರುವ **ವಾಸುದೇವ ಗುಡಿ** ಈ ಊರಿನ ಪ್ರಮುಖ ದೇವಾಲಯ. ಇದು ಹೊಯ್ಸಳರ ಕಾಲದ ತ್ರಿಕೂಟಾಚಲ (ಮೂರು ಗರ್ಭಗುಡಿ). ಉತ್ತರದ ಗರ್ಭಗುಡಿಯು ಹೊಯ್ಸಳ ರೀತಿಯಲ್ಲಿಯೇ ಕಟ್ಟಲ್ಪಟ್ಟಿದೆ. ಉಳಿದ ಭಾಗಗಳು ಕ್ರಿ.ಶ. 1586 ರಲ್ಲಿ ಕಟ್ಟಿದ್ದಕ್ಕೆ ಶಾಸನಗಳ ಆಧಾರವಿದೆ. ಈಗಿರುವ ದೇವಾಲಯ 1868 ರಲ್ಲಿ ಕಟ್ಟಲಾಗಿದೆ ಎಂದು ಶಾಸನಗಳು ತಿಳಿಸುತ್ತವೆ. ಗೊರೂರಿನ ಈ ದೇವಾಲಯದಲ್ಲಿರುವ ವಾಸುದೇವ ವಿಗ್ರಹ ಹೊಯ್ಸಳರ ಶೈಲಿಯ ಕಲ್ಲಿನ ಸುಂದರಶಿಲ್ಪ. ಈ ದೇವಾಲಯದ ಕೆಲವು ಗುಡಿಗಳಲ್ಲಿ ಭಾಷ್ಯಕಾರ ಸನ್ನಿಧಿ. ವಿಷ್ವಕ್ಸೇನ ಮುಂತಾದ ವಿಗ್ರಹಗಳು ಕಾಣಬರುತ್ತವೆ.

ಇಲ್ಲಿರುವ ಯೋಗಾನರಸಿಂಹಸ್ವಾಮಿ ದೇವಾಲಯ ಹೇಮಾವತಿ ನದಿಯ ಬಲದಂಡೆಯ ಮೇಲಿದೆ. ನಿಧಾನವಾಗಿ ಹರಿಯುವ ಹೇಮಾವತಿ ನದಿ ಹಾಗೂ ನದಿಗೆ ಇಳಿಯುವ ಮೆಟ್ಟಿಲುಗಳ ಸಾಲು ಗುಡಿಯ ಮುಂಭಾಗದ ಎತ್ತರವಾದ ವೃಕ್ಷಗಳು ಗೊರೂರಿನ ದೇವಾಲಯಕ್ಕೆ ಸೊಬಗನ್ನು ನೀಡುತ್ತಿವೆ. ಈ ದೇವಾಲಯದಲ್ಲಿ ಗರ್ಭಗೃಹ ಹಾಗೂ ಸುಕನಾಸಿಗಳಿವೆ. ಈ ದೇವಾಲಯದ ಮುಂಭಾಗದಲ್ಲಿ ಗೋಪುರ ಮಂಟಪವಿದೆ. ಈ ದೇವಾಲಯದ ಗರ್ಭಗೃಹದಲ್ಲಿರುವ ಯೋಗಾನರಸಿಂಹಸ್ವಾಮಿಯ ವಿಗ್ರಹ ಚೋಳರ ಕಾಲದಲ್ಲಿ ನಿರ್ಮಿತವಾದದ್ದು. ಗೊರೂರು ಗ್ರಾಮದಲ್ಲಿ ಒಂದು ಪ್ರೌಢಶಾಲೆ ಇದೆ. ಗೊರೂರುಹಳ್ಳಿಯಲ್ಲಿ ವರ್ಷಕ್ಕೊಮ್ಮೆ ಜಾತ್ರೆ ನಡೆಯುತ್ತದೆ. ಗೊರೂರಿನ ಬಳಿಯಲ್ಲಿ ಹೇಮಾವತಿ ನದಿಗೆ ಅಡ್ಡಲಾಗಿ ಅಣೆಕಟ್ಟನ್ನು 1977 ರಲ್ಲಿ ನಿರ್ಮಿಸಲಾಯಿತು.

ಈಗ ಕಿಕ್ಕೇರಿಯ ಬ್ರಹ್ಮೇಶ್ವರ ದೇವಾಲಯವನ್ನು ಗಮನಿಸಬಹುದು. ಕಿಕ್ಕೇರಿಯು ಕೃಷ್ಣರಾಜಪೇಟೆಗೆ ಹದಿನಾರು ಕಿ.ಮೀ. ದೂರದಲ್ಲಿದೆ. ಇದು ಹೊಯ್ಸಳ ಕಾಲದಲ್ಲಿ ಒಂದು ಅಗ್ರಹಾರವಾಗಿದ್ದಿತು. ಕಿಕ್ಕೇರಿಯಲ್ಲಿ ಅನೇಕ ದೇವಾಲಯಗಳಿವೆ. ಕಿಕ್ಕೇರಿಯಲ್ಲಿ ಮಲ್ಲೇಶ್ವರ, ಜನಾರ್ಧನ ಹಾಗೂ ಇನ್ನೂ ಹಲವು ದೇವಾಲಯಗಳಿವೆ ಕಿಕ್ಕೇರಿಯಲ್ಲಿದ್ದ ಕೇಶವಮೂರ್ತಿಯು ಈಗ ನ್ಯೂಯಾರ್ಕಿನ ಮೆಟ್ರೋಪಾಲಿಟನ್ ವಸ್ತು ಸಂಗ್ರಹಾಲಯದಲ್ಲಿದೆ. ಕೇಶವ ಮೂರ್ತಿಯನ್ನು ಕೆತ್ತಿದವನು ಪ್ರಸಿದ್ಧನಾದ ಬಳ್ಳಿಗಾಮೆಯ ದಾಸೋಜ ಎಂಬ ಖ್ಯಾತ ಶಿಲ್ಪಿ ಎಂದು ಗೊತ್ತಾಗುತ್ತದೆ. ಕಿಕ್ಕೇರಿಯಲ್ಲಿ ಈಗ ಭವ್ಯವಾಗಿರುವ ಹೊಯ್ಸಳ ದೇವಾಲಯವೆಂದರೆ ಬ್ರಹ್ಮೇಶ್ವರ ದೇವಾಲಯ. ಇದನ್ನು 1171 ರಲ್ಲಿ ಬಮ್ಮವೆ ನಾಯಕಿತಿ ಕಟ್ಟಿಸಿದಳು. ಇದರ ನವರಂಗದ ಕಂಬಗಳ ಮೇಲಿರುವ ಮದನಿಕೆಯ ವಿಗ್ರಹಗಳು ಬೇಲೂರಿನ ಚೆನ್ನಕೇಶವ ದೇವಾಲಯದ ಮದನಿಕೆಯರನ್ನೂ ನೆನಪಿಗೆ ತರುತ್ತವೆ. ಕಿಕ್ಕೇರಿಯಲ್ಲಿ ಈಚೆಗೆ ಕಟ್ಟಿರುವ ನರಸಿಂಹ ದೇವಾಲಯದಲ್ಲಿ, ನರಸಿಂಹ ಸ್ವಾಮಿ, ಜನಾರ್ಧನ ಸ್ವಾಮಿಯ, ತಿರುಮಲ ದೇವರ ಕಲ್ಲಿನ ವಿಗ್ರಹಗಳಿವೆ. ಕಿಕ್ಕೇರಿಯ ಒಂದು ಕಿ.ಮೀ ದೂರದಲ್ಲಿ ಕಿಕ್ಕೇರಮ್ಮ ಮತ್ತು ಉಪ್ಪರಿಗೆ ಬಸವಣ್ಣನ ದೇವಾಲಯ ಗಳೂ ಇವೆ. ಕಿಕ್ಕೇರಿಯಲ್ಲಿ ಒಂದು ವಿಶಾಲವಾದ ಕೆರೆಯೂ ಇದೆ.

ಒಂದನೇ ಪುಟದಿಂದ

ರೋಹಿಣಿ ಸಿಂಧೂರಿ ವಿರುದ್ಧ ತನಿಖೆಗೆ ಆದೇಶ

ದೂರು ಸಲ್ಲಿಸಿದ್ದರು. ಪಾರಂಪರಿಕ ಕಟ್ಟಡವಾದ ಮೈಸೂರು ಜಿಲ್ಲಾಧಿಕಾರಿಗಳ ಅಧಿಕೃತ ನಿವಾಸ ಜಲಸನ್ನಿಧಿ ವ್ಯಾಪ್ತಿಯಲ್ಲಿ ಪಾರಂಪರಿಕ ಇಲಾಖೆ ಅನುಮತಿ ಇಲ್ಲದೇ 50 ಲಕ್ಷ ರೂ. ವೆಚ್ಚದಲ್ಲಿ ಒಳಾಂಗಣ ಈಜುಕೊಳ ಮತ್ತು ಜಿಮ್, 16.35 ಲಕ್ಷ ರೂ. ವೆಚ್ಚದಲ್ಲಿ ಕಟ್ಟಡದ ನೆಲಹಾಸಿಗೆ, ವೆಟ್ರಿಫೈಡ್ ಟೈಲ್ಸ್ ಅಳವಡಿಸಿ ಹೆರಿಟೇಜ್ ರೆವುಲೇಷನ್ ಉಲ್ಲಂಘನೆ ಮಾಡಲಾಗಿದೆ ಎಂದು ಸಾ.ರಾ. ಮಹೇಶ್ 2021ರ ಜುಲೈ 30ರಂದು ದೂರು ಸಲ್ಲಿಸಿ ದುಂದುವೆಚ್ಚ ಮಾಡಿರುವ ಕುರಿತು ವಿಚಾರಣೆ ನಡೆಸಿ ನವೀಕರಣಕ್ಕೆ ವೆಚ್ಚ ಮಾಡಿರುವ ಹಣವನ್ನು ರೋಹಿಣಿ ಸಿಂಧೂರಿ ಅವರಿಂದ ವಸೂಲಿ ಮಾಡಬೇಕು ಎಂದು ಕೋರಿದ್ದರು.

2021ರ ಮೇ ತಿಂಗಳಿನಲ್ಲಿ ಮುಕ್ತಿಧಾಮದ ಮಾಹಿತಿ ಪ್ರಕಾರ ಕೊರೊನಾ ಸೋಂಕಿನಿಂದ ಮೃತಪಟ್ಟವರ ಸಂಖ್ಯೆ 969 ಆಗಿದ್ದು, ಅಂದಿನ ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ ಸರ್ಕಾರಕ್ಕೆ ಹಾಗೂ ಜಿಲ್ಲೆಯ ಜನತೆಗೆ ಸೋಂಕಿನಿಂದ ಮೃತಪಟ್ಟವರ ಸಂಖ್ಯೆ 238 ಎಂದು ತಪ್ಪಾಗಿ ಮಾಹಿತಿ ನೀಡಿದ್ದಾರೆ. ಅಲ್ಲದೇ ಚಾಮರಾಜನಗರ ಜಿಲ್ಲೆಯಲ್ಲಿ ಆಕ್ಸಿಜನ್ ಕೊರತೆಯಿಂದ 24 ಕೊರೊನಾ ಸೋಂಕಿತರ ಸಾವಿಗೆ ಕಾರಣಕರ್ತರಾಗಿದ್ದಾರೆ. ಹೀಗಾಗಿ ಅವರ ವಿರುದ್ಧ ಉನ್ನತ ಮಟ್ಟದ ತನಿಖೆ ನಡೆಸಿ ಕ್ರಮ ಜರುಗಿಸಬೇಕೆಂದು ಮೈಸೂರಿನ ಮಾಜಿ ಉಪ ಮೇಯರ್ ಶೈಲೇಂದ್ರ ಅವರು 2021ರ ಜೂನ್ 15ರಂದು ಸರ್ಕಾರಕ್ಕೆ ದೂರು ಸಲ್ಲಿಸಿದ್ದರು.

ಈ ಎಲ್ಲಾ ಪ್ರಕರಣಗಳ ಬಗ್ಗೆ ಪ್ರಾಥಮಿಕ ತನಿಖೆ ನಡೆಸಿ ಆರೋಪಗಳ ಸತ್ಯಾಂಶಗಳ ಬಗ್ಗೆ ನಿಯಮಾನುಸಾರ ಪರಿಶೀಲಿಸಿ ವಿವರವಾದ ವರದಿಯನ್ನು 30 ದಿನಗಳ ಒಳಗಾಗಿ ಸಲ್ಲಿಸುವಂತೆ ಹಿರಿಯ ಐಎಎಸ್ ಅಧಿಕಾರಿ ಎನ್.ಜಯರಾಂ ಅವರನ್ನು ತನಿಖಾಧಿಕಾರಿಯಾಗಿ ನೇಮಿಸಿ ರಾಜ್ಯ ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಅಧೀನ ಕಾರ್ಯದರ್ಶಿ ಜೇಮ್ಸ್ ತರಕನ್ ಅವರು ಮೇ 17ರಂದು ಆದೇಶ ಹೊರಡಿಸಿದ್ದಾರೆ.

ಡಿಕೆಶಿ, ಸಿದ್ದರಾಮಯ್ಯ ಜಂಗೀಕುಸ್ತಿ

ಉಳಿದು ತಮ್ಮ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಕಸರತ್ತು ನಡೆಸಿದ್ದಾರೆ. ಪರಿಷತ್ತಿನ ಪ್ರತಿಪಕ್ಷದ ನಾಯಕರಾಗಿ ಕಾರ್ಯ ನಿರ್ವಹಿಸಿದ್ದ ಎಸ್.ಆರ್.ಪಾಟೀಲ್‌ಗೆ ಪರಿಷತ್ತಿನ ಅಭ್ಯರ್ಥಿ ಮಾಡಲು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಪಟ್ಟು ಹಿಡಿದಿದ್ದಾರೆ. ಆದರೆ ಸಿದ್ದರಾಮಯ್ಯ ಬಿಲ್‌ಕುಲ್ ಇದಕ್ಕೆ ಒಪ್ಪುತ್ತಿಲ್ಲ. ಅವರು ಪಕ್ಷವನ್ನು ಬದಿಗಿಟ್ಟು, ಕಾರ್ಯಕ್ರಮಗಳನ್ನು ಮಾಡುತ್ತಿದ್ದಾರೆ. ಬಿಜೆಪಿ ಸೇರಲು ಒಂದು ಹೆಜ್ಜೆ ಮುಂದಿಟ್ಟಿದ್ದಾರೆ. ಇಂತಹವರಿಗೆ ಟಿಕೆಟ್ ಬೇಡ ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಾದ ಮಾಡಿದ್ದಾರೆ.

ಎಸ್.ಆರ್.ಪಾಟೀಲರಿಗೆ ನಾವು ಅನ್ಯಾಯ ಮಾಡಿದ್ದೇವೆ. ಪ್ರತಿಪಕ್ಷದ ನಾಯಕರಾಗಿದ್ದವರು, ಸಚಿವರಾಗಿ ಕಾರ್ಯನಿರ್ವಹಿಸಿದ್ದಾರೆ. ಅಂತಹವರಿಗೆ ಅವಕಾಶ ನೀಡಬೇಕೆನ್ನುವುದು ಶಿವಕುಮಾರ್ ವಾದ. ಅಷ್ಟೇ ಅಲ್ಲ, ಆಸ್ಕರ್ ಫರ್ನಾಂಡೀಸ್ ಮಗಳಿಗೂ ಈ ಬಾರಿ ಅವಕಾಶ ಕಲ್ಪಿಸಬೇಕೆಂದು ಶಿವಕುಮಾರ್ ವರಿಷ್ಠರಿಗೆ ಮನವಿ ಮಾಡಿಕೊಂಡಿದ್ದಾರೆ. ಆದರೆ ಮುಸ್ಲಿಂ ಸಮುದಾಯಕ್ಕೆ ಸೇರಿದವರಿಗೆ ಒಂದು ಟಿಕೆಟ್ ನೀಡಬೇಕೆಂಬುದು ಸಿದ್ದರಾಮಯ್ಯ ಅವರ ವಾದವಾಗಿದೆ. ಪ್ರತಿ ಬಾರಿ ಮುಸ್ಲಿಂರಿಗೆ ನೀಡುತ್ತಿದ್ದು, ಕ್ರಿಶ್ಚಿಯನರಿಗೆ ಅವಕಾಶ ನೀಡಲು ಸಾಧ್ಯವಾಗಿಲ್ಲ. ಆದ್ದರಿಂದ ಈ ಬಾರಿ ಆ ಸಮುದಾಯಕ್ಕೆ ನೀಡಬೇಕೆಂಬುದು ಶಿವಕುಮಾರ್ ವಾದ.

ವಿಧಾನಸಭೆಯ ಕಾಂಗ್ರೆಸ್ ಸಂಖ್ಯಾಬಲದ ಮೇಲೆ ಪರಿಷತ್ತಿಗೆ ಎರಡು, ರಾಜ್ಯಸಭೆಗೆ ಒಂದು ಸ್ಥಾನವನ್ನು ಗೆಲ್ಲುವ ಅವಕಾಶ ಪಕ್ಷಕ್ಕಿದೆ. ಸುಲಭವಾಗಿ ಗೆಲ್ಲಬಹುದಾದ ಸ್ಥಾನಗಳನ್ನು ತಮ್ಮವರಿಗೆ ಕೊಡಿಸಲು ಉಭಯ ನಾಯಕರು ಟೊಂಕಕಟ್ಟಿ ನಿಂತಿದ್ದಾರೆ. ಇದರಿಂದ ಆಕಾಂಕ್ಷಿಗಳೇ ಆಕಾಶ ನೋಡುವಂತಾಗಿದೆ. ಆಕಾಂಕ್ಷಿಗಳಂತೂ ಯಾರ ಮನವೊಲಿಸಿದರೆ ಅವಕಾಶ ದೊರೆಯಬಹುದೆಂದು ಬೆಳಗ್ಗೆ ಒಬ್ಬರ ಮನೆಗೆ ಹೋದರೆ, ಸಂಜೆ ಇನ್ನೊಬ್ಬರ ಮನೆಗೆ ಹೋಗುವುದು ಸಾಮಾನ್ಯವಾಗಿದೆ.

ಮೈ.ವಿ.ರವಿಶಂಕರ್ ನಾಮಪತ್ರ ಸಲ್ಲಿಕೆ

ನಾಮಪತ್ರ ಸಲ್ಲಿಸಿದರು. ಈ ವೇಳೆ ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ಉಪಸ್ಥಿತರಿದ್ದರು. ಮೈಸೂರು ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಕ್ರೀಡಾ ಸಚಿವ ನಾರಾಯಣಗೌಡ, ಸಂಸದ ಪ್ರತಾಪ್ ಸಿಂಹ, ಶಾಸಕರಾದ ಎಸ್.ಎ.ರಾಮದಾಸ್, ಎಲ್.ನಾಗೇಂದ್ರ ಸೇರಿದಂತೆ ಇನ್ನಿತರರು ಪ್ರಾದೇಶಿಕ ಕಚೇರಿ ಮುಂದೆ ಉಪಸ್ಥಿತರಿದ್ದರು. ದಕ್ಷಿಣ ಪದವೀಧರ ಕ್ಷೇತ್ರವು ಮೈಸೂರು, ಮಂಡ್ಯ, ಚಾಮರಾಜನಗರ ಹಾಗೂ ಹಾಸನ ಜಿಲ್ಲೆಯನ್ನು ಒಳಗೊಂಡಿದೆ. ಜೂನ್ 13ರಂದು ಚುನಾವಣೆ ನಡೆಯಲಿದ್ದು, ಇಂದು ಅಧಿಸೂಚನೆ ಹೊರಬಿದ್ದಿದೆ.

40 ವರ್ಷಕ್ಕೆ ಗುತ್ತಿಗೆ

ಮೈಸೂರು ಜಿಲ್ಲೆಯ ಜಿಲ್ಲಾಧಿಕಾರಿಗಳ ಹೆಸರಲ್ಲಿ ಜಂಟಿ ಖಾತೆಯನ್ನು ತೆರೆಯುವುದು. ಮೈಸೂರು ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿಗೆ ಪಾವತಿಸಬೇಕಾದ ಸಾಲವನ್ನು ಏಕ ತೀರುವಳಿ ಮೂಲಕ ಮೊದಲಿಗೆ ಪಾವತಿಸುವುದು.

ತದ ನಂತರ ಸರ್ಕಾರದ ಸಾಲ, ಹಣಕಾಸು ಸಂಸ್ಥೆಗಳು ಮತ್ತು ಇತರ ಶಾಸನಬದ್ಧ ಪಾವತಿಗಳಿಗಾಗಿ ಆದ್ಯತೆಗನುಸಾರ ಹಂಚಿಕೆ ಮಾಡಲು ಕ್ರಮ ವಹಿಸತಕ್ಕದು. ಗುತ್ತಿಗೆದಾರರು 2022–23ನೇ ಹಂಗಾಮಿನಿಂದಲೇ ಕಬ್ಬು ಅರೆಯುವ ಕಾರ್ಯವನ್ನು ಪ್ರಾರಂಭಿಸಬೇಕು. ಗುತ್ತಿಗೆ ಅವಧಿಯಲ್ಲಿ ಕೇಂದ್ರ ಸರ್ಕಾರ ನಿಗದಿಪಡಿಸಬಹುದಾದ ಎಫ್‌ಆರ್‌ಪಿಯಂತೆ ಹಾಗೂ ರಾಜ್ಯ ಸರ್ಕಾರ ನಿಗದಿಪಡಿಸಬಹುದಾದ ರಾಜ್ಯ ಸಲಹಾ ಬೆಲೆಯಂತೆ ರೈತರ ಕಬ್ಬಿಗೆ ಬಿಲ್ಲನ್ನು ಸಕಾಲದಲ್ಲಿ ಪಾವತಿಸಬೇಕು. 2061–62ಕ್ಕೆ ಗುತ್ತಿಗೆ ಅವಧಿ ಮುಗಿದ ನಂತರ ಯಾವುದೇ ರೀತಿಯ ಹೊಣೆಗಾರಿಕೆ ಹಾಗೂ ಋಣಭಾರಗಳಿಲ್ಲದೇ ಕಾರ್ಖಾನೆಯನ್ನು ಆಡಳಿತ ಮಂಡಳಿಗೆ ವರ್ಗಾಯಿಸತಕ್ಕದು ಎಂಬ ಷರತ್ತುಗಳೊಂದಿಗೆ ಶ್ರೀರಾಮ ಸಕ್ಕರೆ ಕಾರ್ಖಾನೆಯನ್ನು ನಿರಾಣಿ ಶುಗರ್ಸ್‌ಗೆ ಗುತ್ತಿಗೆ ನೀಡುವ ಆದೇಶವನ್ನು ರಾಜ್ಯ ಸರ್ಕಾರದ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ (ಸಕ್ಕರೆ) ಅಧೀನ ಕಾರ್ಯದರ್ಶಿ ಸುಪ್ರಿಯಾ ಪತ್ತಾರ ಅವರು ಮೇ 17ರಂದು ಆದೇಶ ಹೊರಡಿಸಿದ್ದಾರೆ.

ಕನ್ನಡವೇ ಬಾರದ ಉತ್ತರಾಖಂಡದ ಅಂಧ ವಿದ್ಯಾರ್ಥಿನಿ 541 ಅಂಕದೊಂದಿಗೆ ತೇರ್ಗಡೆ

●ಕನ್ನಡ ವಿಷಯದಲ್ಲಿ 92 ಅಂಕಗಳಿಕೆ ●ಉತ್ತರಾಖಂಡದಿಂದ ಮೈಸೂರಿಗೆ ಕರೆತಂದು ವಿದ್ಯಾಭ್ಯಾಸ ಕೊಡಿಸಿದ ಪ್ರೊ.ತಾರಾಮೂರ್ತಿ ●ಮೈಸೂರಲ್ಲೇ ವಿದ್ಯಾಭ್ಯಾಸ ಮುಂದುವರೆಸಿ ಐಎಎಸ್ ಮಾಡುವ ಕನಸು

ಮೈಸೂರು,ಮೇ 19(ಜಿಎ)–ತಂದೆ–ತಾಯಿಯ ನಿರ್ಲಕ್ಷ್ಯದಿಂದ ಟಿ.ಬಿ.ಖಾಯಿಲೆಗೆ ತುತ್ತಾಗಿ ದೃಷ್ಟಿ ಕಳೆದುಕೊಂಡ ಉತ್ತರಾಖಂಡದ ವಿದ್ಯಾರ್ಥಿನಿ ಮೈಸೂರಿನ ಸಹೃದಯಿಗಳ ಸಹಾಯ ಸಹಕಾರದಿಂದ ಕನ್ನಡದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಎದುರಿಸಿ ಉತ್ತಮ ಸಾಧನೆ ಮಾಡಿದ್ದಾಳೆ.

ಉತ್ತರಾಖಂಡ ಜೋಶಿಮಠ ನಗರದ ಉರ್ಗಮ್ ಕಣಿವೆ ನಿವಾಸಿಯಾಗಿರುವ ಕಲ್ಪನಾ, ಕೇವಲ ಮೂರೇ ತಿಂಗಳಲ್ಲಿ ಕನ್ನಡ ಕಲಿತು ಕನ್ನಡದಲ್ಲಿಯೇ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆದಿದ್ದು, 514 ಅಂಕಗಳನ್ನು ಪಡೆದಿದ್ದಾಳೆ. ಮತ್ತೊಂದು ವಿಶೇಷವೆಂದರೆ ಕನ್ನಡವೇ ಬಾರದಿದ್ದ ಈಕೆ ಕನ್ನಡದಲ್ಲಿ 92 ಅಂಕಗಳನ್ನು ಪಡೆದುಕೊಳ್ಳುವ ಮೂಲಕ ವಿಶೇಷ ಸಾಧನೆ ಮಾಡಿದ್ದಾಳೆ.

ರವೀಂದ್ರ ಸಿಂಗ್ ಮತ್ತು ಆಶಾ ಅವರ ಪುತ್ರಿಯಾಗಿರುವ ಕಲ್ಪನಾ ಮೂರು ವರ್ಷದ ಮಗುವಾಗಿದ್ದಾಗ ಅವರ ತಾಯಿ ಮೃತಪಟ್ಟಿದ್ದಾರೆ. ನಂತರ ಅವರ ತಂದೆ ಮತ್ತೊಂದು ಮದುವೆಯಾಗಿದ್ದಾರೆ. ಕೊನೆಗೆ ಮಗಳ ಪೋಷಣೆಯ ಬಗ್ಗೆ ನಿರ್ಲಕ್ಷ್ಯತೆ ಹೆಚ್ಚಾಯಿತು. ಈ ವೇಳೆ ಅವರ ತಾತಾ ರಾಮ್‌ಸಿಂಗ್ ನೇಗಿ ಅವರು ಪೋಷಣೆ ಮಾಡಿದ್ದಾರೆ. ಈ ವೇಳೆ ಕಲ್ಪನಾಗೆ ಟಿ.ಬಿ. ಖಾಯಿಲೆ ಕಾಣಿಸಿಕೊಂಡಿತು.

ಒಂದು ಕಡೆ ತಂದೆಯ ನಿರ್ಲಕ್ಷ್ಯ ಟಿ.ಬಿ. ಖಾಯಿಲೆ ಬಾಧಿಸಿದ ಪರಿಣಾಮ ಆಕೆ ದೃಷ್ಟಿ ಕಳೆದುಕೊಂಡಿದ್ದಾಳೆ. ಈ ಸಮಸ್ಯೆಗೂ ಮುನ್ನ ಉತ್ತರಾಖಂಡ ಜೋಶಿಮಠ ನಗರದ ಉರ್ಗಮ್ ಕಣಿವೆಯಲ್ಲೇ 3ನೇ ತರಗತಿವರೆಗೂ ವ್ಯಾಸಂಗ ಮಾಡುತ್ತಿದ್ದ ಕಲ್ಪನಾಳ ವಿದ್ಯಾಭ್ಯಾಸ ಮೊಟಕುಗೊಂಡಿತ್ತು. ತಾತಾ ಮೊಮ್ಮಗಳಿಗೆ ವಿದ್ಯಾಭ್ಯಾಸ ಕೊಡಿಸಿ ಅವಳ ಜೀವನ ರೂಪಿಸಬೇಕು ಎಂಬ ಆಶಯದಿಂದ ಮೈಸೂರಿನ ತಾರಾಮೂರ್ತಿ ಅವರ ಮೊರೆ ಹೋಗಿದ್ದಾರೆ.



ಮೈಸೂರಿನ ನಿವಾಸಿಯಾಗಿರುವ ಪ್ರೊ. ತಾರಾಮೂರ್ತಿ ಅವರು ಹಲವಾರು ವರ್ಷಗಳು ಅಧ್ಯಾಪಕರಾಗಿದ್ದರು. ಸದ್ಯ ಈಶಾ ಫೌಂಡೇಶನ್ ಸ್ವಯಂ ಸೇವಕರಾಗಿದ್ದು, ಅವರು ದೇಶದ ವಿವಿಧ ರಾಜ್ಯಗಳ ವೈವಿಧ್ಯಮಯ ಜೀವನ ಪರಿ ಅರಿಯಲು ಆಯಾ ಸ್ಥಳದಲ್ಲಿ ನಿಗದಿತ ಕಾಲ ವಾಸ್ತವ್ಯ ಹೂಡುತ್ತಾರೆ. ಅದರಂತೆ ಕಳೆದ 4 ವರ್ಷಗಳ ಹಿಂದೆ ಉತ್ತರಾಖಂಡ ಜೋಶಿಮಠ ನಗರದ ಉರ್ಗಮ್ ಕಣಿವೆಗೆ ತೆರಳಿದ್ದ ಅವರು ಕಲ್ಪನಾ ಅವರ ಮನೆಯಲ್ಲೇ ಬಾಡಿಗೆಗೆ 2 ವರ್ಷಗಳ ನೆಲೆನಿಂತರು. ಈ ವೇಳೆ ಕಲ್ಪನಾ ಅವರ ತಾತಾ ಮೊಮ್ಮಗಳ ಮೇಲಿನ ಕಾಳಜಿಯಿಂದ ಪ್ರೊ.ತಾರಾಮೂರ್ತಿ ಅವರ ನೆರವು ಕೇಳಿದ್ದಾರೆ. ಭಾರತದ ಯಾವುದೇ ಮೂಲೆಯಲ್ಲಾದರೂ ನನ್ನ ಮೊಮ್ಮಗಳು ವಿದ್ಯೆ ಕಲಿಯಬೇಕು. ತಾವು ಆಕೆಯ ಕರೆದುಕೊಂಡು ಅವಳಿಗೆ ಮಾರ್ಗದರ್ಶನ ಮಾಡಿ ಎಂದು ಮನವಿ ಮಾಡಿಕೊಂಡಿದ್ದಾರೆ.

ಕಲ್ಪನಾ ಅವರ ತಾತಾನ ಮನವಿಗೆ ಸ್ಪಂದಿಸಿರುವ ಪ್ರೊ.ತಾರಾಮೂರ್ತಿ, ಕಲ್ಪನಾಳನ್ನು ಮೊದಲು ಬೆಂಗಳೂರಿನಲ್ಲಿರುವ ನಾರಾಯಣ ನೇತ್ರಾಲಯದಲ್ಲಿ ದೃಷ್ಟಿ ಪರೀಕ್ಷೆ ಮಾಡಿಸಿದ್ದಾರೆ. ಪರೀಕ್ಷಿಸಿದ ವೈದ್ಯರು ಈಕೆಯ ಕಣ್ಣು ಮತ್ತು ಮೆದುಳಿನ ಸಂಪರ್ಕ ಕಡಿತಗೊಂಡಿದ್ದು, ದೃಷ್ಟಿ ಬರುವುದು ಅಸಾಧ್ಯವೆಂದು ತಿಳಿಸಿದ್ದಾರೆ. ನಂತರ ಕಲ್ಪನಾಳನ್ನು ಮೈಸೂರಿಗೆ ಕರೆದುಕೊಂಡು ಬಂದಿದ್ದು, ಮೈಸೂರಿನ ರಂಗರಾವ್ ಮೆಮೋರಿಯಲ್ ವಿಕಲಚೇತನರ ಶಾಲೆಗೆ ದಾಖಲು ಮಾಡಿಸಿದರು.



"ಮೈಸೂರು ಶಿಕ್ಷಣಕ್ಕೆ ಶಕ್ತಿಯಾಗಿದೆ. ಇಲ್ಲಿಗೆ ಬರುವ ಯಾರಿಗೂ ಶಿಕ್ಷಣದಿಂದ ವಂಚನೆಯಾಗಿಲ್ಲ. ಎಲ್ಲರೂ ಉತ್ತಮ ಸಾಧನೆ ಮಾಡಿದ್ದಾರೆ. ಅದರಂತೆ ಉತ್ತರಾಖಂಡ ಜೋಶಿಮಠ ನಗರದ ಉರ್ಗಮ್ ಕಣಿವೆ ಪ್ರದೇಶದ ಕುಗ್ರಾಮದಿಂದ ಬಂದ ಕಲ್ಪನಾ ತನ್ನ ಛಲದಿಂದ ಕನ್ನಡ ಕಲಿತು ಕನ್ನಡದಲ್ಲೇ ಪರೀಕ್ಷೆ ಎದುರಿಸಿದ್ದಾಳೆ.

–ಪ್ರೊ.ತಾರಾಮೂರ್ತಿ

"ನನಗಾಗಿ ಪ್ರೊ.ತಾರಾಮೂರ್ತಿ ಅವರು ಬಾರೀ ಶ್ರಮ ಪಟ್ಟಿದ್ದು, ತಡರಾತ್ರಿವರೆಗೂ ಪಾಠ ಮಾಡಿದ್ದಾರೆ. ಅವರ ಸಹಕಾರದಿಂದ ನಾನು ಇಂದು ಉತ್ತಮ ಅಂಕ ಗಳಿಸಿದ್ದೇನೆ. ಮುಂದಿನ ವಿದ್ಯಾಭ್ಯಾಸವನ್ನು ಮೈಸೂರಲ್ಲೇ ಮುಂದುವರೆಸಿ. ಐಎಎಸ್ ಮಾಡುವಾಸೆ. **–ಕಲ್ಪನಾ, ವಿದ್ಯಾರ್ಥಿನಿ**

ಶಾಲೆಯ ಶಿಕ್ಷಕರು ಮತ್ತು ಸಹಪಾಠಿಗಳ ಸಹಕಾರದಿಂದ ಕಲ್ಪನಾ ಮೂರೇ ತಿಂಗಳಿನಲ್ಲಿ ಕನ್ನಡ ಕಲಿತು ನಿರರ್ಗಳವಾಗಿ ಮಾತನಾಡಲು ಆರಂಭಿಸಿದ್ದಾಳೆ. ಕೊರೊನಾ ಕಾರ್ಮೋಡದಿಂದ ಆನ್‌ಲೈನ್ ಶಿಕ್ಷಣಕ್ಕೊಳಗಾಗಿ ಆಕೆಯ ವಿದ್ಯಾಭ್ಯಾಸಕ್ಕೆ ಯಾವುದೇ ತೊಂದರೆ ಆಗಬಾರದು ಎಂಬ ಉದ್ದೇಶದಿಂದ ಪ್ರೊ.ತಾರಾಮೂರ್ತಿ ಅವರೇ ಮನೆಯಲ್ಲಿ ಆಕೆಗೆ ಎಲ್ಲ ವಿಷಯಗಳ ಬಗ್ಗೆ ಪಾಠ ಮಾಡಿದ್ದಾರೆ. ಕಲ್ಪನಾಳನ್ನು ನೇರವಾಗಿ ಹತ್ತನೇ ತರಗತಿ ಪರೀಕ್ಷೆ ಬರೆಸಲು ನಿರ್ಧರಿಸಿ, ಈ ಬಾರಿ ನಡೆದ ಪರೀಕ್ಷೆಗೆ ಸಂಪೂರ್ಣವಾಗಿ ತಯಾರು ಮಾಡಿದ್ದಾರೆ. ಕಲ್ಪನಾಳ ಛಲ ಮತ್ತು ಪ್ರೊ.ತಾರಾಮೂರ್ತಿ ಸಹಕಾರದಿಂದ ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು ಪಡೆದಿದ್ದು, ಕನ್ನಡದಲ್ಲೇ 92 ಅಂಕಗಳನ್ನು ಗಳಿಸಿದ್ದಾಳೆ ಕಲ್ಪನಾ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಅಡ್ಡದಾರಿ ಹಿಡಿದು ಜೀವನ ದುಸ್ತರ ಮಾಡಿಕೊಳ್ಳಬೇಡಿ

● ಪೊಲೀಸ್ ಕಾನ್‌ಸ್ಟೇಬಲ್‌ಗಳಿಗೆ ಎಡಿಜಿಪಿ ಅಲೋಕ್ ಕುಮಾರ್ ಕಿವಿಮಾತು
● ತರಬೇತಿ ಪಡೆದ ಪೊಲೀಸ್ ಕಾನ್‌ಸ್ಟೇಬಲ್ ಪ್ರಶಿಕ್ಷಣಾರ್ಥಿಗಳ ನಿರ್ಗಮನ ಪಥ ಸಂಚಲನದಲ್ಲಿ ಭಾಗಿ





ಮೈಸೂರು, ಮೇ 19(ಆರ್‌ಕೆ)– ನೇಮಕಾತಿ, ಸ್ಥಳ ನಿಯೋಜನೆ, ಪ್ರೊಮೋಷನ್‌ಗಳಿಗೆ ಅಡ್ಡದಾರಿ ಹಿಡಿದು ಜೀವನ ದುಸ್ತರ ಮಾಡಿಕೊಳ್ಳಬೇಡಿ ಎಂದು ಕಾನೂನು–ಸುವ್ಯವಸ್ಥೆ ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕ ಅಲೋಕ್ ಕುಮಾರ್ ಅವರು ಇಂದಿಲ್ಲಿ ಪೊಲೀಸರಿಗೆ ಕಿವಿಮಾತು ಹೇಳಿದ್ದಾರೆ.

ಮೈಸೂರಿನ ಲಲಿತಮಹಲ್ ರಸ್ತೆಯಲ್ಲಿರುವ ಕೆಎಸ್‌ಆರ್‌ಪಿ ಪರೇಡ್ ಮೈದಾನದಲ್ಲಿ ಇಂದು ನಡೆದ ರಾಜ್ಯ ಮೀಸಲು ಪಡೆ 5ನೇ ಪಡೆ ಮತ್ತು ತುಮಕೂರಿನ 12ನೇ ಪಡೆಯ ಹೆಚ್ಚುವರಿ ತರಬೇತಿ ಶಾಲೆಯಲ್ಲಿ 9 ತಿಂಗಳ ಬುನಾದಿ ತರಬೇತಿ ಪಡೆದ ವಿಶೇಷ ಮೀಸಲು ಪೊಲೀಸ್ ಕಾನ್‌ಸ್ಟೇಬಲ್ ಪ್ರಶಿಕ್ಷಣಾರ್ಥಿಗಳ ನಿರ್ಗಮನ ಪಥ ಸಂಚಲನದಲ್ಲಿ ಪಾಲ್ಗೊಂಡು ವಂದನೆ ಸ್ವೀಕರಿಸಿ ಅವರು ಮಾತನಾಡುತ್ತಿದ್ದರು.

ನೇಮಕಾತಿ ಪ್ರಕ್ರಿಯೆಯಲ್ಲಿ ಪಿಎಸ್‌ಐಗಳಾಗಿ ನೇಮಕಗೊಂಡವರು ಅಡ್ಡದಾರಿ ಹಿಡಿದ ಕಾರಣ ಹಲವು ಯುವಕರ ಜೀವನವೇ ಹಾಳಾಗಿರುವ ಪ್ರಸಂಗ ನಮ್ಮ ಕಣ್ಮುಂದಿದೆ. ನಿಮ್ಮ ಸಾಮರ್ಥ್ಯ, ವಿದ್ಯಾರ್ಹತೆಯಿಂದ ಉದ್ಯೋಗ ಗಿಟ್ಟಿಸಿಕೊಂಡರೆ ಇಲಾಖೆಯಲ್ಲಿ ಉತ್ತುಂಗಕ್ಕೇರಬಹುದೇ ಹೊರತು, ಅಡ್ಡದಾರಿ ಹಿಡಿಯುವುದರಿಂದ ಇಡೀ ಜೀವನವೇ ದುಸ್ತರವಾಗುತ್ತದೆ ಎಂದರು.

ಸಾರ್ವಜನಿಕರ ಪ್ರಾಣ, ಆಸ್ತಿ–ಪಾಸ್ತಿ ರಕ್ಷಣೆಯಲ್ಲಿ ಕೆಎಸ್‌ಆರ್‌ಪಿ ಪೊಲೀಸರ ಪಾತ್ರ ಮಹತ್ವದ್ದಾಗಿದೆ. ಮೀಸಲು ಪಡೆಯಲ್ಲಿ ಕೆಲಸ ಮಾಡುವ ಸಿಬ್ಬಂದಿಗಳಿಗೆ ಬೇರೆ ಬೇರೆ ಘಟಕಗಳಲ್ಲೂ ವಿಫುಲ ಅವಕಾಶ ಸಿಗುತ್ತದೆ. ಶಿಸ್ತಿನಿಂದ ಕರ್ತವ್ಯ ನಿರ್ವಹಿಸಿದ್ದಲ್ಲಿ ಇಲಾಖೆ ನಿಮ್ಮನ್ನು ಎಷ್ಟು ಎತ್ತರಕ್ಕಾದರೂ ಕೊಂಡೊಯ್ಯುತ್ತದೆ ಎಂದ ಅಲೋಕ್ ಕುಮಾರ್, ಸರ್ಕಾರ ಕೈತುಂಬ ಸಂಬಳ ನೀಡಿ, ಆರೋಗ್ಯ, ವಸತಿ ಸೌಲಭ್ಯ ನೀಡುತ್ತದೆ. ಅದಕ್ಕೆ ಪ್ರತಿಯಾಗಿ ನೀವು ಉತ್ತಮವಾಗಿ ಕರ್ತವ್ಯ ನಿರ್ವಹಿಸಬೇಕಾಗುತ್ತದೆ ಎಂದು ಸಲಹೆ ನೀಡಿದರು.

ದುಶ್ಚಟಗಳಿಗೆ ದಾಸರಾಗದೇ ಉತ್ತಮ ಹವ್ಯಾಸ ಬೆಳೆಸಿ ದೇಹ ಮತ್ತು ಮನಸ್ಸಿನ ಆರೋಗ್ಯ ಕಾಪಾಡಿಕೊಳ್ಳಿ. ಕೆಎಸ್‌ಆರ್‌ಪಿಗೆ ನೇಮಕವಾಗಿರುವ ನಿಮ್ಮ ಮೇಲೆ ಜವಾಬ್ದಾರಿ ಜಾಸ್ತಿ ಇದೆ. ಸಾರ್ವಜನಿಕರ ಪ್ರೀತಿ–ವಿಶ್ವಾಸಕ್ಕೆ ಪಾತ್ರರಾಗಿ ಉತ್ತಮ ಕೆಲಸ ಮಾಡಿ ಇಲಾಖೆ, ನಿಮ್ಮ ತಂದೆ–ತಾಯಿಗೆ ಒಳ್ಳೆಯ ಹೆಸರು ತರಬೇಕು. ಆಗ ಈ ವೃತ್ತಿ ಸೇರಿದ್ದಕ್ಕೂ ಸಾರ್ಥಕವಾಗುತ್ತದೆ ಎಂದು ಅವರು ನುಡಿದರು.

ತರಬೇತಿ ಅವಧಿಯಲ್ಲಿ ಉತ್ತಮ ಸಾಧನೆ ಮಾಡಿದ ಪ್ರಶಿಕ್ಷಣಾರ್ಥಿಗಳಿಗೆ ಇದೇ ವೇಳೆ ಬಹುಮಾನ ನೀಡಲಾಯಿತು. ಕೆಎಸ್‌ಆರ್‌ಪಿ 5ನೇ ಪಡೆಯ ಅಮಿತ್ ಲಗ್ಗಣ್ಣ ತುಕ್‌ನಟ್ಟಿ ಅವರು ಸರ್ವೋತ್ತಮ ಪ್ರಶಸ್ತಿ ಪಡೆದರು. ಹೊರಾಂಗಣದಲ್ಲಿ ತುಕ್ಕನಟ್ಟಿ ಪ್ರಥಮ, ಅರ್ಜುನ್ ನಾಯಕ ದ್ವಿತೀಯ ಬಹುಮಾನ ಪಡೆದರು.

ಒಳಾಂಗಣದಲ್ಲಿ ಎಸ್.ವೈ. ಕುಮಾರಸ್ವಾಮಿ ಪ್ರಥಮ, ಬಿ.ರಾಘವೇಂದ್ರ ದ್ವಿತೀಯ, ರೈಫಲ್ ಶೂಟಿಂಗ್‌ನಲ್ಲಿ ಅಂಬ್ಲಯ್ಯ, ಪಿ.ಕಲ್ಲನಗೌಡ ಪ್ರಥಮ ಹಾಗೂ ಮಹಾಂತೇಶ್ ಜಗದೀಶ ಚಳಕಪುರ ಅವರು ದ್ವಿತೀಯ ಬಹುಮಾನ ಪಡೆದರು. 12ನೇ ಪಡೆಯ ಬಿ.ಎಸ್.ಶಿವಬಸಪ್ಪ ಸರ್ವೋತ್ತಮ ಹಾಗೂ ಹೊರಾಂಗಣದಲ್ಲಿ ಪ್ರಥಮ ಬಹುಮಾನ ಪಡೆದಿದ್ದು, ಭರತ್ ನಾಯಕ ದ್ವಿತೀಯ ಬಹುಮಾನವನ್ನು ತನ್ನದಾಗಿಸಿಕೊಂಡರು. ಒಳಾಂಗಣದಲ್ಲಿ ಸತೀಶ್ ಮಾಂಗ್ (ಪ್ರಥಮ), ಮನು ಕುಮಾರ್ (ದ್ವಿತೀಯ), ರೈಫಲ್ ಶೂಟಿಂಗ್‌ನಲ್ಲಿ ನಂದೀಶ್ ಒಡೆಯರ್, ಆರ್.ಕಿರಣ್ (ಪ್ರಥಮ), ಹಾಗೂ ಯಲ್ಲಪ್ಪ ಕೋಕಾಟಿ (ದ್ವಿತೀಯ) ಬಹುಮಾನ ಪಡೆದರು.

5ನೇ ಪಡೆಯಲ್ಲಿ 117 ಮಂದಿ ಪ್ರಶಿಕ್ಷಣಾರ್ಥಿಗಳು ತರಬೇತಿ ಪಡೆದಿದ್ದು, ಆ ಪೈಕಿ 8 ಸ್ನಾತಕೋತ್ತರ, ನಾಲ್ವರು ಇಂಜಿನಿಯರಿಂಗ್ ಪದವಿ ಸೇರಿ 66 ಪದವಿ, 42 ಪದವಿ ಪೂರ್ವ ಶಿಕ್ಷಣ ವಿದ್ಯಾರ್ಹತೆ ಹೊಂದಿದ್ದಾರೆ. 12ನೇ ಪಡೆಯ 15 ಮಂದಿ ಪೈಕಿ 8 ಇಂಜಿನಿಯರಿಂಗ್ ಸೇರಿ 90 ಪದವೀಧರರು, 6 ಸ್ನಾತಕೋತ್ತರ, 48 ಪಿಯುಸಿ ಹಾಗೂ 7 ಮಂದಿ ಎಸ್‌ಎಸ್‌ಎಲ್‌ಸಿ ವಿದ್ಯಾರ್ಹತೆ ಪಡೆದವರಾಗಿದ್ದಾರೆ.

ಕೆಎಸ್‌ಆರ್‌ಪಿ ಡಿಐಜಿ ಎಂ.ವಿ.ರಾಮಕೃಷ್ಣ ಪ್ರಸಾದ್, ಕಮಾಂಡೆಂಟ್‌ಗಳಾದ ಆರ್. ಜನಾರ್ಧನ, ಕೆ.ಬಿ.ದೊರೆಮಣಿ, ಭೀಮಯ್ಯ ಅವರು ಪಥ ಸಂಚಲನ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಮಳೆ ನಡುವೆಯೂ ಪ್ರಶಿಕ್ಷಣಾರ್ಥಿಗಳು ಆಕರ್ಷಕ ಪಥ ಸಂಚಲನ ನಡೆಸಿ ಎಲ್ಲರ ಮೆಚ್ಚುಗೆ ಪಡೆದರು.

ತಿಂಗಳಿಗೊಮ್ಮೆ ದೂರು ದಿನವನ್ನಾಗಿ ಮಾಡಿ

ಪೊಲೀಸ್ ಅಧಿಕಾರಿಗಳಿಗೆ ಎಡಿಜಿಪಿ ಅಲೋಕ್ ಕುಮಾರ್ ಸಲಹೆ

ಮೈಸೂರು, ಮೇ 19(ಆರ್‌ಕೆ)–ಪ್ರತೀ ತಿಂಗಳಿಗೊಮ್ಮೆ ದೂರು ದಿನ (Complaint Day) ವನ್ನಾಗಿ ನಿಗದಿ ಮಾಡಿ ಸಾರ್ವಜನಿಕರ ಅಹವಾಲು ಆಲಿಸಿ ಪರಿಹರಿಸಿ ಎಂದು ಕಾನೂನು–ಸುವ್ಯವಸ್ಥೆ ವಿಭಾಗದ ಎಡಿಜಿಪಿ ಅಲೋಕ್ ಕುಮಾರ್ ಅವರು ಪೊಲೀಸ್ ಅಧಿಕಾರಿಗಳಿಗೆ ಸಲಹೆ ನೀಡಿದ್ದಾರೆ. ಮೈಸೂರು ನಗರ ಘಟಕ ಮತ್ತು ದಕ್ಷಿಣ ವಲಯದ ಅಧಿಕಾರಿಗಳೊಂದಿಗೆ ಪ್ರತ್ಯೇಕ ಸಭೆ ನಡೆಸಿ ಪ್ರಗತಿ ಪರಿಶೀಲಿಸಿದ ಅವರು, ಸಾರ್ವಜನಿಕರಿಂದ ಬರುವ ಅರ್ಜಿ, ದೂರುಗಳನ್ನು ಸ್ವೀಕರಿಸಿ ಸೂಕ್ತ ಕ್ರಮ ಕೈಗೊಂಡಿರುವ ಬಗ್ಗೆ ತಿಂಗಳಿಗೊಮ್ಮೆ ಒಂದು ದಿನ ಪರಿಶೀಲಿಸುವ ಮೂಲಕ ನೊಂದವರಿಗೆ ನೆರವು ನೀಡಿ ಎಂದು ತಿಳಿಸಿದರು.

ಸಮಸ್ಯೆಗೆ ಸಿಲುಕಿದವರು ಮಾತ್ರ ಪೊಲೀಸ್ ಠಾಣೆಗಳಿಗೆ ಬರುತ್ತಾರೆ. ಅವರನ್ನು ಸೌಜನ್ಯದಿಂದ ಮಾತನಾಡಿಸಿ ವಸ್ತು ಸ್ಥಿತಿ ಏನೆಂಬುದನ್ನು ಅರ್ಥೈಸಿಕೊಂಡು ಪರಿಹರಿಸಿದರೆ, ಅವರಿಗಾಗುವ ಸಂತೋಷವೇ ನಮಗೆ ತೃಪ್ತಿ ತರುವುದು. ಅದಕ್ಕೆ ಬೆಲೆ ಕಟ್ಟಲು ಸಾಧ್ಯವಿಲ್ಲ ಎಂದು ಅವರು ಅಭಿಪ್ರಾಯಪಟ್ಟರು.

ಅಧಿಕಾರಿಗಳು ಸೋಮಾರಿಗಳಾದರೆ ಕೆಳ ಹಂತದ ಅಧಿಕಾರಿಗಳು, ಸಿಬ್ಬಂದಿಗಳಿಂದ ಪರಿಣಾಮಕಾರಿ ಕೆಲಸ ನಿರೀಕ್ಷಿಸಲಾಗದು. ಸಾರ್ವಜನಿಕರಿಗೂ ನ್ಯಾಯ ದೊರಕಿಸಲಾಗದು. ನೀವು ಪ್ರತೀ ಕ್ಷಣ ಅಲರ್ಟ್ ಆಗಿದ್ದರೆ ಮಾತ್ರ ನಿಮ್ಮ ವ್ಯಾಪ್ತಿಯಲ್ಲಿ ಯಾವುದೇ ಅಹಿತಕರ ಘಟನೆ ನಡೆಯುವುದಿಲ್ಲ. ರೌಡಿಗಳು, ಕ್ರಿಮಿನಲ್‌ಗಳನ್ನು ಬೆಳೆಯಲು ಬಿಡಬೇಡಿ. ಕಾನೂನು–ಸುವ್ಯವಸ್ಥೆಗೆ ಭಂಗ ತರುವ ಸಮಾಜಘಾತುಕ ಶಕ್ತಿಗಳನ್ನು ಬಗ್ಗು ಬಡಿಯದೇ ಶಾಂತಿ–ಸುವ್ಯವಸ್ಥೆ ಕಾಪಾಡುವುದು ಕಷ್ಟ ಎಂದು ಅಲೋಕ್ ಕುಮಾರ್ ತಿಳಿಸಿದರು.

ಗಸ್ತು ಕರ್ತವ್ಯವನ್ನು ಚುರುಕುಗೊಳಿಸಿ, ನಿಮ್ಮ ವ್ಯಾಪ್ತಿಯಲ್ಲಿ ಏನಾಗುತ್ತಿದೆ ಎಂಬುದನ್ನು ತಿಳಿದುಕೊಳ್ಳಬೇಕು. ಸಾರ್ವಜನಿಕರೊಂದಿಗೆ ಉತ್ತಮ ಬಾಂಧವ್ಯ ಹೊಂದಿದಲ್ಲಿ ಆಗಿಂದಾಗ್ಗೆ ಮಾಹಿತಿ ಲಭ್ಯವಾಗುತ್ತದೆ. ಜನಸ್ನೇಹಿ ಪೊಲೀಸ್ ಆದರೆ ಎಂತಹ ಕ್ಲಿಷ್ಟ ಸಂದರ್ಭವನ್ನೂ ಸುಲಭವಾಗಿ ನಿರ್ವಹಿಸಬಹುದು ಎಂದು ಅವರು ಪೊಲೀಸ್ ಅಧಿಕಾರಿಗಳಿಗೆ ಸಲಹೆ ನೀಡಿದರು. ನಗರ ಪೊಲೀಸ್ ಆಯುಕ್ತ ಡಾ. ಚಂದ್ರಗುಪ್ತ, ಎಸ್ಪಿ ಆರ್.ಚೇತನ್, ಅಡಿಷನಲ್ ಎಸ್ಪಿ ಆರ್.ಶಿವಕುಮಾರ್, ಡಿಸಿಪಿಗಳಾದ ಪ್ರದೀಪ್ ಗುಂಟಿ, ಎಂ.ಎಸ್.ಗೀತಾ, ಎಸಿಪಿ, ಡಿವೈಎಸ್ಪಿ ಹಾಗೂ ಇನ್ಸ್‌ಪೆಕ್ಟರ್‌ಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ಭಾವುಕರಾದ ಎಡಿಜಿಪಿ ಅಲೋಕ್ ಕುಮಾರ್



ಕಳೆದ 3 ವರ್ಷಗಳಿಂದ ಕೆಎಸ್‌ಆರ್‌ಪಿಯಲ್ಲಿ ಸೇವೆ ಸಲ್ಲಿಸಿ ಎರಡು ದಿನಗಳ ಹಿಂದಷ್ಟೇ ಕಾನೂನು–ಸುವ್ಯವಸ್ಥೆ ವಿಭಾಗದ ಎಡಿಜಿಪಿಯಾಗಿ ವರ್ಗವಾಗಿರುವ ಅಲೋಕ್ ಕುಮಾರ್ ಅವರು ಪಥ ಸಂಚಲನ ಕಾರ್ಯಕ್ರಮದಲ್ಲಿ ಭಾವುಕರಾದರು.

ಪ್ರಶಿಕ್ಷಣಾರ್ಥಿಗಳನ್ನುದ್ದೇಶಿಸಿ ಮಾತನಾಡುತ್ತಿದ್ದ ಅವರು, ಸುದೀರ್ಘ ಅವಧಿಯಲ್ಲಿ ಸೇವೆ ಸಲ್ಲಿಸಿದ್ದರಿಂದ ನಾನು ಕೆಎಸ್‌ಆರ್‌ಪಿ ಅಧಿಕಾರಿಗಳು, ಸಿಬ್ಬಂದಿಗಳೊಂದಿಗೆ ಅತೀ ಹೆಚ್ಚು ಒಡನಾಟ ಮತ್ತು ಆತ್ಮೀಯ ಸಂಬಂಧ ಹೊಂದಿದ್ದೆ. ನನ್ನ ನೆಚ್ಚಿನ ಘಟಕವೂ ಇದಾಗಿತ್ತು. ಆದರೆ ಈಗಷ್ಟೇ ನಾನು ಕಾನೂನು–ಸುವ್ಯವಸ್ಥೆ ವಿಭಾಗಕ್ಕೆ ವರ್ಗವಾಗಿದ್ದೇನೆ ಎಂದು ಹೇಳುತ್ತಲೇ ಭಾವುಕರಾದ ಅಲೋಕ್ ಕುಮಾರ್ ಕಣ್ಣಂಚಿನಲ್ಲಿ ನೀರು ಜಿನುಗಿತು.

ಒಂದು ನಿಮಿಷ ಮೌನ ವಹಿಸಿದ ಅವರು, ಭಾರವಾದ ಮನಸ್ಸಿನಿಂದ ಮಾತು ಮುಂದುವರಿಸಿದರು. ನಾನು ಈ ಘಟಕದಲ್ಲಿಲ್ಲದಿದ್ದರೂ, ನಿಮಗೆ ಯಾವ ಸಂದರ್ಭದಲ್ಲಿ ಯಾವುದೇ ಸಮಸ್ಯೆಯಾದರೂ ನನ್ನ ಗಮನಕ್ಕೆ ತಂದರೆ ಪರಿಹರಿಸಲು ಸಿದ್ಧನಿರುತ್ತೇನೆ ಎಂದರು. ಕಾರ್ಯಕ್ರಮ ಮುಗಿಯುತ್ತಿದ್ದಂತೆಯೇ ಅಲೋಕ್ ಕುಮಾರ್ ಅವರು ತಾವೇ ಬಯಸಿ, ಕೆಎಸ್‌ಆರ್‌ಪಿ ವ್ಯಾನಿನಲ್ಲಿ ಅಧಿಕಾರಿ ಗಳೊಂದಿಗೆ ಪಯಣಿಸಿ, ನಂತರ ಉಪಾಹಾರ ಸೇವಿಸಿದರು.

ಎಸ್‌ಎಸ್‌ಎಲ್‌ಸಿಯಲ್ಲಿ ಅತ್ಯುನ್ನತ ಶ್ರೇಣಿ



ಮೈಸೂರು, ಮೇ 19–ಮೈಸೂರಿನ ಚಾಮುಂಡಿಪುರಂನಲ್ಲಿರುವ ಸೆಂಟ್ ಮೇರೀಸ್ ಬಾಲಕಿಯರ ಪ್ರೌಢ ಶಾಲೆ ವಿದ್ಯಾರ್ಥಿನಿ ಎಂ. ಮೇಘನಾ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 566 (ಶೇ.90.56) ಅಂಕ ಪಡೆದು ತೇರ್ಗಡೆ ಯಾಗಿದ್ದಾರೆ. ಈಕೆ ಸಿ.ಮಂಜುನಾಥಸ್ವಾಮಿ ಮತ್ತು ಜಯರತ್ನ ದಂಪತಿ ಪುತ್ರಿ.

ಎನ್. ಧನಲಕ್ಷ್ಮಿ



ಮೈಸೂರು, ಮೇ 19– ಮೈಸೂರಿನ ಗುಡ್ ಶೆಫರ್ಡ್ ಶಾಲೆಯ ವಿದ್ಯಾರ್ಥಿನಿ ಎನ್. ಧನಲಕ್ಷ್ಮಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 616 (ಶೇ.98.56) ಅಂಕ ಪಡೆದು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಈಕೆ ನರೇಂದ್ರ ಬಾಬು ಮತ್ತು ವೀಣಾ ದಂಪತಿ ಪುತ್ರಿ.

ಎಂ.ಎಸ್. ಜೀವಿತಾ



ಮೈಸೂರು, ಮೇ 19–ಈ ಬಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಯಲ್ಲಿ ನಗರದ ನಜರ್‌ಬಾದ್ ನಲ್ಲಿರುವ ಶ್ರೀ ಗಣಪತಿ ಸಚ್ಚಿದಾನಂದ ವಿದ್ಯಾ ಸಂಸ್ಥೆಯ ವಿದ್ಯಾರ್ಥಿನಿ ಎಂ.ಎಸ್. ಜೀವಿತಾ 534 ಅಂಕಗಳನ್ನು ಪಡೆಯುವ ಮೂಲಕ ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ.

ಕನ್ನಡದಲ್ಲಿ 97, ಇಂಗ್ಲೀಷ್–97, ಹಿಂದಿ–95, ಸೋಷಿಯಲ್ ಸೈನ್ಸ್‌ನಲ್ಲಿ 93 ಅಂಕಗಳನ್ನು ಪಡೆದಿರುವ ಜೀವಿತಾ, ಮೈಸೂರಿನ ಇಟ್ಟಿಗೆಗೂಡಿನ ನಿವಾಸಿ ದಿವಂಗತ ಶಂಕರ್ ಮತ್ತು ಶ್ಯಾಮಲಾ ದಂಪತಿ ಪುತ್ರಿ.

ಮೈಸೂರು ಮಿತ್ರ ಶುಕ್ರವಾರ 20 ಮೇ 2022

ನಿರಂತರ ಮಳೆಗೆ ಮಂಡ್ಯ ಜಿಲ್ಲೆಯಲ್ಲಿ ಭಾರೀ ಹಾನಿ

- ಅಕ್ಷರಶಃ ಕೆರೆಯಾದ ಬೀಡಿ ಕಾಲೋನಿ, ನೂರಾರು ಮನೆಗಳಿಗೆ ನುಗ್ಗಿದ ನೀರು
- ಇಂಡುವಾಳು ಬಳಿ ಬೆಂಗಳೂರು– ಮೈಸೂರು ರಾಷ್ಟ್ರೀಯ ಹೆದ್ದಾರಿ ಕುಸಿತ
- ಸೇತುವೆ ಕುಸಿದು ಮಂಡ್ಯ–ಕೆ.ಎಂ.ದೊಡ್ಡಿ ಮಾರ್ಗ ಬಂದ್
- ಸಾವಿರಾರು ಹೆಕ್ಟೇರ್ ಕೃಷಿ ಭೂಮಿ ಮಳೆಗೆ ಹಾನಿ, ಕಂಗಾಲಾದ ರೈತ

ಇಂದು ಶಾಲೆಗಳಿಗೆ ರಜೆ

ಭಾರೀ ಮಳೆಯಿಂದ ರಸ್ತೆಗಳು ಜಲಾವೃತವಾದ ಪರಿಣಾಮ ವಾಹನಗಳು ಸಂಚರಿಸಲು ತೊಂದರೆಯಾಗುವ ಹಿನ್ನೆಲೆ ಶುಕ್ರವಾರ ಶಾಲೆಗಳಿಗೆ ರಜೆ ಘೋಷಿಸಿ ಡಿಸಿ ಅಶ್ವಥಿ ಆದೇಶಿಸಿದ್ದಾರೆ.





ಮಂಡ್ಯ, ಮೇ 19(ಮೋಹನ್‌ರಾಜ್)– ಕಳೆದ ಒಂದು ವಾರದಿಂದ ನಿರಂತರವಾಗಿ ಸುರಿಯುತ್ತಿರುವ ಮಳೆ ನಿನ್ನೆ ಜೋರಾಗಿ ಆರ್ಭಟಿಸಿದ ಪರಿಣಾಮ ಮಂಡ್ಯ ನಗರ ಸೇರಿದಂತೆ ಜಿಲ್ಲಾದ್ಯಂತ ಭಾರೀ ಹಾನಿಯಾಗಿದ್ದು, ಜನ ಕಂಗೆಟ್ಟಿದ್ದಾರೆ. ಹಲವು ತಗ್ಗು ಪ್ರದೇಶಗಳು ಕೆರೆಯಂತಾಗಿ, ಮನೆಗಳಿಗೆ ನೀರು ತುಂಬಿಕೊಂಡರೆ, ಹಲವು ಹೆದ್ದಾರಿಗಳು ಹಾಗೂ ಸೇತುವೆಗಳು ಕುಸಿದಿವೆ. ಸಾವಿರಾರು ಎಕರೆ ಜಮೀನು ಹಾನಿಗೊಳಗಿದ್ದು, ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಪರಿಶೀಲನೆ ನಡೆಸಿದ್ದಾರೆ.

ಕೆರೆಯಾದ ಬೀಡಿ ಕಾಲೋನಿ: ಮಂಡ್ಯ ನಗರದ ಚಿಕ್ಕ ಮಂಡ್ಯಕೆರೆ ಅಂಗಳದಲ್ಲಿರುವ ಬೀಡಿ ಕಾಲೋನಿ, ಆಟೋ ಕಾಲೋನಿ ಸೇರಿದಂತೆ ಇಡೀ ಬಡಾವಣೆ ಕೆರೆಯಾಗಿದೆ. ಭಾರೀ ಮಳೆಗೆ ಇಡೀ ಬಡಾವಣೆಗೆ ನೀರು ತುಂಬಿದ್ದು, ಪರಿಣಾಮ ದಿನಬಳಕೆ ವಸ್ತುಗಳು, ಸಾಮಗ್ರಿಗಳು ಹಾನಿಗೊಳಗಾಗಿದೆ.

ತಹಸೀಲ್ದಾರ್ ಕಚೇರಿಗೆ ಮುತ್ತಿಗೆ: ಪ್ರತಿ ಬಾರಿಯೂ ಮಳೆ ಬಂದಾಗ ನೀರು ತುಂಬಿಕೊಳ್ಳುವ ಪರಿಣಾಮ ಕ್ಷೇತ್ರದ ಶಾಸಕರಾಗಲಿ, ಅಧಿಕಾರಿಗಳಾಗಲಿ ಇತ್ತ ಬರುವುದೇ ಇಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿ, ಬೀಡಿ ಕಾಲೋನಿ ಹಾಗೂ ಆಟೋ ಕಾಲೋನಿ ಸೇರಿದಂತೆ ಚಿಕ್ಕ ಮಂಡ್ಯ ಕೆರೆ ಅಂಗಳದ ಜನ ನಗರಸಭಾ ಸದಸ್ಯ ನಹೀಂ ಹಾಗೂ ಜಾಕೀರ್ ಪಾಷಾ ನೇತೃತ್ವದಲ್ಲಿ ತಹಸೀಲ್ದಾರ್ ಕಚೇರಿಗೆ ಮುತ್ತಿಗೆ ಹಾಕಿ ಧರಣಿ ನಡೆಸಿದರು. ಬಳಿಕ ಅಧಿಕಾರಿಗಳು ಕೂಡಲೇ ಕ್ರಮ ತೆಗೆದುಕೊಳ್ಳುವ ಭರವಸೆ ನೀಡಿದ ಮೇಲೆ ಧರಣಿ ಕೈಬಿಟ್ಟರು.

ಬೆಂ–ಮೈ ರಾ.ಹೆ. ಕುಸಿತ: ಕಳೆದ ರಾತ್ರಿ ಸುರಿದ ಭಾರೀ ಮಳೆಗೆ ಇಂಡುವಾಳು ಬಳಿ ಬೆಂಗಳೂರು– ಮೈಸೂರು ರಾಷ್ಟ್ರೀಯ ಹೆದ್ದಾರಿ ಕುಸಿದಿದೆ. ಬೆಳಗ್ಗೆ ರಸ್ತೆ ಕುಸಿದಿರುವುದನ್ನು ಕಂಡ ಗ್ರಾಮಸ್ಥರು ಹಾಗೂ ವಾಹನ ಸವಾರರು ಸಂಬಂಧಿಸಿದ ಅಧಿಕಾರಿಗಳಿಗೆ ತಿಳಿಸಿದ್ದಾರೆ. ಸ್ಥಳಕ್ಕೆ ಧಾವಿಸಿದ ಅಧಿಕಾರಿಗಳು, ಪೊಲೀಸರು ಹಾಗೂ ರಕ್ಷಣಾ ತಂಡ ಕೂಡಲೇ ಮೈಸೂರು ರಸ್ತೆಯಲ್ಲಿ ಸಂಚಾರ ಅಸ್ತವ್ಯಸ್ತ ಆಗಿದ್ದರಿಂದ ಪರ್ಯಾಯ ವ್ಯವಸ್ಥೆ ಮಾಡಿದರು.

ನಿಖಿಲ್, ರವೀಂದ್ರ ಭೇಟಿ: ಇನ್ನು ರಸ್ತೆ ಕುಸಿತ ಕಂಡಿದ್ದ ಇಂಡುವಾಳು ಗ್ರಾಮಕ್ಕೆ ಶಾಸಕ ರವೀಂದ್ರ ಶ್ರೀಕಂಠಯ್ಯ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಮತ್ತೊಂದೆಡೆ ಮೈಸೂರು ಕಡೆಗೆ ತೆರಳುತ್ತಿದ್ದ ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್‌ಕುಮಾರಸ್ವಾಮಿ ರಸ್ತೆ ಕುಸಿದಿದ್ದ ಜಾಗದಲ್ಲಿ ಜನರ ಅಹವಾಲು ಸ್ವೀಕರಿಸಿದರು.

ಮಂಡ್ಯ– ಕೆ.ಎಂ.ದೊಡ್ಡಿ ರಸ್ತೆ ಬಂದ್: ಭಾರೀ ಮಳೆಗೆ ಮಂಡ್ಯ ತಾಲೂಕಿನ ಚನ್ನಪ್ಪನ ದೊಡ್ಡಿಗೇಟ್ ಬಳಿ ಸೇತುವೆ ಕುಸಿದ ಪರಿಣಾಮ ಮಂಡ್ಯ– ಕೆ.ಎಂ.ದೊಡ್ಡಿ ಸಂಚಾರ ಸಂಪೂರ್ಣ ಬಂದ್ ಆಗಿತ್ತು. ಪೊಲೀಸರು ಹಾಗೂ ಅಗ್ನಿಶಾಮಕ ತಂಡ ರಸ್ತೆಯನ್ನು ಸಂಪೂರ್ಣ ಬಂದ್ ಮಾಡಿ, ಬ್ಯಾರಿಕೇಡ್ ಅಳವಡಿಸಿ ಮುಂಜಾಗ್ರತೆ ವಹಿಸಿದರು.

ಸಾವಿರಾರು ಹೆಕ್ಟೇರ್ ಕೃಷಿ ಭೂಮಿ ನಾಶ: ಭಾರೀ ಮಳೆಯಿಂದ ಕೃಷಿ ಭೂಮಿಗಳು ನಾಶವಾಗಿದೆ. ಕಬ್ಬು, ಭತ್ತ, ರಾಗಿ, ಜೋಳ ಸೇರಿದಂತೆ ಇನ್ನಿತರ ಬೆಳೆಗಳು ನಾಶವಾಗಿವೆ. ಸಣ್ಣಮಟ್ಟಿ ಹಾಗೂ ಕಾಲುವೆ ಪಕ್ಕ ಇರುವ ರಸ್ತೆಗಳಿಗೆ ನೀರು ತುಂಬಿದ ಪರಿಣಾಮ ರಸ್ತೆಗಳೆಲ್ಲಾ ಜಲಾವೃತವಾಗಿ, ಜನರು ಸಂಚರಿಸಲು ಪರದಾಡುವಂತಾಗಿತ್ತು.

ಶಾಶ್ವತ ಪರಿಹಾರಕ್ಕೆ ಒತ್ತಾಯ: ಕಳೆದ ಕೆಲವು ದಿನಗಳಿಂದ ಸುರಿಯುತ್ತಿರುವ ಭಾರೀ ಮಳೆಗೆ ಮಂಡ್ಯ ಜಿಲ್ಲೆಯಲ್ಲಿ ಸಾಕಷ್ಟು ಆಸ್ತಿ–ಪಾಸ್ತಿಗಳು ಹಾನಿಗೊಳಗಾಗಿದ್ದು, ತುರ್ತುಕ್ರಮ ತೆಗೆದುಕೊಳ್ಳುವುದರ ಜೊತೆಗೆ ಶಾಶ್ವತ ಪರಿಹಾರವನ್ನು ಕಂಡುಕೊಳ್ಳುವಂತೆ ವಿಧಾನಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಜಿಲ್ಲಾ ಉಸ್ತುವಾರಿ ಸಚಿವ ಕೆ.ಗೋಪಾಲಯ್ಯ ಅವರಲ್ಲಿ ಮನವಿ ಮಾಡಿದ್ದಾರೆ.

ಬೇಸಿಗೆ ಮಳೆಗೆ ಮಂಡ್ಯ ಜಿಲ್ಲೆ ತತ್ತರಿಸಿ ಹೋಗಿದೆ. ಜಿಲ್ಲೆಯ ಏಳೂ ತಾಲೂಕುಗಳು ಸಹ ಮಳೆಯಿಂದಾಗಿ ತೀವ್ರ ಹಾನಿಗೊಳಪಟ್ಟಿವೆ. ಜನ–ಜಾನುವಾರುಗಳಿಗೆ ತೀವ್ರ ತೊಂದರೆಯಾಗಿದೆ. ನಾಗರಿಕರ ಆಸ್ತಿ– ಪಾಸ್ತಿಗಳಿಗೆ ಹಾನಿಯಾಗಿದೆ. ಮುಂಗಾರು ಪೂರ್ವದಲ್ಲಿ ಮಳೆಗೇ ಈ ರೀತಿಯ ಅವಾಂತರಗಳು ಸಂಭವಿಸಿದರೇ ಇನ್ನು ಮುಂಗಾರು ಆರಂಭವಾದ ಮೇಲೆ ನಾಗರಿಕರ ಗತಿ ಏನು ಎಂದು ಪ್ರಶ್ನಿಸಿದ್ದಾರೆ.

SSLC ಫಲಿತಾಂಶ: 3 ವಿದ್ಯಾರ್ಥಿಗಳಿಗೆ 625 ಅಂಕ

ಮಂಡ್ಯ ಜಿಲ್ಲೆಗೆ 94.70ರಷ್ಟು ಫಲಿತಾಂಶ, ಮೊದಲನೇ ಸ್ಥಾನ ಉಳಿಸಿಕೊಂಡ ಮದ್ದೂರು


ಅಪೂರ್ವ


ಗಗನ್


ಸೂರಜ್‌ಗೌಡ

ಮಂಡ್ಯ, ಮೇ 19(ಮೋಹನ್‌ರಾಜ್)– ಬಹುನಿರೀಕ್ಷಿತ ಎಸ್‌ಎಸ್‌ಎಲ್‌ಸಿ ಫಲಿತಾಂಶ ಹೊರಬಿದ್ದಿದ್ದು, ಜಿಲ್ಲೆಯ ಮೂರು ವಿದ್ಯಾರ್ಥಿಗಳು 625 ಅಂಕ ಪಡೆಯುವ ಮೂಲಕ ರಾಜ್ಯದಲ್ಲಿ ಮೊದಲ ಸ್ಥಾನ ಪಡೆದರೆ, ಜಿಲ್ಲೆಗೆ ಶೇ.94.70ರಷ್ಟು ಫಲಿತಾಂಶ ಬಂದಿದ್ದು, ಮದ್ದೂರು ತಾಲೂಕು ಮೊದಲ ಸ್ಥಾನ ಉಳಿಸಿಕೊಂಡಿದೆ.

ಮಳವಳ್ಳಿ ತಾಲೂಕಿನ ಗಗನ್.ಕೆ.ಎಂ, ಸೂರಜ್‌ಗೌಡ.ಎಂ.ಎನ್ ಹಾಗೂ ಶ್ರೀರಂಗಪಟ್ಟಣದ ಅಪೂರ್ವ.ಎಚ್.ಎಸ್ 625ಕ್ಕೆ 625 ಅಂಕ ಪಡೆದು ರಾಜ್ಯಕ್ಕೆ ಹಾಗೂ ಜಿಲ್ಲೆಗೆ ಮೊದಲ ಸ್ಥಾನ ಪಡೆದಿದ್ದಾರೆ.

ಕೆ.ಆರ್.ಪೇಟೆಯ ಮೊನಾಲೀಸಾ ಬಿ.ಎಸ್, ಸಹನ ಎಂ.ಪಿ, ಹರ್ಷಿತಾ, ಮದ್ದೂರಿನ ನಿರೂಪ್ ಬಿ.ಎಸ್, ದರ್ಶಿನಿ.ಎನ್, ಮಂಡ್ಯದ ಲೇಖನಾ ಕೆ.ಗೌಡ, ನಾಗಮಂಗಲದ ತನಿಷಾ ಸೇರಿದಂತೆ ಏಳು ವಿದ್ಯಾರ್ಥಿಗಳು 625ಕ್ಕೆ 624 ಅಂಕ ಪಡೆಯುವ ಮೂಲಕ ರಾಜ್ಯ ಹಾಗೂ ಜಿಲ್ಲೆಯಲ್ಲಿ ದ್ವಿತೀಯ ಸ್ಥಾನ ಗಳಿಸಿದ್ದಾರೆ.

ಕೆ.ಆರ್.ಪೇಟೆಯ ಅಮೂಲ್ಯ ಎಸ್.ಜೆ, ಮಾನ್ಯ ಎಂ, ರೇವತಿ ಯು.ಬಿ, ಮದ್ದೂರಿನ ಮಾನಸ ಕೆ.ಜೆ, ಎ.ಎಸ್.ಲಿಖಿತಾ, ಪಲ್ಲವಿ ಟಿ.ಎಸ್, ಜಶ್ವಿತಾ ಎ.ಎಸ್, ಮಳವಳ್ಳಿಯ ಕಿಷನ್ ಎಚ್.ಎಸ್, ದಿಶಾ ಜಿ.ಎಲ್, ಕೃತಿ ಯು, ಮಂಡ್ಯದ ಲಿಪಿ.ಎಂ. ಕಿರಣ್, ಸ್ಮಿತಾ ಗೋವಿಂದ್, ನವ್ಯಶ್ರೀ ಕೆ.ಟಿ, ನಾಗಮಂಗಲದ ಧನುಷ್ ಬಿ.ಸಿ, ಪಾಂಡವಪುರದ ಪ್ರಕೃತಿ, ಶ್ರೀರಂಗಪಟ್ಟಣದ ರೀತುಶ್ರೀ ಆರ್, ಬೃಂದಾ ಎಸ್ ಸೇರಿದಂತೆ 17 ವಿದ್ಯಾರ್ಥಿಗಳು 623 ಅಂಕ ಗಳಿಸುವ ಮೂಲಕ ತೃತೀಯ ಸ್ಥಾನ ಪಡೆದಿದ್ದಾರೆ.

ಮಂಡ್ಯ ಜಿಲ್ಲೆ ಶೇ.94.70ರಷ್ಟು ಫಲಿತಾಂಶ ಪಡೆಯುವ ಮೂಲಕ ರಾಜ್ಯದಲ್ಲಿ ಎ ಶ್ರೇಣಿಯಲ್ಲಿದ್ದು, ಈ ಬಾರಿಯೂ ಸಹ ಜಿಲ್ಲೆಯಲ್ಲಿ ಮದ್ದೂರು ಶೇ 98.5ರಷ್ಟು ಫಲಿತಾಂಶ ಪಡೆಯುವ ಮೂಲಕ ಮೊದಲ ಸ್ಥಾನ ಪಡೆದಿದೆ. ಜಿಲ್ಲಾದ್ಯಂತ ವಿದ್ಯಾರ್ಥಿನಿಯರೇ ಮೇಲುಗೈ ಸಾಧಿಸಿದ್ದಾರೆ. ಕೆ.ಆರ್.ಪೇಟೆ 96.34ರಷ್ಟು ಫಲಿತಾಂಶ ಮೂಲಕ ದ್ವಿತೀಯ ಸ್ಥಾನದಲ್ಲಿದೆ. ನಾಗಮಂಗಲ 95.77ರಷ್ಟು ಫಲಿತಾಂಶ ಮೂಲಕ ಮೂರನೇ ಸ್ಥಾನದಲ್ಲಿದ್ದರೆ, ಮಳವಳ್ಳಿ 95.57ರಷ್ಟು ಫಲಿತಾಂಶದೊಂದಿಗೆ ನಾಲ್ಕನೇ ಸ್ಥಾನ ಪಡೆದಿದೆ.

ಮಂಡ್ಯ ಉತ್ತರ ಶೇ.95.21ರಷ್ಟು ಫಲಿತಾಂಶದೊಂದಿಗೆ 5ನೇ ಸ್ಥಾನದಲ್ಲಿದ್ದರೆ, ಪಾಂಡವಪುರ 95.17ರಷ್ಟು ಪಡೆದು ಆರನೇ ಸ್ಥಾನ ಪಡೆದಿದೆ. 91.45ರಷ್ಟು ಫಲಿತಾಂಶ ಪಡೆಯುವ ಮೂಲಕ ಶ್ರೀರಂಗಪಟ್ಟಣ ಏಳನೇ ಸ್ಥಾನದಲ್ಲಿದ್ದರೆ, 89.63ರಷ್ಟು ಫಲಿತಾಂಶ ಪಡೆಯುವ ಮೂಲಕ ಮಂಡ್ಯ ದಕ್ಷಿಣ ಕೊನೆಯ ಸ್ಥಾನದಲ್ಲಿದೆ.

ಒಟ್ಟು ಜಿಲ್ಲೆಯಲ್ಲಿ ಪರೀಕ್ಷೆ ಪಡೆದಿದ್ದ 10,314 ವಿದ್ಯಾರ್ಥಿಗಳ ಪೈಕಿ 9611 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, ಶೇ.93.18ರಷ್ಟು ಫಲಿತಾಂಶ ಪುರುಷರು ಪಡೆದಿದ್ದರೆ, ಪರೀಕ್ಷೆ ಪಡೆದಿದ್ದ 9763 ವಿದ್ಯಾರ್ಥಿನಿಯರ ಪೈಕಿ 9401 ವಿದ್ಯಾರ್ಥಿನಿಯರು ತೇರ್ಗಡೆ ಹೊಂದಿದ್ದು, 96.29ರಷ್ಟು ಫಲಿತಾಂಶ ಪಡೆದಿದ್ದಾರೆ. ಒಟ್ಟಾರೆ 20,077 ವಿದ್ಯಾರ್ಥಿಗಳು ಪರೀಕ್ಷೆ ಪಡೆದು 19,012 ಉತ್ತೀರ್ಣರಾಗಿದ್ದು, 1065 ವಿದ್ಯಾರ್ಥಿಗಳು ಜಿಲ್ಲೆಯಲ್ಲಿ ಅನುತ್ತೀರ್ಣರಾಗಿದ್ದಾರೆ.

ಉನ್ನತ ಶ್ರೇಣಿಯಲ್ಲಿ ತೇರ್ಗಡೆ


ಎಂ.ಜಿ. ಗಿರೀಶ್


ಎಂ.ಜಿ. ಸಿಂಚನಾ

ಶ್ರೀರಂಗಪಟ್ಟಣ, ಮೇ 19– ತಾಲೂಕಿನ ಮಹದೇವಪುರದ ಅನ್ನಪೂರ್ಣೇಶ್ವರಿ ಎಜುಕೇಷನ್ ಟ್ರಸ್ಟ್‌ನ ವಿನಾಯಕ ಸೆಂಟ್ರಲ್ ಸ್ಕೂಲ್‌ನ ವಿದ್ಯಾರ್ಥಿ ಎಂ.ಜಿ. ಗಿರೀಶ್ ಎಸ್‌ಎಸ್‌ಎಲ್‌ಸಿಯಲ್ಲಿ 541 ಅಂಕ ಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾರೆ. ಕನ್ನಡ 112, ಇಂಗ್ಲಿಷ್ 77, ಹಿಂದಿ 87, ಗಣಿತ 95, ವಿಜ್ಞಾನ 87 ಹಾಗೂ ಸಮಾಜ ವಿಜ್ಞಾನದಲ್ಲಿ 83 ಅಂಕ ಗಳಿಸಿದ್ದಾನೆ.

ಮಹದೇವಪುರದ ಎಂ.ಕೆ. ಆನಂದ ಆಳ್ವಾರ್ ಪ್ರೌಢಶಾಲೆಯ ವಿದ್ಯಾರ್ಥಿನಿ ಎಂ.ಜಿ. ಸಿಂಚನಾ 523 ಅಂಕ ಗಳಿಸಿ, ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ. ಕನ್ನಡ 122, ಇಂಗ್ಲಿಷ್ 84, ಹಿಂದಿ 90, ಗಣಿತ 79, ವಿಜ್ಞಾನ 65, ಸಮಾಜ ವಿಜ್ಞಾನದಲ್ಲಿ 83 ಅಂಕ ಗಳಿಸಿದ್ದಾರೆ. ಈ ಇಬ್ಬರೂ ಮಹದೇವಪುರದ ನಿವಾಸಿ ಗೋವಿಂದರಾಜು ಹಾಗೂ ಸರಸ್ವತಿ ದಂಪತಿ ಮಕ್ಕಳಾಗಿದ್ದಾರೆ.

ಪೊನ್ನಂಪೇಟೆ ಸಾಯಿ ಶಂಕರ ವಿದ್ಯಾಸಂಸ್ಥೆಯಲ್ಲಿ ಶಸ್ತ್ರಾಭ್ಯಾಸ ನಡೆದಿಲ್ಲ

- ಬಜರಂಗದಳದ ಕಾರ್ಯಕ್ರಮ, ಊಟದ ವ್ಯವಸ್ಥೆಗಾಗಿ ಶಾಲಾವರಣ ನೀಡಲಾಗಿತ್ತು ಅಷ್ಟೇ
- ಸಂಸ್ಥೆ ಅಧ್ಯಕ್ಷ ಝರು ಗಣಪತಿ ಸ್ಪಷ್ಟನೆ



ಮಡಿಕೇರಿ, ಮೇ 19– ಬಜರಂಗದಳ ಪ್ರಶಿಕ್ಷಣ ವರ್ಗ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಪೊನ್ನಂಪೇಟೆಯ ಸಾಯಿ ಶಂಕರ ವಿದ್ಯಾ ಸಂಸ್ಥೆಯಲ್ಲಿ ಯಾವುದೇ ಶಸ್ತ್ರಾಭ್ಯಾಸ ನಡೆದಿಲ್ಲ ಎಂದು ಸಂಸ್ಥೆಯ ಅಧ್ಯಕ್ಷ ಝರು ಗಣಪತಿ ಸ್ಪಷ್ಟಪಡಿಸಿದ್ದಾರೆ.

ಮಡಿಕೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶಾಲೆಗೆ ರಜೆಯಿದ್ದ ಸಂದರ್ಭ ಬಜರಂಗ ದಳಕ್ಕೆ ಕಾರ್ಯಕ್ರಮ ನಡೆಸಲು ಮತ್ತು ಊಟದ ವ್ಯವಸ್ಥೆಗಾಗಿ ಶಾಲಾವರಣವನ್ನು ಬಿಟ್ಟು ಕೊಡಲಾಗಿತ್ತು. ಆ ಕಾರ್ಯಕ್ರಮದಲ್ಲಿ ನಮ್ಮ ಯಾವುದೇ ಸಿಬ್ಬಂದಿ ಪಾಲ್ಗೊಂಡಿರಲಿಲ್ಲ. ಅಲ್ಲದೇ ಅಲ್ಲಿ ನಡೆದಿದೆ ಎನ್ನಲಾದ ಶಸ್ತ್ರಾಸ್ತ್ರ ತರಬೇತಿ ಕೂಡಾ ನಮ್ಮ ಶಾಲಾವರಣದಲ್ಲಿ ನಡೆದಿಲ್ಲ. ಶಾಲೆಯ ಹೊರವಲಯದ ಗದ್ದೆಯೊಂದರಲ್ಲಿ ಶಿಬಿರಾರ್ಥಿಗಳಿಗೆ ದೈಹಿಕ ಚಟುವಟಿಕೆ ನಡೆಸಲಾಗಿತ್ತು ಎಂದರು. ಹಿಂದಿನಿಂದಲೂ ರಜೆ ದಿನಗಳಲ್ಲಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸಂಘ ಸಂಸ್ಥೆಗಳಿಗೆ ಶಾಲಾವರಣವನ್ನು ಬಿಟ್ಟುಕೊಡಲಾಗುತ್ತದೆ. ಅದರಂತೆಯೇ ಬಜರಂಗದಳಕ್ಕೂ ನೀಡಲಾಗಿದ್ದು, ಅಲ್ಲಿ ಯಾವುದೇ ಶಸ್ತ್ರಾಭ್ಯಾಸ ನಡೆದಿಲ್ಲ. ಕೆಲವರು ಸಂಸ್ಥೆಯ ವಿರುದ್ಧ ತನಿಖೆಯಾಗಬೇಕು ಎಂದು ಒತ್ತಾಯಿಸಿದ್ದು, ಯಾರಿಗಾದರೂ ಸಂಶಯವಿದ್ದರೆ ನೇರವಾಗಿ ಬಂದು ಪರಿಶೀಲಿಸಬಹುದು ಎಂದು ಹೇಳಿದರು.

ನಮ್ಮ ಶಾಲೆಯಲ್ಲಿ ಯಾವುದೇ ಜಾತಿ, ಧರ್ಮ ಭೇದವಿಲ್ಲದೆ ಶಿಕ್ಷಣ ನೀಡಲಾಗುತ್ತಿದೆ. ಇಲ್ಲಿ ಎಲ್ಲಾ ಧರ್ಮದ ವಿದ್ಯಾರ್ಥಿಗಳು ಮತ್ತು ಶಿಕ್ಷಕರಿದ್ದಾರೆ. ರಾಜಕೀಯ ಲಾಭಕ್ಕಾಗಿ ಯಾರೂ ಕೂಡಾ ನಮ್ಮ ಶಿಕ್ಷಣ ಸಂಸ್ಥೆಯ ಹೆಸರನ್ನು ದುರ್ಬಳಕೆ ಮಾಡಬೇಡಿ ಎಂದು ಅವರು ಮನವಿ ಮಾಡಿದರು. ತ್ರಿಶೂಲ ದೀಕ್ಷೆ ಬಗ್ಗೆ ಮಾತನಾಡಿದ ಝರು ಗಣಪತಿ, ತ್ರಿಶೂಲಗಳನ್ನು ಶಾಲೆಯಲ್ಲಿಯೇ ನೀಡಲಾಗಿದೆ. ಆದರೆ ಅದರ ಮೂಲಕ ಯಾವುದೇ ತರಬೇತಿ ನೀಡಿಲ್ಲ. ಕಾರ್ಯಕ್ರಮದ ನೆನಪಿನ ಕಾಣಿಕೆಯಂತೆ ಪೂಜಿಸಿದ ತ್ರಿಶೂಲಗಳನ್ನು ನೀಡಲಾಗಿದ್ದು, ಅದು ನುಣುಪಾದ ವಸ್ತುವಲ್ಲ ಎಂದರಲ್ಲದೇ, ಅಲ್ಲಿ ನೀಡಲಾದ ತ್ರಿಶೂಲವನ್ನು ಪ್ರದರ್ಶಿಸಿದರು. ಸುದ್ದಿಗೋಷ್ಠಿಯಲ್ಲಿ ಶಾಲೆಯ ಆಡಳಿತ ಮಂಡಳಿ ನಿರ್ದೇಶಕ ಸತೀಶ್ ದೇವಯ್ಯ, ಟ್ರಸ್ಟಿ ಗಾನಾ ಕಾರ್ಯಪ್ಪ, ಶಾಲಾ ಮುಖ್ಯೋಪಾಧ್ಯಾಯರಾದ ರೀನಾ ಗಣೇಶ್ ಹಾಜರಿದ್ದರು.

ಶಾಲೆ ತೊರೆದ ಮುಸ್ಲಿಂ ವಿದ್ಯಾರ್ಥಿಗಳು

ವಿವಾದದ ಹಿನ್ನೆಲೆ ಶಾಲೆಯಿಂದ ಮಕ್ಕಳು ಹೊರ ಹೋಗಿರುವ ಬಗ್ಗೆ ಝರು ಗಣಪತಿ ಬೇಸರ ವ್ಯಕ್ತಪಡಿಸಿದರು. ಕೆಲ ದಿನಗಳಿಂದ ಶಾಲೆಯ ಹೆಸರಿನಲ್ಲಿ ವಿವಾದವಾಗುತ್ತಿರುವ ಹಿನ್ನೆಲೆ ಮೂವರು ಮುಸ್ಲಿಂ ವಿದ್ಯಾರ್ಥಿಗಳು ಶಾಲೆಯಿಂದ ಹೊರಹೋಗಿದ್ದಾರೆ. ದುಬೈನಿಂದ ಪೋಷಕರಿಗೆ ಕರೆ ಬಂದಿದ್ದು, ಶಾಲಾ ಶುಲ್ಕ ಪಾವತಿಸಿದ್ದರೂ ಪರವಾಗಿಲ್ಲ, ಮಕ್ಕಳನ್ನು ಅಲ್ಲಿಂದ ಬೇರೆಡೆ ಸೇರಿಸಿ ಎಂಬ ಸೂಚನೆ ನೀಡಲಾಗಿದೆ ಎಂದರು. ಹೀಗೆ ಕರೆ ಬಂದವರಲ್ಲಿ ಇನ್ನೂ ಕೆಲ ವಿದ್ಯಾರ್ಥಿಗಳು ನಮ್ಮ ಶಾಲೆಯಲ್ಲೇ ಇದ್ದಾರೆ. ಅಲ್ಲದೇ ನಮ್ಮಲ್ಲಿ ಮುಸ್ಲಿಂ ಶಿಕ್ಷಕರು ಕೂಡಾ ಕಾರ್ಯನಿರ್ವಹಿಸುತ್ತಿದ್ದು, ನಮ್ಮ ಸಂಸ್ಥೆ ಯಾವುದೇ ಧರ್ಮಕ್ಕೆ ಸೀಮಿತವಾದುದ್ದಲ್ಲ ಎಂದು ಸ್ಪಷ್ಟಪಡಿಸಿದರು.

ಕೊಡಗಿನಲ್ಲಿ ಧಾರಾಕಾರ ಮಳೆ; ನದಿಗಳಲ್ಲಿ ನೀರಿನ ಹರಿವು ಹೆಚ್ಚಳ

ಚಿಕ್ಲಿಹೊಳೆ ಭರ್ತಿ



ಮಡಿಕೇರಿ, ಮೇ 19– ಕೊಡಗು ಜಿಲ್ಲೆಯ ವಿವಿಧೆಡೆ ಗುರುವಾರವೂ ಉತ್ತಮ ಮಳೆಯಾಗಿದೆ. ಗುರುವಾರ ದಿನವಿಡೀ ಮಳೆ ಸುರಿದಿದ್ದು, ಸಹಜವಾಗಿಯೇ ನದಿಗಳ ನೀರಿನ ಮಟ್ಟದಲ್ಲಿ ಏರಿಕೆ ಕಂಡಿದೆ. ಮಡಿಕೇರಿ, ಭಾಗಮಂಡಲ, ನಾಪೋಕ್ಲು, ಕಕ್ಕಬ್ಬೆ, ಸಂಪಾಜೆ ವ್ಯಾಪ್ತಿಯಲ್ಲಿ ಧಾರಾಕಾರ ಮಳೆಯಾದ ಬಗ್ಗೆ ವರದಿಯಾಗಿದೆ.

ಕಾಲೂರು, ಗಾಳಿಬೀಡು, ಸುಂಟಿಕೊಪ್ಪ, ಕುಶಾಲನಗರ ಎಲ್ಲೆಡೆ ಉತ್ತಮ ಮಳೆಯಾಗಿದ್ದು, ಹಾರಂಗಿ ಜಲಾನಯನ ವ್ಯಾಪ್ತಿಯ ಹಟ್ಟಿಹೊಳೆ, ಮಾದಾಪುರ ಹೊಳೆಗಳಲ್ಲಿ ಜೀವಕಳೆ ಕಂಡು ಬಂದಿದೆ. ಪರಿಣಾಮ ಹಾರಂಗಿ ಜಲಾಶಯಕ್ಕೆ ಹರಿದು ಬರುತ್ತಿರುವ ನೀರಿನ ಪ್ರಮಾಣದಲ್ಲಿ ಗಣನೀಯ ಏರಿಕೆ ಕಂಡಿದೆ.

2859 ಅಡಿಗಳಷ್ಟು ನೀರಿನ ಸಂಗ್ರಹ ಸಾಮರ್ಥ್ಯವಿರುವ ಹಾರಂಗಿ ಜಲಾಶಯದಲ್ಲಿ ಪ್ರಸ್ತುತ 2849.60 ಅಡಿಗಳಷ್ಟು ನೀರಿದೆ. ಗುರುವಾರ ಬೆಳಗ್ಗೆ 8.30ರ ವೇಳೆಗೆ 3285 ಕ್ಯುಸೆಕ್ ಪ್ರಮಾಣದ ನೀರಿನ ಒಳಹರಿವು ದಾಖಲಾಗಿದೆ. ಕಳೆದ ವರ್ಷ ಇದೇ ದಿನ ಕೇವಲ 246 ಕ್ಯುಸೆಕ್ ಪ್ರಮಾಣದ ನೀರಿನ ಒಳಹರಿವು ದಾಖಲಾಗಿತ್ತು.

ಚಿಕ್ಲಿಹೊಳೆ ಭರ್ತಿ: ಚಿಕ್ಲಿಹೊಳೆ ಜಲಾನಯನ ವ್ಯಾಪ್ತಿಯಲ್ಲಿ ಕಳೆದ ಕೆಲ ದಿನಗಳಿಂದ ಉತ್ತಮ ಮಳೆ ಸುರಿದ ಹಿನ್ನೆಲೆಯಲ್ಲಿ ಮೇ ತಿಂಗಳ 2ನೇ ವಾರದಲ್ಲಿಯೇ ಚಿಕ್ಲಿಹೊಳೆ ಜಲಾಶಯ ಭರ್ತಿಯಾಗಿದೆ. ಅರ್ಧ ಚಂದ್ರಾಕೃತಿ ಮಾದರಿಯ ನೀರಿನ ಹೊರ ಹರಿವಿನ ದ್ವಾರದಲ್ಲಿ ಹೆಚ್ಚುವರಿ ನೀರು ಹಾಲ್ನೊರೆ ಸೂಸುತ್ತಾ ಧುಮ್ಮಿಕ್ಕುತ್ತಿದ್ದು, ನೋಡುಗರನ್ನು ತನ್ನೆಡೆಗೆ ಸೆಳೆಯುತ್ತಿದೆ. ಚಿಕ್ಲಿಹೊಳೆಯ ಸೌಂದರ್ಯ ಸವಿಯಲು ಸ್ಥಳೀಯರ ಸಹಿತ ಪ್ರವಾಸಿಗರು ತಂಡೋಪತಂಡವಾಗಿ ಇತ್ತ ಕಡೆಗೆ ಧಾವಿಸುತ್ತಿದ್ದಾರೆ.

ರಸ್ತೆಗೆ ಹಾನಿ: ಕಳೆದ ಕೆಲ ದಿನಗಳಿಂದ ಸುರಿದ ಮಳೆಯಿಂದಾಗಿ ಮಡಿಕೇರಿ–ಚೆಟ್ಟಳ್ಳಿ ರಸ್ತೆಯಲ್ಲಿ ಅಲ್ಲಲ್ಲಿ ಕುಸಿತ ಉಂಟಾಗಿದೆ. ಒಂದೆರಡು ದಿನಗಳ ಮಳೆಗೇ ರಸ್ತೆ ಕುಸಿದಿರುವುದರಿಂದ ಮಳೆಗಾಲದ ಪರಿಸ್ಥಿತಿಯೇನು ಎಂಬ ಆತಂಕ ಸೃಷ್ಟಿಯಾಗಿದೆ.

ಪ್ರತೀ ವರ್ಷ ಮಳೆಗಾಲದಲ್ಲಿ ಚೆಟ್ಟಳ್ಳಿ ರಸ್ತೆಯಲ್ಲಿ ಭೂಕುಸಿತದಿಂದ ಸಂಪರ್ಕ ಕಡಿತವಾಗುತ್ತಿದೆ. ಈ ಹಿನ್ನೆಲೆ ರಸ್ತೆಗೆ ತಡೆಗೋಡೆ ನಿರ್ಮಿಸಿ ರಸ್ತೆ ಅಭಿವೃದ್ಧಿಪಡಿಸುವ ಕಾಮಗಾರಿ ಆರಂಭಿಸಿ ವರ್ಷಗಳೇ ಕಳೆದರೂ ಇನ್ನು ಕಾಮಗಾರಿ ಪೂರ್ಣಗೊಂಡಿಲ್ಲ. ಅಲ್ಲದೇ ಕೆಲವು ಕಡೆ ಹೊಸದಾಗಿ ನಿರ್ಮಿಸಿದ ತಡೆಗೋಡೆಯೂ ಕುಸಿಯುವ ಅಪಾಯದಲ್ಲಿದ್ದು, ಸಾರ್ವಜನಿಕರಲ್ಲಿ ಆತಂಕ ಮೂಡಿಸಿದೆ. ಮುಂದಿನ ದಿನಗಳಲ್ಲಿ ಮಳೆ ಹೆಚ್ಚಾದರೆ ರಸ್ತೆ ಸಂಪರ್ಕ ಕಡಿತಗೊಳ್ಳುವ ಲಕ್ಷಣಗಳು ಈಗಲೇ ಗೋಚರಿಸುತ್ತಿದೆ ಎಂದು ಸಾರ್ವಜನಿಕರು ಆರೋಪಿಸಿದ್ದಾರೆ.



SSLC: ಕೊಡಗು ಜಿಲ್ಲೆಗೆ ಶೇ.91.44 ರಷ್ಟು ಫಲಿತಾಂಶ

ಮಡಿಕೇರಿ, ಮೇ 19– ಕಳೆದ ಮಾರ್ಚ್ ಮತ್ತು ಏಪ್ರಿಲ್ ತಿಂಗಳಲ್ಲಿ ನಡೆದ ಎಸ್ಸೆಸ್ಸೆಲ್ಸಿ ಪರೀಕ್ಷಾ ಫಲಿತಾಂಶ ಗುರುವಾರ ಪ್ರಕಟವಾಗಿದೆ.

ಕೊಡಗು ಜಿಲ್ಲೆಯಲ್ಲಿ ಪ್ರಥಮ ಬಾರಿಗೆ ಪರೀಕ್ಷೆ ಬರೆದ 6,317 ವಿದ್ಯಾರ್ಥಿಗಳಲ್ಲಿ 5,776 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, ಶೇ.91.44 ರಷ್ಟು ಫಲಿತಾಂಶ ಬಂದಿದೆ. ಇವರಲ್ಲಿ 2,702 ಬಾಲಕರು ಮತ್ತು 3,074 ಬಾಲಕಿಯರು ಉತ್ತೀರ್ಣರಾಗಿದ್ದಾರೆ.

ಮಡಿಕೇರಿ ತಾಲೂಕಿಗೆ ಸಂಬಂಧಿಸಿದಂತೆ ಪರೀಕ್ಷೆ ಬರೆದ 1,831 ವಿದ್ಯಾರ್ಥಿಗಳಲ್ಲಿ 1,748 ವಿದ್ಯಾರ್ಥಿಗಳು ಉತ್ತೀರ್ಣರಾಗಿ ಶೇ.95.47 ರಷ್ಟು ಫಲಿತಾಂಶ ದೊರೆತಿದೆ.

ಸೋಮವಾರಪೇಟೆ ತಾಲೂಕಿನಲ್ಲಿ ಪರೀಕ್ಷೆ ಬರೆದ 2,504 ವಿದ್ಯಾರ್ಥಿಗಳಲ್ಲಿ 2,290 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, ಶೇ.91.45 ರಷ್ಟು ಫಲಿತಾಂಶ ದೊರೆತಿದೆ. ವಿರಾಜಪೇಟೆ ತಾಲೂಕಿನಲ್ಲಿ ಪರೀಕ್ಷೆ ಬರೆದ 1,982 ವಿದ್ಯಾರ್ಥಿಗಳಲ್ಲಿ 1,738 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, ಶೇ.87.69 ರಷ್ಟು ಫಲಿತಾಂಶ ಬಂದಿದೆ.

ಪ್ರಥಮ ಮತ್ತು ರಿಪೀಟರ್ಸ್ ಒಟ್ಟು ಸೇರಿ ಪರೀಕ್ಷೆ ಬರೆದ 6,710 ವಿದ್ಯಾರ್ಥಿಗಳಲ್ಲಿ 5,803 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, ಶೇ.86.48 ರಷ್ಟು ಫಲಿತಾಂಶ ಬಂದಿದೆ. ಜಿಲ್ಲೆಯಲ್ಲಿ ಅನುದಾನಿತ 6 ಶಾಲೆಗಳು, ಅನುದಾನರಹಿತ 39 ಶಾಲೆಗಳು, 10 ಸರ್ಕಾರಿ ಶಾಲೆಗಳು, 05 ಸರ್ಕಾರಿ ವಸತಿ ಶಾಲೆಗಳು ಒಟ್ಟು 60 ಶಾಲೆಗಳಲ್ಲಿ ಶೇ.100 ರಷ್ಟು ಫಲಿತಾಂಶ ಬಂದಿದೆ.

ಹಾಗೆಯೇ ಕನ್ನಡ ಭಾಷಾ ವಿಷಯದಲ್ಲಿ 104 ವಿದ್ಯಾರ್ಥಿಗಳು 125 ಕ್ಕೆ 125 ಅಂಕ ಪಡೆದಿದ್ದಾರೆ. ಇಂಗ್ಲೀಷ್ ಭಾಷಾ ವಿಷಯದಲ್ಲಿ 08 ವಿದ್ಯಾರ್ಥಿಗಳು 100 ಕ್ಕೆ 100 ಅಂಕ ಪಡೆದಿದ್ದಾರೆ. ಹಿಂದಿ ಭಾಷಾ ವಿಷಯದಲ್ಲಿ 257 ವಿದ್ಯಾರ್ಥಿಗಳು 100 ಕ್ಕೆ 100 ಅಂಕ ಪಡೆದಿದ್ದಾರೆ. ಗಣಿತ ವಿಷಯದಲ್ಲಿ 61 ವಿದ್ಯಾರ್ಥಿಗಳು 100 ಕ್ಕೆ 100 ಅಂಕ ಪಡೆದಿದ್ದಾರೆ. ವಿಜ್ಞಾನ ವಿಷಯದಲ್ಲಿ 21 ವಿದ್ಯಾರ್ಥಿಗಳು 100 ಕ್ಕೆ 100 ಅಂಕ ಪಡೆದಿದ್ದಾರೆ. ಹಾಗೆಯೇ ಸಮಾಜ ವಿಜ್ಞಾನದಲ್ಲಿ 407 ವಿದ್ಯಾರ್ಥಿಗಳು 100 ಕ್ಕೆ 100 ಅಂಕ ಪಡೆದು ಉತ್ತೀರ್ಣರಾಗಿದ್ದಾರೆ.

ಜಿಲ್ಲೆಯಲ್ಲಿ 622 ಅಂಕವನ್ನು ನಾಲ್ವರು ವಿದ್ಯಾರ್ಥಿನಿಯರು ಪಡೆದಿದ್ದಾರೆ. 621 ಅಂಕವನ್ನು ನಾಲ್ವರು ವಿದ್ಯಾರ್ಥಿಗಳು, 620 ಅಂಕವನ್ನು ಐವರು ವಿದ್ಯಾರ್ಥಿಗಳು, 619 ಅಂಕವನ್ನು ಐವರು ವಿದ್ಯಾರ್ಥಿಗಳು ಗಳಿಸಿದ್ದಾರೆ ಎಂದು ಸಾರ್ವಜನಿಕ ಶಿಕ್ಷಣ ಇಲಾಖೆ ಉಪ ನಿರ್ದೇಶಕರಾದ ವೇದಮೂರ್ತಿ ಅವರು ತಿಳಿಸಿದ್ದಾರೆ.

ಸುವರ್ಣಾವತಿ, ಚಿಕ್ಕಹೊಳೆ ಜಲಾಶಯ ಭರ್ತಿ ಸಂಭವ

ಸುರಕ್ಷಿತ ಸ್ಥಳಗಳಿಗೆ ತೆರಳಲು ನದಿಪಾತ್ರದ ಜನತೆಗೆ ಸೂಚನೆ

ಚಾಮರಾಜನಗರ, ಮೇ 19– ತಾಲೂಕಿನ ಸುವರ್ಣಾವತಿ ಹಾಗೂ ಚಿಕ್ಕಹೊಳೆ ಜಲಾಶಯಗಳ ಜಲಾನಯನ ಪ್ರದೇಶದಲ್ಲಿ ಹೆಚ್ಚಿನ ಮಳೆಯಾಗುತ್ತಿದ್ದು, ಜಲಾಶಯಗಳು ಯಾವುದೇ ಸಮಯದಲ್ಲಿ ಭರ್ತಿಯಾಗುವ ಸಾಧ್ಯತೆಯಿದೆ. ಹಾಗಾಗಿ, ಜಲಾಶಯಗಳ ನದಿಪಾತ್ರದ ಜನರು ಸುರಕ್ಷಿತ ಸ್ಥಳಗಳಿಗೆ ತೆರಳಲು ಮನವಿ ಮಾಡಲಾಗಿದೆ.

ಸುವರ್ಣಾವತಿ ಮತ್ತು ಚಿಕ್ಕಹೊಳೆ ಜಲಾಶಯಗಳ ಜಲಾನಯನ ಪ್ರದೇಶದಲ್ಲಿ ಹೆಚ್ಚು ಮಳೆಯಾಗುತ್ತಿರುವುದರಿಂದ ಜಲಾಶಯಗಳ ನೀರಿನ ಶೇಖರಣಾ ಸಾಮರ್ಥ್ಯ ಗರಿಷ್ಠ ಮಟ್ಟ ತಲುಪುವ ಹಂತದಲ್ಲಿದೆ. ಯಾವುದೇ ಸಮಯದಲ್ಲಿ ಜಲಾಶಯದಿಂದ ನೀರು ಬಿಡುವ ಸಾಧ್ಯತೆಯಿದ್ದು, ನದಿ ಪಾತ್ರದ ರೈತ ಬಾಂಧವರು, ಸುತ್ತಮುತ್ತಲಿನ ಗ್ರಾಮಸ್ಥರು ಮುನ್ನೆಚ್ಚರಿಕೆಯಾಗಿ ಸುರಕ್ಷಿತ ಸ್ಥಳಗಳಿಗೆ ತೆರಳಲು ಹಾಗೂ ಆಸ್ತಿ–ಪಾಸ್ತಿ, ಜಾನುವಾರುಗಳ ಬಗ್ಗೆ ನಿಗಾವಹಿಸಲು ಕಾವೇರಿ ನೀರಾವರಿ ನಿಗಮದ ಕಬಿನಿ ನಾಲೆಗಳ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ಅವರು ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

ಚಿರತೆ ದಾಳಿ: ಜಾನುವಾರು ಸಾವು

ಬೇಗೂರು, ಮೇ 19(ಕಿರಣ್)– ಚಿರತೆ ದಾಳಿಯಿಂದ ಜಾನುವಾರು ಸಾವನ್ನಪ್ಪಿರುವ ಘಟನೆ ಸಮೀಪದ ಕೋಟೆಕೆರೆ ಗ್ರಾಮದ ಜಮೀನಿನಲ್ಲಿ ಬುಧವಾರ ಸಂಜೆ ನಡೆದಿದೆ.

ಗ್ರಾಮದ ಅರಸಯ್ಯ ಅವರಿಗೆ ಸೇರಿದ ಜಾನುವಾರು ಸಾವನ್ನಪ್ಪಿದೆ. ಜಮೀನಿನಲ್ಲಿ ಬುಧವಾರ ಮೇಯುತ್ತಿದ್ದ ಜಾನುವಾರು ಮೇಲೆ ಚಿರತೆ ಏಕಾಏಕಿ ದಾಳಿ ನಡೆಸಿದೆ. ಈ ವೇಳೆ ಅಕ್ಕಪಕ್ಕದ ಜಮೀನಿನವರು ಜೋರಾಗಿ ಕೂಗಿಕೊಂಡಾಗ ಚಿರತೆ ಜಾನುವಾರು ಬಿಟ್ಟು ಪರಾರಿಯಾಗಿದೆ. ಘಟನೆಯಿಂದ ತೀವ್ರಗಾಯಗೊಂಡಿದ್ದ ಜಾನುವಾರು ಸ್ಥಳದಲ್ಲಿಯೇ ಸಾವನ್ನಪ್ಪಿದೆ. ವಿಷಯ ತಿಳಿದು ಸ್ಥಳಕ್ಕೆ ಓಂಕಾರ್ ವಲಯದ ಅರಣ್ಯಾಧಿಕಾರಿಗಳು ಭೇಟಿ ನೀಡಿ ಮಹಜರು ನಡೆಸಿದರು.

ಎಸ್‌ಎಸ್‌ಎಲ್‌ಸಿ: ಚಾ.ನಗರಕ್ಕೆ ಶೇ. 92.13ರಷ್ಟು ಫಲಿತಾಂಶ

- 52 ಶಾಲೆಗಳಿಗೆ ಶೇ. 100ರಷ್ಟು ಫಲಿತಾಂಶ
- ಚಾ.ನಗರ ಶೇ.87.70
- ಗುಂಡ್ಲುಪೇಟೆ ಶೇ. 90.62
- ಹನೂರು ಶೇ. 96.89
- ಕೊಳ್ಳೇಗಾಲ ಶೇ. 95.06
- ಯಳಂದೂರು ಶೇ. 95.75

ಚಾಮರಾಜನಗರ, ಮೇ 19– ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಫಲಿತಾಂಶ ಗುರುವಾರ ಮಧ್ಯಾಹ್ನ ಪ್ರಕಟಗೊಂಡಿದ್ದು, ಜಿಲ್ಲೆಯೂ ಶೇ. 92.13ರಷ್ಟು ಫಲಿತಾಂಶ ಪಡೆದಿದೆ. ಜಿಲ್ಲೆಯಲ್ಲಿ 11,547 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. ಈ ಪೈಕಿ 10,638 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ.

ಚಾಮರಾಜನಗರ ತಾಲೂಕಿನಲ್ಲಿ 3,797 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. ಇವರಲ್ಲಿ 3,330 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದು, ಶೇ. 87.70 ರಷ್ಟು ಫಲಿತಾಂಶ ಬಂದಿದೆ. ಗುಂಡ್ಲುಪೇಟೆ ತಾಲೂಕಿನಲ್ಲಿ 2,398 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. ಇವರಲ್ಲಿ 2,173 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದು, ಶೇ.90.62ರಷ್ಟು ಫಲಿತಾಂಶ ಬಂದಿದೆ. ಹನೂರು ತಾಲೂಕಿನಲ್ಲಿ 2,222 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. ಇವರಲ್ಲಿ 2,153 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದು, ಶೇ.96.89 ರಷ್ಟು ಫಲಿತಾಂಶ ಬಂದಿದೆ. ಕೊಳ್ಳೇಗಾಲ ತಾಲೂಕಿನಲ್ಲಿ 2,165 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. ಇವರಲ್ಲಿ 2,058 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದು, ಶೇ. 95.06 ರಷ್ಟು ಫಲಿತಾಂಶ ಬಂದಿದೆ. ಯಳಂದೂರು ತಾಲೂಕಿನಲ್ಲಿ 965 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. ಇವರಲ್ಲಿ 924 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದು, ಶೇ.95.75ರಷ್ಟು ಫಲಿತಾಂಶ ಬಂದಿದೆ.

ಒಟ್ಟು 5,818 ಬಾಲಕರು ಪರೀಕ್ಷೆಗೆ ಹಾಜರಾಗಿದ್ದು, ಇವರಲ್ಲಿ 5,219 ಮಂದಿ ತೇರ್ಗಡೆಯಾಗಿದ್ದು, ಶೇ. 89.70ರಷ್ಟು ಫಲಿತಾಂಶ ಬಂದಿದೆ. ಒಟ್ಟು 5,729 ಬಾಲಕಿಯರು ಪರೀಕ್ಷೆಗೆ ಹಾಜರಾಗಿದ್ದು, ಇವರಲ್ಲಿ 5,419 ಮಂದಿ ತೇರ್ಗಡೆಯಾಗಿದ್ದು ಶೇ. 94.59ರಷ್ಟು ಫಲಿತಾಂಶ ಬಂದಿದೆ. ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ಶೇ. 92.50ರಷ್ಟು ಹಾಗೂ ನಗರ ಪ್ರದೇಶ ವಿದ್ಯಾರ್ಥಿಗಳು ಶೇ. 91.49ರಷ್ಟು ಫಲಿತಾಂಶ ಪಡೆದಿದ್ದಾರೆ.

ಸರ್ಕಾರಿ ಶಾಲೆಗಳ 5,889 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, ಇವರಲ್ಲಿ 5,333 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, ಶೇ. 90.56 ರಷ್ಟು ಫಲಿತಾಂಶ ದಾಖಲಾಗಿದೆ. ಅನುದಾನಿತ ಶಾಲೆಗಳ 2,844 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, ಈ ಪೈಕಿ 2591 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದು, ಶೇ. 91.10ರಷ್ಟು ಫಲಿತಾಂಶ ಬಂದಿದೆ. ಅನುದಾನ ರಹಿತ ಶಾಲೆಗಳ 2,814 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, ಇವರಲ್ಲಿ 2,714 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, ಶೇ. 96.45ರಷ್ಟು ಫಲಿತಾಂಶ ಬಂದಿದೆ. 22 ಸರ್ಕಾರಿ ಶಾಲೆ, 6 ಅನುದಾನಿತ ಹಾಗೂ 24 ಅನುದಾನ ರಹಿತ ಶಾಲೆಗಳು ಸೇರಿದಂತೆ ಜಿಲ್ಲೆಯಲ್ಲಿ ಒಟ್ಟು 52 ಶಾಲೆಗಳು ಶೇ. 100ರಷ್ಟು ಫಲಿತಾಂಶ ಪಡೆದಿವೆ.

ಚಾಮರಾಜನಗರ ತಾಲೂಕಿನ 7 ಸರ್ಕಾರಿ ಶಾಲೆಗಳು, 1 ಅನುದಾನಿತ ಹಾಗೂ 5 ಅನುದಾನರಹಿತ ಶಾಲೆಗಳು ಸೇರಿದಂತೆ ಒಟ್ಟು 13 ಶಾಲೆಗಳು, ಗುಂಡ್ಲುಪೇಟೆ ತಾಲೂಕಿನ 4 ಸರ್ಕಾರಿ, 1 ಅನುದಾನಿತ ಹಾಗೂ 1 ಅನುದಾನ ರಹಿತ ಶಾಲೆಗಳು ಸೇರಿ ದಂತೆ ಒಟ್ಟು 6 ಶಾಲೆಗಳು, ಹನೂರು ತಾಲೂಕಿನ 6 ಸರ್ಕಾರಿ ಹಾಗೂ 6 ಅನುದಾನ ರಹಿತ ಶಾಲೆಗಳು ಸೇರಿದಂತೆ ಒಟ್ಟು 12 ಶಾಲೆಗಳು, ಕೊಳ್ಳೇಗಾಲ ತಾಲೂಕಿನ 2 ಸರ್ಕಾರಿ, 3 ಅನುದಾನಿತ ಹಾಗೂ 9 ಅನುದಾನರಹಿತ ಶಾಲೆಗಳು ಸೇರಿದಂತೆ ಒಟ್ಟು 14 ಶಾಲೆಗಳು ಮತ್ತು ಯಳಂದೂರು ತಾಲೂಕಿನ 3 ಸರ್ಕಾರಿ, 1 ಅನುದಾನಿತ ಹಾಗೂ 3 ಅನುದಾನರಹಿತ ಶಾಲೆಗಳು ಸೇರಿದಂತೆ ಒಟ್ಟು 7 ಶಾಲೆಗಳು ಶೇ. 100ರಷ್ಟು ಫಲಿತಾಂಶ ಪಡೆದುಕೊಂಡಿವೆ.

ಜಿಲ್ಲೆಯ ಐವರು ಟಾಪರ್


ಅನುಷಾ


ಸಿಂಚನಾ


ಕೆವಿಎನ್ ದೇವಿ


ಬಿ. ಪಾರ್ವತಮ್ಮ


ಸ್ಫೂರ್ತಿ

ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಜಿಲ್ಲೆಯ ಒಟ್ಟು 5 ಮಂದಿ ವಿದ್ಯಾರ್ಥಿಗಳು 621 ಅಂಕಗಳನ್ನು ಗಳಿಸಿ ಟಾಪರ್‌ಗಳಾಗಿದ್ದಾರೆ. ಈ ಸಾಧನೆ ಮಾಡಿದ ಐದು ಮಂದಿಯೂ ಬಾಲಕಿಯರು ಎನ್ನುವುದು ವಿಶೇಷ.

ಗುಂಡ್ಲುಪೇಟೆ ತಾಲೂಕಿನ ಯಡವನಹಳ್ಳಿಯ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯ ಅನುಷಾ, ಆದರ್ಶ ವಿದ್ಯಾಲಯದ ಡಿ.ಎಲ್.ಸಿಂಚನಾ, ಕೊಳ್ಳೇಗಾಲದ ಆದರ್ಶ ವಿದ್ಯಾಲಯದ ಕೆವಿಎನ್ ದೇವಿ, ಚಾಮರಾಜನಗರ ತಾಲೂಕಿನ ಜ್ಯೋತಿಗೌಡನಪುರದ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯ ಬಿ.ಪಾರ್ವತಮ್ಮ, ಮರಿಯಾಲದ ಮುರುಘ ರಾಜೇಂದ್ರಸ್ವಾಮಿ ಪ್ರೌಢಶಾಲೆಯ ಸ್ಫೂರ್ತಿ ಈ ಸಾಧನೆ ಮಾಡಿದ ವಿದ್ಯಾರ್ಥಿನಿಯರಾಗಿದ್ದಾರೆ.

ಸೆಂಟ್ ಜಾನ್ಸ್ ಶಾಲೆಯ ವಿದ್ಯಾರ್ಥಿಗಳ ಸಾಧನೆ


ಚಂದನಾ


ವರ್ಷಿಣಿ


ಜಿ.ಆರ್. ದೀಕ್ಷಿತ್

ಗುಂಡ್ಲುಪೇಟೆ, ಮೇ 19(ಸೋಮ್.ಜಿ)– ಸೆಂಟ್ ಜಾನ್ಸ್ ಶಾಲೆಯ ಚಂದನಾ, ವರ್ಷಿಣಿ, ಜಿ.ಆರ್.ದೀಕ್ಷಿತ್ ತಲಾ 620 ಅಂಕಗಳನ್ನು ಗಳಿಸುವುದರೊಂದಿಗೆ ತಾಲೂಕಿನಲ್ಲಿ ಅತಿ ಹೆಚ್ಚು ಅಂಕಗಳಿಸಿದ್ದ ವಿದ್ಯಾರ್ಥಿಗಳಾಗಿದ್ದಾರೆ.

ಶಾಸಕರ ಅಭಿನಂದನೆ: ಶೇ. 90ರಷ್ಟು ಫಲಿತಾಂಶ ಪಡೆದ ವಿದ್ಯಾರ್ಥಿಗಳನ್ನು ಹಾಗೂ ತಾಲೂಕಿಗೆ ಉತ್ತಮ ಫಲಿತಾಂಶ ಬರಲು ಶ್ರಮಿಸಿದ ಶಿಕ್ಷಕರಿಗೆ ಕ್ಷೇತ್ರದ ಶಾಸಕ ಸಿ.ಎಸ್.ನಿರಂಜನ ಕುಮಾರ್ ಅಭಿನಂದನೆ ಸಲ್ಲಿಸಿದರು.

ಉಸ್ತುವಾರಿ ಸಚಿವರಿಂದ ಅಭಿನಂದನೆ

ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಜಿಲ್ಲೆಯು ಶೇ. 92.13ರಷ್ಟು ಫಲಿತಾಂಶ ಪಡೆದು ಅಭೂತಪೂರ್ವ ಸಾಧನೆ ಮಾಡಿದೆ. ಇದಕ್ಕೆ ಕಾರಣರಾದ ಜಿಲ್ಲೆಯ ವಿದ್ಯಾರ್ಥಿ ವೃಂದ, ಶಿಕ್ಷಕ–ಶಿಕ್ಷಕಿಯರು, ಪೋಷಕರು, ಇಲಾಖೆಯ ಅಧಿಕಾರಿಗಳು ಮತ್ತು ಜಿಲ್ಲಾಡಳಿತಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಅನುತ್ತೀರ್ಣರಾದ ವಿದ್ಯಾರ್ಥಿಗಳು ನಿರಾಶೆ ಹೊಂದದೆ ಪೂರಕ ಪರೀಕ್ಷೆಯಲ್ಲಿ ಮತ್ತಷ್ಟು ಪರಿಶ್ರಮದಿಂದ ಪರೀಕ್ಷೆ ಬರೆದು ಯಶಸ್ವಿಯಾಗಬೇಕು.

\- ವಿ.ಸೋಮಣ್ಣ,
ಜಿಲ್ಲಾ ಉಸ್ತುವಾರಿ ಸಚಿವ.

ಕಾರ್ಡಿಯಾಲಜಿಸ್ಟ್ ಆಗುವಾಸೆ

ಕೊಳ್ಳೇಗಾಲ, ಮೇ 19(ನಾಗೇಂದ್ರಸ್ವಾಮಿ)– ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ 621 ಅಂಕಗಳಿಸಿ, ಜಿಲ್ಲೆಗೆ ಟಾಪರ್ ಆಗಿರುವ ಕೊಳ್ಳೇಗಾಲದ ಸರ್ಕಾರಿ ಆದರ್ಶ ಪ್ರೌಢಶಾಲೆಯ ವಿದ್ಯಾರ್ಥಿನಿ ಕೆವಿಎನ್ ದೇವಿ ಮಾತನಾಡಿ, ನಾನು ಹೆಚ್ಚಿನ ಅಂಕ ಗಳಿಸಲು ಶಿಕ್ಷಕರು ಹಾಗೂ ನನ್ನ ಪೋಷಕರ ಮಾರ್ಗದರ್ಶನ ಸಹಕಾರವಾಯಿತು. ಮುಂದೆ ವೈದ್ಯಕೀಯ ಸೀಟ್ ಪಡೆದು ಕಾರ್ಡಿಯಾಲಜಿಸ್ಟ್ ಆಗಬೇಕು ಎಂಬ ಗುರಿ ಹೊಂದಿದ್ದೇನೆ ಎಂದು 'ಮೈಸೂರುಮಿತ್ರ'ನಿಗೆ ತಿಳಿಸಿದರು.

ಈಕೆ ಸರ್ಕಾರಿ ಶಾಲೆಯ ಶಿಕ್ಷಕ ವೆಂಕಟನಾರಾಯಣ್ ಮತ್ತು ಶಿಕ್ಷಕಿ ರೇಣುಕಾದೇವಿ ಅವರ ಪುತ್ರಿಯಾಗಿದ್ದು, ವಿದ್ಯಾರ್ಥಿನಿಯನ್ನು ಆದರ್ಶ ಶಾಲೆಯ ಮುಖ್ಯ ಶಿಕ್ಷಕಿ ಮಂಜುಳಾ, ಶಿಕ್ಷಣಾಧಿಕಾರಿ ಚಂದ್ರಪಾಟೀಲ್, ಸಹಶಿಕ್ಷಕರು, ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ಜಾಕಿ ಸುರೇಶ್ ಅಭಿನಂದಿಸಿದ್ದಾರೆ

ಮೈಸೂರು ಮಿತ್ರ
ಶುಕ್ರವಾರ
20-5-2022

ಬೆಳ್ಳಿ ಬೆಳಕು

ಸತ್ಯಮೂರ್ತಿ ತೋಳಹುಣಸೆ

ಲವ್‌ಫೇಲ್ಯೂರ್ ಜೀವನದ ಅಂತ್ಯವಲ್ಲ ಪ್ರಾರಂಭ



ಪ್ರೀತಿ, ಪ್ರೇಮ ಅಂತ ಜೀವನವನ್ನು ಹಾಳು ಮಾಡಿಕೊಳ್ಳುವವರಿಗೆ, ಲವ್‌ನಲ್ಲಿ ಫೇಲ್ಯೂರ್ ಆದಕೂಡಲೇ ನನ್ನ ಜೀವನವೇ ಮುಗಿದು ಹೋಯಿತು ಎಂದು ಆತ್ಮಹತ್ಯೆಗೆ ಶರಣಾಗುವ ನಿರ್ಧಾರ ಕೈಗೊಳ್ಳುವವರಿಗೆ ಒಂದೊಳ್ಳೇ ಸಂದೇಶ ಇರುವ ಚಿತ್ರ 'ಪ್ರಾರಂಭ' ಈವಾರ ರಾಜ್ಯಾದ್ಯಂತ ತೆರೆಕಾಣುತ್ತಿದೆ. ಕ್ರೇಜಿಸ್ಟಾರ್ ಪುತ್ರ ಮನುರಂಜನ್ ರವಿಚಂದ್ರನ್ ಹಾಗೂ ಕೀರ್ತಿ ಕಲ್ಕೆರೆ ನಾಯಕ, ನಾಯಕಿಯಾಗಿ ಅಭಿನಯಿಸಿರುವ ಈ ಚಿತ್ರಕ್ಕೆ ಯುವ ನಿರ್ದೇಶಕ ಮನುಕಲ್ಯಾಡಿ ಕಥೆ, ಚಿತ್ರಕಥೆ ಬರೆದು ಆಕ್ಷನ್‌ಕಟ್ ಹೇಳಿದ್ದಾರೆ. ಜಗದೀಶ್ ಕಲ್ಯಾಡಿ ಅವರು ಈ ಚಿತ್ರವನ್ನು ಅದ್ದೂರಿ ವೆಚ್ಚದೊಂದಿಗೆ ನಿರ್ಮಿಸಿದ್ದಾರೆ.

ಪ್ರಾರಂಭ ಕೋವಿಡ್‌ಗೂ ಮುಂಚೆಯೇ ಬಿಡುಗಡೆಯಾಗಬೇಕಿತ್ತು. ಈಗ ರಿಲೀಸ್ ಮಾಡುತ್ತಿದ್ದೇವೆ, ಈಗಿನ ಕಾಲದ ಯೂತ್ಸ್‌ಗೆ ಹಾಗೂ ಪೋಷಕರಿಗೂ ಉತ್ತಮ ಸಂದೇಶ ಈ ಚಿತ್ರದಲ್ಲಿದೆ. ಲವ್‌ಸ್ಟೋರಿ ಇರುವ ಈ ಚಿತ್ರದಲ್ಲಿ ನಾಯಕನಿಗೆ 3 ಶೇಡ್ಸ್ ಇದೆ. ಒಂದೊಂದು ಶೇಡ್‌ಗೂ ಒಂದೊಂದು ಅರ್ಥವಿದೆ. 82 ದಿನಗಳ ಕಾಲ ಬೆಂಗಳೂರು, ಬಳ್ಳಾರಿಯ ಜಿಂದಾಲ್ ಸಿಟಿ, ಮೂಡಿಗೆರೆ, ಮಡಿಕೇರಿ ಹಾಗೂ ಗೋವಾ ಸೇರಿದಂತೆ ಹಲವಾರು ಲೊಕೇಶನ್‌ಗಳಲ್ಲಿ ಚಿತ್ರೀಕರಿಸಿದ್ದೇವೆ ಎಂದು ನಿರ್ದೇಶಕ ಮನು ಕಲ್ಯಾಡಿ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

ನಾಯಕ ಮನುರಂಜನ್ ಮಾತನಾಡುತ್ತ, ನನ್ನ ಅಭಿನಯದ ನಾಲ್ಕನೇ ಚಿತ್ರವಿದು. ತಾನು ಪ್ರೀತಿಸಿದ ಹುಡುಗ, ಹುಡುಗಿ ಕೈಕೊಟ್ಟರೆ, ಕೆಲವರು ಆತ್ಮಹತ್ಯೆಗೆ ಶರಣಾಗುತ್ತಾರೆ. ಆದರೆ ಅದು ತಪ್ಪು. ಆನಂತರವೂ ಒಂದು ಜೀವನ ಇದೆ. ನಮ್ಮನ್ನು ನಂಬಿಕೊಂಡು ಅಪ್ಪ, ಅಮ್ಮ, ಅಕ್ಕ, ತಂಗಿ, ಅಣ್ಣ, ತಮ್ಮ ಹೀಗೆ ಇಡೀ ಕುಟುಂಬವೇ ಇರುತ್ತದೆ ಎಂಬುದನ್ನು ಯೋಚಿಸಿ ಮುನ್ನಡೆಯಬೇಕು ಎನ್ನುವ ಕಂಟೆಂಟ್ ಈ ಚಿತ್ರದಲ್ಲಿದೆ. ರಿಹ್ಯಾಬಿಟೇಶನ್ ಸೆಂಟರ್‌ನಲ್ಲಿ ಇಂಥವರನ್ನು ಹೇಗೆ ಕಂಟ್ರೋಲ್ ಮಾಡುತ್ತಾರೆಂದು ತೋರಿಸಿದ್ದೇವೆ. ಹುಡುಗಿಗೋಸ್ಕರ ಸೂಸೈಡ್, ಡ್ರಗ್ ಅಡಿಕ್ಟ್ ಆಗಬಾರದು ಎಂಬ ಮೆಸೇಜ್ ಕೂಡ ಇದರಲ್ಲಿದೆ ಎಂದರು. ನನ್ನ ಮೊದಲ ಚಿತ್ರವಿದು, ಪ್ರಾರ್ಥನಾ ಎಂಬ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ, ಚಿತ್ರದ ಡೈಲಾಗ್ ಎಲ್ಲರಿಗೂ ಕನೆಕ್ಟ್ ಆಗುತ್ತವೆ ಎಂದು ನಾಯಕಿ ಕೀರ್ತಿ ಕಲ್ಕೆರೆ ತಿಳಿಸಿದರು. ಸಚಿತ್ ಫಿಲಂಸ್ ಮೂಲಕ ಈ ಚಿತ್ರವನ್ನು ವೆಂಕಟ್‌ಗೌಡ ಅವರು 200ಕ್ಕೂ ಹೆಚ್ಚು ಚಿತ್ರಮಂದಿರಗಳಲ್ಲಿ ರಿಲೀಸ್ ಮಾಡುತ್ತಿದ್ದಾರೆ. ಈ ಚಿತ್ರವನ್ನು ಸುಂದರವಾದ ಸ್ಥಳಗಳಲ್ಲಿ ಚಿತ್ರೀಕರಿಸಿರುವುದಾಗಿ ಛಾಯಾಗ್ರಾಹಕ ಸುರೇಶ್‌ಬಾಬು ಹೇಳಿದರು. ಚಿತ್ರದ 5 ಹಾಡುಗಳಿಗೆ ಪ್ರಜ್ವಲ್ ಪೈ ಸಂಗೀತ ಸಂಯೋಜನೆ ಮಾಡಿದ್ದಾರೆ.



ಓ ಮೈ ಲವ್ ಪೋಸ್ಟರ್ ಬಿಡುಗಡೆ

ಪ್ರೀತಿ ಪ್ರೇಮದ ಜೊತೆಗೆ ತಂದೆ ಮಗನ ಸಂಬಂಧದ ಕಥಾನಕ ಹೊಂದಿರುವ ಆ್ಯಕ್ಷನ್ ಲವ್ ಎಂಟರ್‌ಟೈನರ್ ಸಿನಿಮಾ ಓ ಮೈ ಲವ್'. ಸ್ಮೈಲ್ ಶ್ರೀನು ಅವರ ನಿರ್ದೇಶನದ, ಅಕ್ಷಿತ್ ಶಶಿಕುಮಾರ್, ಕೀರ್ತಿ ಕಲ್ಕೆರೆ ನಟಿಸಿರುವ ಈ ಚಿತ್ರದ ಗ್ಲಿಂಪ್ಸ್ ಎ2 ಮ್ಯೂಸಿಕ್ ಚಾನಲ್'ನಲ್ಲಿ ಬಿಡುಗಡೆಯಾಗಿದ್ದು, ರಿಲೀಸಾದ ಕೆಲವೇ ದಿನಗಳಲ್ಲಿ ಲಕ್ಷಾಂತರ ಹಿಟ್ಸ್ ದಾಖಲಿಸಿ ಟ್ರೆಂಡಿಂಗ್'ನಲ್ಲಿದೆ. ಅಲ್ಲದೆ ಹಿರಿಯ ನಿರ್ದೇಶಕ ಕೆ.ರಾಘವೇಂದ್ರ ರಾವ್ ಅವರು ಗ್ಲಿಂಪ್ಸ್ ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಜಿ.ಸಿ.ಬಿ ಪ್ರೊಡಕ್ಷನ್ಸ್ ಬ್ಯಾನರ್ ಅಡಿಯಲ್ಲಿ ಜಿ.ರಾಮಾಂಜಿನಿ ಅವರು ಈ ಚಿತ್ರಕ್ಕೆ ಕಥೆ ಬರೆದು, ನಿರ್ಮಿಸಿದ್ದಾರೆ. ಜೂನ್ 24ಕ್ಕೆ ಬಿಡುಗಡೆಯಾಗಲಿರುವ ಈ ಚಿತ್ರವನ್ನು ರಿಲೀಸ್ ಮಾಡಲು ಹಲವಾರು ವಿತರಕರು ಮುಂದೆ ಬಂದಿದ್ದಾರೆ. ಚರಣ್ ಅರ್ಜುನ್ ಸಂಗೀತ ಸಂಯೋಜನೆಯ ಹಾಡುಗಳಿಗೆ ವಿ.ನಾಗೇಂದ್ರ ಪ್ರಸಾದ್ ಸಾಹಿತ್ಯ ರಚಿಸಿದ್ದಾರೆ.

ತೆಲುಗು ಖಳನಟ ದೇವ್‌ಗಿಲ್, ಎಸ್.ನಾರಾಯಣ್, ಸಾಧುಕೋಕಿಲ, ಟೆನ್ನಿಸ್ ಕೃಷ್ಣ ಹಾಗೂ ಪವಿತ್ರಾ ಲೋಕೇಶ್ ಚಿತ್ರದ ತಾರಾಗಣದಲ್ಲಿದ್ದಾರೆ. ಸದ್ಯದಲ್ಲೇ ಟ್ರೇಲರ್ ರಿಲೀಸ್ ಮಾಡುವ ಯೋಜನೆ ಚಿತ್ರತಂಡಕ್ಕಿದೆ.

ಸಂಘರ್ಷಗಳ ಸುತ್ತ ಯುಗಾಂತರ

ಇತ್ತೀಚೆಗೆ ಕನ್ನಡದಲ್ಲಿ ವಿಭಿನ್ನ ಶೈಲಿಯ ಧಾರವಾಹಿಗಳು ಮೂಡಿ ಬರುತ್ತಿವೆ. ಯಾವುದೇ ಸಿನಿಮಾಗೂ ಕಮ್ಮಿಯಿಲ್ಲದಂಥ ಅದ್ದೂರಿತನ, ಕಥೆ, ನಿರೂಪಣೆಯ ಮೂಲಕ ಕಿರುತೆರೆ ವೀಕ್ಷಕರನ್ನು ಸೆಳೆಯುತ್ತಿವೆ. ಅಂಥದೇ 3 ಬೇರೆ ಬೇರೆ ಜಾನರ್ ಕಥಾಹಂದರ ಇರುವ ಸೀರಿಯಲ್ ಗಳನ್ನು ಸಿರಿಕನ್ನಡ ವಾಹಿನಿ ಇದೇ 23ರಿಂದ ಪ್ರಸಾರ ಮಾಡುತ್ತಿದೆ. ಇತ್ತೀಚೆಗೆ ನಡೆದ ಪತ್ರಿಕಾಗೋಷ್ಠಿಯಲ್ಲಿ ರಾಜೇಶ್ ರಾಜಘಟ್ಟ ಹಾಗೂ ಸಂಜಯ ಶಿಂಧೆ ಅವರು ಮಾಹಿತಿ ಹಂಚಿಕೊಂಡರು.

ಎಸ್.ಎನ್.ಸೇತುರಾಂ ಅವರ ನಿರ್ದೇಶನದ ಯುಗಾಂತರ ಅರುಂಧತಿ ಎಂಬ ಮಹಿಳಾ ಐ.ಎ.ಎಸ್. ಅಧಿಕಾರಿಯ ಸುತ್ತ ನಡೆಯುವ ರಾಜಕೀಯ ಸಂಘರ್ಷದ ಕಥಾನಕವನ್ನು ಒಳಗೊಂಡಿದೆ.

ಇದಲ್ಲದೆ 'ರಜಿಯಾ ರಾಮಾ' ಎನ್ನುವ ಮತ್ತೊಂದು ಸೀರಿಯಲ್ ಬ್ರಾಹ್ಮಣ ಯುವಕ ಹಾಗೂ ಮುಸ್ಲಿಂ ಯುವತಿಯ ನಡುವಿನ ಪ್ರೇಮಕಥೆಯನ್ನು ಒಳಗೊಂಡಿದೆ. ಧರ್ಮಕ್ಕೂ ಮಿಗಿಲಾದ ಪ್ರೇಮಕಥೆ ಎಂಬ ಟ್ಯಾಗ್ ಲೈನ್ ಇದಕ್ಕಿದೆ ಈ ಮೂರೂ ಧಾರವಾಹಿಗಳು ಮೇ 23ರಿಂದಲೇ ಪ್ರಸಾರ ಆರಂಭಿಸಲಿವೆ

ಸ್ನೇಹದ ಪ್ರಾಮುಖ್ಯತೆ ಹೇಳುವ ಬಡ್ಡೀಸ್



ಕನ್ನಡತಿ ಧಾರವಾಹಿಯ ಹರ್ಷನ ಪಾತ್ರದ ಮೂಲಕ ಕನ್ನಡಿಗರಿಗೆ ಚಿರಪರಿಚಿತನಾಗಿರುವ ನಟ ಕಿರಣ್‌ರಾಜ್ ಅಭಿನಯದ ಚಿತ್ರ ಬಡ್ಡೀಸ್. ಜೂನ್ 24ರಂದು ಈ ಚಿತ್ರ ಬಿಡುಗಡೆಯಾಗುತ್ತಿದೆ. ಈ ಚಿತ್ರದಲ್ಲಿ ಸ್ನೇಹಿತರ ನಡುವಿನ ಫ್ರೆಂಡ್‌ಷಿಪ್ ಹಾಡನ್ನು ಇತ್ತೀಚೆಗೆ ನಡೆದ ಕಾರ್ಯಕ್ರಮದಲ್ಲಿ ಬಿಡುಗಡೆ ಮಾಡಲಾಯಿತು. ನಾಯಕ ಕಿರಣ್‌ರಾಜ್ ಪೋಷಕರು ಹಾಗೂ ಅವರ ಅಭಿಮಾನಿ ಸಮರ್ಥ್ ಈ ಹಾಡನ್ನು ರಿಲೀಸ್ ಮಾಡಿದರು. ಸ್ನೇಹದ ಪ್ರಾಮುಖ್ಯತೆ ಹೇಳುವ ಈ ಚಿತ್ರಕ್ಕೆ ಗುರುತೇಜ್‌ಶೆಟ್ಟಿ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ.


ಚಿತ್ರದ ಕುರಿತಂತೆ ಮಾತನಾಡಿದ ಗುರುತೇಜ್, ಬಡ್ಡೀಸ್ ಎಂದರೆ ಕಾಲೇಜಿನಲ್ಲಿ ಹುಡುಗರು ತಮ್ಮ ಹತ್ತಿರದ ಸ್ನೇಹಿತರನ್ನು ಕರೆಯುವ ಪದ. ನಾನು ಈ ಕಥೆಯನ್ನು ಮಾಡಿಕೊಂಡು ನಿರ್ಮಾಪಕರ ಹುಡುಕಾಟದಲ್ಲಿದ್ದಾಗ, ಸ್ನೇಹಿತರ ಮೂಲಕ ಭಾರತಿಶೆಟ್ಟಿಯವರ ಪರಿಚಯವಾಯಿತು. ಅವರಿಗೆ ಕಥೆ ಹೇಳಿದಾಗ ಮೆಚ್ಚಿಕೊಂಡು ನಿರ್ಮಾಣಕ್ಕೆ ಮುಂದಾದರು. ಸ್ನೇಹದ ಪ್ರಾಮುಖ್ಯತೆ, ಮಹತ್ವವನ್ನು ಸಾರುವ ಚಿತ್ರವಿದು. ಇಂಜಿನಿಯರಿಂಗ್ ಕಾಲೇಜಿನಲ್ಲಿ ನಡೆಯುವ ಚಿತ್ರದ ಕಥೆಯಲ್ಲಿ ಕಿರಣ್‌ರಾಜ್ ನಾಯಕರಾಗಿ ಅಭಿನಯಿಸಿದ್ದಾರೆ. ಸಾಮಾನ್ಯವಾಗಿ ಎಲ್ಲಾ ತಂದೆಯರು ಮಗನಿಗೆ ಕಾರು, ಬೈಕು ಮುಂತಾದವುಗಳನ್ನು ಉಡುಗೊರೆಯಾಗಿ ಕೊಡುತ್ತಾರೆ. ಆದರೆ ನಮ್ಮ ಚಿತ್ರದಲ್ಲಿ ಶ್ರೀಮಂತ ತಂದೆ, ಮಗನಿಗೆ ಸ್ನೇಹಿತರನ್ನೇ ಉಡುಗೊರೆಯಾಗಿ ನೀಡುತ್ತಾನೆ. ನಾಯಕ ಹಾಗೂ ಮೂವರು ಸ್ನೇಹಿತರ ನಡುವೆ ನಡೆಯುವ ಈ ಕಥೆಯಲ್ಲಿ ಲವ್‌ಸ್ಟೋರಿಯೊಂದಿಗೆ ಸೆಂಟಿಮೆಂಟ್ ಸನ್ನಿವೇಶಗಳೂ ಇದ್ದು, ನೋಡುಗರ ಮನಸ್ಸಿಗೆ ಹತ್ತಿರವಾಗಲಿದೆ ಎಂದು ಹೇಳಿದರು. ಬೆಂಗಳೂರಿನವರಾದ ಭಾರತಿಶೆಟ್ಟಿ ಕಳೆದ ಕೆಲ ವರ್ಷಗಳಿಂದ ದುಬೈನಲ್ಲಿ ಜಾಹೀರಾತು ಸಂಸ್ಥೆ ನಡೆಸುತ್ತಿದ್ದಾರೆ. ಗುರುತೇಜ್‌ಶೆಟ್ಟಿ ಅವರು ಮಾಡಿಕೊಂಡಿದ್ದ ಬಡ್ಡೀಸ್ ಕಥೆ ಇಷ್ಟವಾಗಿ ಸಿನಿಮಾ ನಿರ್ಮಾಣಕ್ಕೆ ಮುಂದಾಗಿದ್ದಾರೆ,

ನಾಯಕ ಕಿರಣ್‌ರಾಜ್ ಮಾತನಾಡುತ್ತ, ನನಗೆ ತುಂಬಾ ಹೆಸರು ತಂದುಕೊಟ್ಟದ್ದು ಕನ್ನಡತಿ ಧಾರವಾಹಿ. ಒಂದೊಳ್ಳೇ ಚಿತ್ರದಲ್ಲಿ ನಟಿಸಬೇಕೆಂಬ ಆಸೆಯಿದ್ದ ನನಗೆ ಗುರುತೇಜ್ ಶೆಟ್ಟಿ ಹೇಳಿದ ಕಥೆ ಹಿಡಿಸಿತು. ಈಗಾಗಲೇ ಕೆಲವು ಚಿತ್ರಗಳಲ್ಲಿ ಅಭಿನಯಿಸಿದ್ದರೂ, ನಾಯಕನಾಗಿ ಇದೇ ನನ್ನ ಮೊದಲಚಿತ್ರ. ಸ್ನೇಹದ ಮಹತ್ವ ಸಾರುವ ಈ ಚಿತ್ರದಲ್ಲಿ ಮನೋರಂಜನೆಗೆ ಬೇಕಾದ ಎಲ್ಲಾ ಅಂಶಗಳಿವೆ ಎಂದು ಹೇಳಿದರು. ಜೂಡಾಸ್ಯಾಂಡಿ ಅವರು ಬಡ್ಡೀಸ್ ಚಿತ್ರದ ಹಾಡುಗಳಿಗೆ ಸಂಗೀತ ನೀಡಿದ್ದು, ಯುಎಸ್‌ಎ ನಿವಾಸಿ ನಿಭಾಶೆಟ್ಟಿ ಕ್ಯಾಮೆರಾ ವರ್ಕ್ ಮಾಡಿದ್ದಾರೆ.



ಸಿನಿಪದಬಂಧ–008

ಆಜ಼ಾದ್ ಜಿ. ಆಚಾರ್ಯ 6361429085



ಹೆಸರು

ವಿಳಾಸ ____________________

ದೂರವಾಣಿ ಸಂಖ್ಯೆ ____________________

ಎಡದಿಂದ ಬಲಕ್ಕೆ

1. ದಿಗಂತ್ ಅಭಿನಯದಲ್ಲಿ ಆರಂಭವಾದ ಕಥೆ (9)
4. ಶಿವರಾಜಕುಮಾರ್ ಅಭಿನಯದ ಜಗತ್ತು (2)
5. ಅನಂತನಾಗ್ ದ್ವಿಪಾತ್ರದಲ್ಲಿ ಅಭಿನಯಿಸಿದ ಚಿತ್ರ (6)
8. ದುನಿಯಾ ವಿಜಿ–ಪ್ರಣೀತಾ ಅಭಿನಯದ 2011ರ ಚಿತ್ರ (4)
10. ದುನಿಯಾ ವಿಜಿ ತೋರಿದ ಸಾಮರ್ಥ್ಯ (3)
11. ಶಶಿಕುಮಾರ್ ಮತ್ತು ಜಯಪ್ರದಾ ನಟಿಸಿದ ಚಿತ್ರ (5)
14. ರವಿಚಂದ್ರನ್ ಮಾಡಿದ ಯುದ್ಧ (3)
15. ಅತಿಥಿ ನಟರಾಗಿ ಡಾ. ರಾಜ್ ಮೊದಲ ಚಿತ್ರ (4)
18. ಸೃಜನ್ ಲೋಕೇಶ್–ರಾಧಿಕಾ ಕುಮಾರಸ್ವಾಮಿ ಜೋಡಿಯ ಚಿತ್ರ (6)
19. ಶಿವಣ್ಣ–ವಿಜಯರಾಘವೇಂದ್ರ ಅಭಿನಯದ ಚಿತ್ರ (2)
21. ಶಿವಣ್ಣ ಅಭಿನಯಿಸಿದ ಐತಿಹಾಸಿಕ ಚಿತ್ರ (9)

ಮೇಲಿನಿಂದ ಕೆಳಕ್ಕೆ

1. ಈ ಕನ್ನಡಮ್ಮ ಸದಾ ಚಿನ್ಮಯಿ (6)
2. ಶ್ರೀನಗರ ಕಿಟ್ಟಿ ಅಭಿನಯದ ಬೆಟ್ಟ (2)
3. ಹೃದಯ ಸಮುದ್ರ ಕಲಕಿದ ಕುಮಾರ್ ಬಂಗಾರಪ್ಪ ಚಿತ್ರ (4)
6. -- ಮೆಚ್ಚಿದ ಹುಡುಗ–ಶಿವಣ್ಣ (2)
7. ಅರಸು ಚಿತ್ರದ ನಾಯಕಿಯ ಪೂರ್ವಾರ್ಧ (2)
8. ಜಾಕಿಶ್ರಾಫ್ ನಟಿಸಿದ ಕನ್ನಡ ಚಿತ್ರ (3)
9. --ರಾಗ, ರಾಜ್ ಕುಮಾರ್–ಭಾರತಿ ಅಭಿನಯದ ಚಿತ್ರ (2)
11. ವಿಜಯಶಾಂತಿ–ಸಾಯಿಕುಮಾರ್ ಅಭಿನಯದ ಶಸ್ತ್ರ (3)
12. ಕಮಲ್ ಹಾಸನ್–ರಮೇಶ್ ಅರವಿಂದ್ ಅಭಿನಯದ ಹಾಸ್ಯಮಯ ಚಿತ್ರ (6)
13. ಜಾಮೂನು ತಿನ್ನಲು ಬಂದ ಯಶ್ –ದೀಪಾ ಸನ್ನಿಧಿ ಚಿತ್ರ (2)
15. ನಾಗತಿಹಳ್ಳಿ ಚಂದ್ರಶೇಖರರ ನಿರ್ದೇಶನದಲ್ಲಿ ಎರಡು ಸಲ ಬಂದ ದೇಶ (4)
16. 2017ರ ಆಲಾಪ (2)
17. ಪ್ರೇಮ--, ಅನಂತನಾಗ್–ಮಹಾಲಕ್ಷ್ಮಿ ಅಭಿನಯದ ಚಿತ್ರ (2)
20. ಮೂಗ ತೀರಿಸಿಕೊಂಡ ಹಗೆ (2)

ಸಿನಿ ಪದಬಂಧ 007ರ ಸರಿ ಉತ್ತರ

ಅ	ಗ್ನಿ	ಪಂ	ಜ	ರ		ಭಾ	ಗೀ	ರ	ತಿ	
ಪೂ		ಚ		ಸಿ		ಗ್ಯ		ಣ		ಪಾ
ರ್ವ		ಮ		ಕ		ವಂ		ವಿ	ಕ್ಟ	ರಿ
						ತ		ಕ್ರ		ಜಾ
ಒ	ಡ	ಹು	ಟ್ಟಿ	ದ	ವ	ರು		ಮ		ತ
			ಕಿ				ಮೌ			
ಆ		ಅ		ಗೌ	ರ	ಮ್ಮಾ	ನಿ	ನ್ನ	ಗಂ	ಡ
ಲೆ		ಮ		ರಿ						
ಮ	ಯೂ	ರ		ಶಂ		ಆ		ಕೌ		ಹ
ನೆ		ಪ್ರೇ		ಕ		ನಂ		ರ		ಮ್ಮೀ
	ಚ	ಮ	ತ್ಕಾ	ರ		ದ	ಶಾ	ವ	ತಾ	ರ

ವಿಜೇತರು: ಚಾರ್ವಿಕ್ ಹೆಚ್.ಎ S/O ಅಶೋಕ್ ಹೆಚ್.ಎಸ್
ನಂ. 65, 9ನೇ ಕ್ರಾಸ್, ಐ ಬ್ಲಾಕ್,
ರಾಮಕೃಷ್ಣನಗರ, ಮೈಸೂರು

ಎಚ್ಚರಿಕೆಯ ಸಂದೇಶ ನೀಡುವ ಓರಿಯೋ

ಬಿಎಂಟಿಸಿ ಕಂಡಕ್ಟರ್ ಆಗಿದ್ದ ನಂದನ್ ಪ್ರಭು ಈ ಹಿಂದೆ 'ಪ್ರೀತಿಯ ಲೋಕ' ಹಾಗೂ 'ಲವ್ ಈಸ್ ಪಾಯಸನ್' ಎಂಬ ಚಿತ್ರಗಳನ್ನು ನಿರ್ದೇಶಿಸಿದ್ದರು. ಆರೇಳು ವರ್ಷಗಳ ನಂತರ ಈಗವರು ಮತ್ತೊಂದು ಚಿತ್ರವನ್ನು ನಿರ್ದೇಶಿಸಿ ತೆರೆಗೆ ತರುತ್ತಿದ್ದಾರೆ. ಆ ಚಿತ್ರದ ಹೆಸರು ಓರಿಯೋ. ಈಗಾಗಲೇ ಚಿತ್ರದ ಮಾತಿನ ಭಾಗ ಹಾಗೂ ಪಬ್ ಹಾಡೊಂದರ ಚಿತ್ರೀಕರಣವನ್ನು ಮುಗಿಸಿರುವ ನಂದನ ಪ್ರಭು ಒಂದು ಹಾಡಿನ ಚಿತ್ರೀಕರಣ ಮಾತ್ರವೇ ಬಾಕಿ ಉಳಿಸಿಕೊಂಡಿದ್ದಾರೆ.

ಚಿತ್ರದ ಕುರಿತು ಒಂದಷ್ಟು ಮಾಹಿತಿ ಹಂಚಿಕೊಳ್ಳಲು ಈಚೆಗೆ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ನಂದನ ಪ್ರಭು, ಓರಿಯೋ ಪದಕ್ಕೆ ಒಂದೊಂದು ದೇಶದಲ್ಲಿ ಒಂದೊಂದು ಅರ್ಥವಿದೆ. ನಮ್ಮ ಚಿತ್ರಕ್ಕೆ ಇದೇ ಶೀರ್ಷಿಕೆ ಇಟ್ಟಿರುವ ಕಾರಣವೇನು ಎಂದು ಚಿತ್ರ ನೋಡಿದಾಗ ಖಂಡಿತ ಗೊತ್ತಾಗುತ್ತದೆ. ಕಳೆದ ನವೆಂಬರ್‌ನಲ್ಲಿ ಶೂಟಿಂಗ್ ಆರಂಭಿಸಿ ಸಕಲೇಶಪುರ, ಮಡಿಕೇರಿ, ಬೆಂಗಳೂರು ಸುತ್ತಮುತ್ತ ಚಿತ್ರೀಕರಣ ನಡೆಸಿದ್ದೇವೆ. ಈಗಾಗಲೇ 2 ಹಾಡು ಹಾಗೂ 2 ಸಾಹಸ ದೃಶ್ಯಗಳ ಶೂಟಿಂಗ್ ಮುಗಿಸಿದ್ದು, ಒಂದು ಹಾಡಿನ ಚಿತ್ರೀಕರಣ ಮಾತ್ರವೇ ಬಾಕಿಯಿದೆ.



ತುಂಬಾ ಹಿಂದೆ ನಾನು ಎಪಿಜೆ ಅಬ್ದುಲ್ ಕಲಾಂ(ರಾಷ್ಟ್ರಪತಿ ಆಗುವುದಕ್ಕಿಂತ ಮುಂಚೆ) ಅವರ ಕಾರು ಚಾಲಕನಾಗಿದ್ದೆ. ಅವರು ನನ್ನೊಂದಿಗೆ ಮಾತಾಡುವಾಗ ಒಂದಷ್ಟು ಗಹನವಾದ ವಿಷಯಗಳನ್ನು ಹೇಳುತ್ತಿದ್ದರು, ಆ ಮಾತುಗಳೇ ನಾನೀ ಚಿತ್ರಕಥೆ ಮಾಡಲು ಸ್ಫೂರ್ತಿ. ನಾವು ಎಚ್ಚರ ತಪ್ಪಿದರೆ, ಮುಂದೊಂದು ದಿನ ಹೀಗೂ ಆಗಬಹುದು ಎಂಬ ಎಚ್ಚರಿಕೆಯ ಸಂದೇಶವನ್ನು ಇಡೀ ವಿಶ್ವಕ್ಕೆ ನೀಡುವಂಥ ವಿಭಿನ್ನ ಕಥಾಹಂದರ ಈ ಚಿತ್ರದಲ್ಲಿದೆ. ಹಾರರ್ ಜೊತೆಗೆ ಪರಿಸರ ಕಾಳಜಿಯ ಅಂಶವೂ ಇದರಲ್ಲಿದೆ. ಈಗ ಪೋಸ್ಟರಿನಲ್ಲಿ ತೋರಿಸಿರುವ 5 ಹೆಡೆಯ ಹಾವಿಗೂ ಚಿತ್ರಕಥೆಗೂ ಸಂಬಂಧವಿದೆ ಎಂದು ಹೇಳಿದರು.

ಸದ್ಯ ಚಿತ್ರದ ಎಡಿಟಿಂಗ್ ಕಾರ್ಯ ನಡೆಯುತ್ತಿದೆ. ಓರಿಯೋ ಚಿತ್ರಕ್ಕೆ ಕಥೆ, ಚಿತ್ರಕಥೆ. ಸಂಭಾಷಣೆಗಳನ್ನು ನಿರ್ದೇಶಕ ನಂದನ ಪ್ರಭು ಅವರೇ ಬರೆದಿದ್ದಾರೆ. ವಿಜಯಶ್ರೀ ಆರ್.ಎಂ. ಹಾಗೂ ವೈಶಾಲಿ ವೈ.ಜೆ. ಈ ಚಿತ್ರದ ನಿರ್ಮಾಪಕರು. ಬ್ಯಾಟಪ್ಪ ಗೌಡ, ಪ್ರಭಾಕರ್ ಅವರ ಛಾಯಾಗ್ರಹಣ ಈ ಚಿತ್ರಕ್ಕಿದೆ. ಚಿತ್ರದ ನಾಯಕ ನಿತಿನ್‌ಗೌಡ, ನಾಯಕಿ ಶುಭಿ ಇಬ್ಬರೂ ಉಪಸ್ಥಿತರಿರಲಿಲ್ಲ.

ಅರ್ಧಾಂಗಿ ರಾಯಭಾರಿಯಾದ ಪ್ರಿಯಾಂಕ



ಸೆಲಬ್ರಿಟಿಗಳನ್ನು ತಮ್ಮ ಪ್ರಾಡಕ್ಟ್‌ಗಳಿಗೆ ರಾಯಭಾರಿಯಾಗಿ ಕರೆತರುವುದು ಪ್ರಚಾರದ ಭಾಗ. ಈಗದು ಸೀರಿಯಲ್ ಲೋಕಕ್ಕೂ ಬಂದಿದೆ. ಸುವರ್ಣ ವಾಹಿನಿಯಲ್ಲಿ ಮೇ.23ರಿಂದ ಪ್ರಾರಂಭವಾಗಲಿರುವ ಅರ್ಧಾಂಗಿ ಎಂಬ ಹೊಸ ಧಾರವಾಹಿಗೆ ನಟಿ ಪ್ರಿಯಾಂಕ ಉಪೇಂದ್ರ ಅವರು ರಾಯಭಾರಿಯಾಗಿದ್ದಾರೆ.

ಈ ಕುರಿತು ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಪ್ರಿಯಾಂಕ ಉಪೇಂದ್ರ, ನನ್ನ ಸ್ನೇಹಿತೆ ಈ ಧಾರವಾಹಿಯ ಕುರಿತು ಹೇಳಿದರು. ನಂತರ ಕಥೆ ಕೇಳಿದಾಗ ಇಷ್ಟವಾಯಿತು. ಹಾಗಾಗಿ ರಾಯಭಾರಿಯಾಗಲು ಒಪ್ಪಿದೆ. ಉತ್ತಮ ಕೌಟುಂಬಿಕ ಧಾರವಾಹಿ ಇದು ಎಂದು ಹೇಳಿದರು. ಚಿಕ್ಕವಯಸ್ಸಿನಲ್ಲೇ ತಾಯಿಯನ್ನು ಕಳೆದುಕೊಂಡ ಅದಿತಿ, ಮಲತಾಯಿಯ ಆಶ್ರಯದಲ್ಲಿ ಬೆಳೆಯುತ್ತಾಳೆ. ಮಲತಾಯಿಯ ಮಕ್ಕಳನ್ನು ಸ್ವಂತ ತಂಗಿ–ತಮ್ಮರಂತೆ ನೋಡಿಕೊಳ್ಳುತ್ತಾಳೆ. ಈ ಸಂದರ್ಭದಲ್ಲಿ ಆಕೆ ಒಂದು ತ್ಯಾಗಕ್ಕೆ ಸಿದ್ಧವಾಗಬೇಕಾಗುತ್ತದೆ. ಇಪ್ಪತ್ತೆಂಟು ವರ್ಷವಾಗಿದ್ದರೂ, ಮಗುವಿನಷ್ಟೇ ಬುದ್ಧಿಯಿರುವ ದಿಗಂತ್ ಎಂಬ ಹುಡುಗನನ್ನು ಆದಿತಿ ಮದುವೆಯಾಗಬೇಕಾಗುತ್ತದೆ. ಆನಂತರ ಏನಾಗುತ್ತದೆ ಎನ್ನುವುದೇ ಈ ಧಾರವಾಹಿಯ ಕಥಾಹಂದರ ಎಂದು ನಿರ್ದೇಶಕ ಕುಮಾರ್ ತಿಳಿಸಿದರು.

ನನಗೆ ಈ ಪಾತ್ರ ಹೇಳಿದ ತಕ್ಷಣ ಸ್ವಾತಿಮುತ್ತು ಚಿತ್ರ ನೆನಪಾಯಿತು. ಇಂಥ ಪಾತ್ರ ಮಾಡುವುದು ಅಷ್ಟು ಸುಲಭವಲ್ಲ. ಹಾಗಾಗಿ ನಾನು ವಿಶೇಷ ಮಕ್ಕಳಿರುವ ಅರುಣ ಚೇತನ ಶಾಲೆಯಲ್ಲಿ ಅವರೊಂದಿಗೆ ಎರಡು ದಿನ ಕಳೆದಿದ್ದೇನೆ ಎಂದು ದಿಗಂತ್ ಪಾತ್ರಧಾರಿ ಪೃಥ್ವಿ ಶೆಟ್ಟಿ ತಿಳಿಸಿದರು.

ನಾಯಕಿ ಅದಿತಿ ಪಾತ್ರಧಾರಿ ಅಂಜನ ದೇಶಪಾಂಡೆ ಮಾತನಾಡುತ್ತ, ಮಧ್ಯಮ ವರ್ಗದ ಹುಡುಗಿಯ ಪಾತ್ರ ನನ್ನದು. ಜೀವನದಲ್ಲಿ ಎಷ್ಟೇ ಕಷ್ಟ ಬಂದರೂ ಅಂಜದೇ ನಡೆಯುವವಳು. ತುಂಬಾ ಪ್ರಬುದ್ಧ ಯುವತಿ ಎಂದು ತನ್ನ ಪಾತ್ರ ಪರಿಚಯ ಮಾಡಿಕೊಂಡರು. ಸ್ನೇಹಿತರೊಬ್ಬರು ಈ ಕಥೆಯನ್ನು ಕಳುಹಿಸಿದ್ದರು. ರಾತ್ರಿ ಹನ್ನೊಂದರಿಂದ ಬೆಳಗಿನ ಜಾವ ನಾಲ್ಕು ಗಂಟೆಯವರೆಗೂ ಕಥೆಯನ್ನು ಓದಿದೆ. ಇಷ್ಟವಾಗಿ ನಿರ್ಮಾಣಕ್ಕೆ ಮುಂದಾದೆ ಎಂದು ನಿರ್ಮಾಪಕ ಶ್ರೀನಾಥ್ ರಘುರಾಮ್ ತಿಳಿಸಿದರು. ಅರುಣ ಚೇತನ ಶಾಲೆಯ ಮುಖ್ಯಸ್ಥೆ ಗಾಯಿತ್ರಿ ಪಂಜು ಅವರು ವಿಶೇಷ ಮಕ್ಕಳ ದಿನಚರಿ ಬಗ್ಗೆ ಮಾಹಿತಿ ನೀಡಿದರು.

ಒಂದನೇ ಪುಟದಿಂದ

ಶೇ.85.63ರಷ್ಟು ತೇರ್ಗಡೆ

ಗ್ರೇಸ್ ಮಾರ್ಕ್ಸ್ ನೀಡಿದ್ದೇವೆ ಎಂದರು. ಈ ಸಲ 145 ಮಕ್ಕಳು 625 ಅಂಕಕ್ಕೆ 625 ಅಂಕ ಪಡೆದುಕೊಂಡಿದ್ದಾರೆ. ಹಾಗೆಯೇ 309 ಮಂದಿ 625ಕ್ಕೆ 624 ಅಂಕ ಗಳಿಸಿದ್ದಾರೆ. 472 ಮಕ್ಕಳು 623 ಅಂಕ ಹಾಗೂ 615 ಮಕ್ಕಳು 622 ಅಂಕ ಪಡೆದು ತೇರ್ಗಡೆಯಾಗಿದ್ದಾರೆ. ಪ್ರಥಮ ಭಾಷೆ–19,125 ವಿದ್ಯಾರ್ಥಿಗಳು, ದ್ವಿತೀಯ ಭಾಷೆ–13,458 ವಿದ್ಯಾರ್ಥಿಗಳು, ತೃತೀಯ ಭಾಷೆ–43,126 ವಿದ್ಯಾರ್ಥಿಗಳು, ಗಣಿತ–13,683 ವಿದ್ಯಾರ್ಥಿಗಳು, ವಿಜ್ಞಾನ–6592 ವಿದ್ಯಾರ್ಥಿಗಳು, ಸಮಾಜ ವಿಜ್ಞಾನ–50,782 ವಿದ್ಯಾರ್ಥಿಗಳು.

ಪೂರಕ ಪರೀಕ್ಷೆ ದಿನಾಂಕ ಘೋಷಣೆ

ಪ್ರತಿ ವಿಷಯಕ್ಕೂ ಪ್ರಶ್ನೆ ಪತ್ರಿಕೆ ಓದಲು 15 ನಿಮಿಷಗಳನ್ನು ನೀಡಲಾಗುತ್ತದೆ.

ಪೂರಕ ಪರೀಕ್ಷೆ ವೇಳಾಪಟ್ಟಿ ಹೀಗಿದೆ: ಜೂನ್ 27: ವಿಜ್ಞಾನ, ರಾಜ್ಯಶಾಸ್ತ್ರ, ಕರ್ನಾಟಕ/ಹಿಂದೂಸ್ತಾನಿ ಸಂಗೀತ, ಜೂನ್ 28: ಪ್ರಥಮ ಭಾಷೆ (ಕನ್ನಡ, ತೆಲುಗು, ಹಿಂದಿ, ಮರಾಠಿ, ತಮಿಳು, ಉರ್ದು, ಇಂಗ್ಲಿಷ್, ಸಂಸ್ಕೃತ), ಜೂನ್ 29 ದ್ವಿತೀಯ ಭಾಷೆ (ಇಂಗ್ಲಿಷ್, ಕನ್ನಡ), ಜೂನ್ 30: ಸಮಾಜ ವಿಜ್ಞಾನ, ಜುಲೈ 01: ತೃತೀಯ ಭಾಷೆ (ಹಿಂದಿ, ಕನ್ನಡ, ಇಂಗ್ಲಿಷ್, ಅರೇಬಿಕ್, ಪರ್ಷಿಯನ್, ಉರ್ದು, ಸಂಸ್ಕೃತ, ಕೊಂಕಣಿ, ತುಳು) ಹಾಗೂ ಎನ್‌ಎಸ್‌ಕ್ಯೂಎಫ್ ವಿಷಯಗಳು (ಮಾಹಿತಿ ತಂತ್ರಜ್ಞಾನ, ರಿಟೇಲ್, ಆಟೋಮೊಬೈಲ್, ಹೆಲ್ತ್ ಕೇರ್, ಬ್ಯೂಟಿ ಆ್ಯಂಡ್ ವೆಲ್‌ನೆಸ್, ಜುಲೈ 02: ಅರ್ಥಶಾಸ್ತ್ರ, ಕೋರ್ ಸಬ್ಜೆಕ್ಟ್, ಜುಲೈ 04: ಗಣಿತ, ಸಮಾಜಶಾಸ್ತ್ರ.

ಪರೀಕ್ಷಾ ಶುಲ್ಕದ ಮಾಹಿತಿ: ಒಂದು ವಿಷಯಕ್ಕೆ 370 ರೂ. ಎರಡು ವಿಷಯಕ್ಕೆ 461 ರೂ. ಮೂರು ಅಥವಾ ಮೂರಕ್ಕಿಂತ ಮೇಲ್ಪಟ್ಟು – 620 ರೂ. ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದ ಹಾಗೂ ವಿಭಿನ್ನ ಸಾಮರ್ಥ್ಯವುಳ್ಳ ವಿದ್ಯಾರ್ಥಿಗಳಿಗೆ ಮಾತ್ರ ಪೂರಕ ಪರೀಕ್ಷೆಯ ಪರೀಕ್ಷಾ ಶುಲ್ಕದಿಂದ ವಿನಾಯಿತಿ ಇದೆ.

625 ಅಂಕ ಸಾಧನೆ

ಸಿದ್ಧನಾಗುತ್ತೇನೆ. ಮುಂದೆ ಡಾಕ್ಟರ್ ಆಗಬೇಕು ಎಂಬುದು ನನ್ನಾಸೆ ಎಂದರು.

ನಂಜನಗೂಡಿನ ವಿದ್ಯಾರ್ಥಿನಿ: ನಂಜನಗೂಡು ಕಾರ್ಮೆಲ್ ಆಂಗ್ಲ ಮಾಧ್ಯಮದ ಶಾಲೆಯ ವಿದ್ಯಾರ್ಥಿನಿ ಜಿ.ದೇವಿಕಾ ಸಹ 625 ಅಂಕ ಪಡೆದಿದ್ದಾರೆ. ಕಡಕೊಳದ ಸರ್ಕಾರಿ ಪ್ರಾಥಮಿಕ ಶಾಲೆಯ ಶಿಕ್ಷಕ ಗಣೇಶ್ ಹಾಗೂ ಎಸ್.ರೂಪ ದಂಪತಿ ಪುತ್ರಿ ದೇವಿಕಾ ಹೆಚ್ಚು ಅಂಕ ಗಳಿಸುವ ಮೂಲಕ ನಂಜನಗೂಡು ತಾಲೂಕಿಗೆ ಪ್ರಪ್ರಥಮ ಸಾಧನೆ ಮಾಡಿದ ವಿದ್ಯಾರ್ಥಿನಿ ಎನಿಸಿದ್ದಾರೆ. ಹೆಚ್ಚು ಅಂಕ ಗಳಿಸಿದ ಹಿನ್ನೆಲೆಯಲ್ಲಿ ನಂಜನಗೂಡಿನ ಬಿಇಓ ಸಿ.ಎನ್.ರಾಜು ಅವರು ದೇವಿಕಾ ನಿವಾಸಕ್ಕೆ ತೆರಳಿ ಸನ್ಮಾನಿಸುವ ಮೂಲಕ ಪ್ರೋತ್ಸಾಹ ನೀಡಿ, ಸಾಧನೆಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಸದ್ವಿದ್ಯಾ ಶಾಲೆ: ಮೈಸೂರಿನ ಸದ್ವಿದ್ಯಾ ಶಾಲೆಯ ಇಬ್ಬರು ವಿದ್ಯಾರ್ಥಿನಿಯರು 625ಕ್ಕೆ 625 ಅಂಕ ಪಡೆದಿದ್ದಾರೆ. ಶಾಲೆಯ ಅಧಿತಿ ಹಾಗೂ ಯಶಸ್ವಿ ಅರಸ್ ಈ ಸಾಧನೆ ಮಾಡಿದ ವಿದ್ಯಾರ್ಥಿನಿಯರು. ಮೈಸೂರಿನ ವಿಶ್ವೇಶ್ವರನಗರದ ನಿವಾಸಿ, ಎಲ್‌ಐಸಿ ವಿಭಾಗೀಯ ವ್ಯವಸ್ಥಾಪಕರಾದ ಬಿ.ಎನ್.ಸಂಜೀವ್ ಹಾಗೂ ಕೆ.ಎಂ.ಕಲಾ ದಂಪತಿ ಪುತ್ರಿ ಅಧಿತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿನಿಯಾಗಿದ್ದಾರೆ.

ಡಾಕ್ಟರ್ ಆಗಬೇಕು: ಅಧಿತಿ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, 625 ಅಂಕ ಗಳಿಸಿದ್ದಕ್ಕೆ ತುಂಬಾ ಸಂತೋಷವಾಗಿದೆ. ಈ ನನ್ನ ಸಾಧನೆಗೆ ಪ್ರೇರಣೆ ನೀಡಿದವರಿಗೆ ಎಷ್ಟು ಥ್ಯಾಂಕ್ಸ್ ಹೇಳಬೇಕೆಂದು ಗೊತ್ತಾಗುತ್ತಿಲ್ಲ. ಪ್ರತಿದಿನ ಕನಿಷ್ಟ 4 ಗಂಟೆಯಾದರೂ ಓದುತ್ತಿದ್ದೆ. ಶಾಲೆಯಲ್ಲಿ ಕಲಿತ್ತಿದ್ದರೊಂದಿಗೆ ಟ್ಯೂಷನ್‌ನಲ್ಲಿ ಹೇಳಿಕೊಟ್ಟಿದ್ದನ್ನು ಮನನ ಮಾಡಿಕೊಳ್ಳುತ್ತಿದ್ದೆ. ಇದರಿಂದ ಹೆಚ್ಚು ಅಂಕ ಗಳಿಸಲು ಸಾಧ್ಯವಾಯಿತು. ಪರೀಕ್ಷೆ ಸಮೀಪಿಸುತ್ತಿದ್ದಂತೆ ನಿದ್ದೆಗೆಟ್ಟು ಓದಿದ ನಿದರ್ಶನವೂ ಇದೆ. ಆಗ ತಂದೆ, ತಾಯಿ, ಅಣ್ಣ ನನಗೆ ಆತ್ಮವಿಶ್ವಾಸ ತುಂಬಿದರು. ಮುಂದೆ ವೈದ್ಯೆಯಾಗಬೇಕೆಂಬ ಹಂಬಲವಿದೆ ಎಂದರು.

ಮುಂದೆ ಇನ್ನಷ್ಟು ಸಾಧನೆ ಮಾಡಬೇಕು: ಸದ್ವಿದ್ಯಾ ಶಾಲೆಯ ಮತ್ತೊಬ್ಬ ವಿದ್ಯಾರ್ಥಿ ಯಶಸ್ವಿ ಅರಸ್ ಅವರಿಗೂ 625 ಅಂಕ ಲಭಿಸಿದೆ. ಮೈಸೂರಿನ ರಾಜಾರಾಮ್ ಅಗ್ರಹಾರದ ರಾಮಾನುಜಾ ರಸ್ತೆ ನಿವಾಸಿ, ಆಟೋಮೋಟಿವ್ ಆಕ್ಸಲ್ ಉದ್ಯೋಗಿ ಎಂ.ಆರ್.ಮಂಜುನಾಥ್ ಹಾಗೂ ಬಿಬಿ ಗಾರ್ಡನ್ ರಸ್ತೆ ಸರ್ಕಾರಿ ಪ್ರಾಥಮಿಕ ಶಾಲೆಯ ಶಿಕ್ಷಕಿ ಲಕ್ಷ್ಮೀ ದಂಪತಿ ಪುತ್ರಿ ಯಶಸ್ವಿ ಅರಸ್ ಪಿಯುಸಿಯಲ್ಲೂ ಸಾಧನೆ ಮಾಡಬೇಕೆಂಬ ಹಂಬಲ ಹೊಂದಿದ್ದಾರೆ.

ಈ ಕುರಿತು ಮಾತನಾಡಿದ ಯಶಸ್ವಿ ಅರಸ್, ಪರೀಕ್ಷೆಯನ್ನು ಉತ್ತಮವಾಗಿ ಬರೆದಿದ್ದೆ. 625 ಅಂಕಕ್ಕೂ ಸರಿಯಾದ ಉತ್ತರವನ್ನೇ ಬರೆದಿದ್ದೆ. ಆದರೆ ಯಾವುದಾದರೂ ಕಾರಣದಿಂದ ಒಂದೆರಡು ಅಂಕ ಕಡಿಮೆಯಾಗಬಹುದು ಎನಿಸಿತ್ತು. ಹೆಚ್ಚು ಅಂಕ ಗಳಿಸುವ ದೃಢ ವಿಶ್ವಾಸವಿತ್ತು. ಶಾಲೆಯಲ್ಲಿ ಓದು, ಕಲಿಕೆಯೊಂದಿಗೆ ಕೋಚಿಂಗ್ ಸೆಂಟರ್‌ನಲ್ಲೂ ಕಲಿತಿದ್ದೆ. ಇದರ ಜೊತೆಗೆ ಶಾಲೆಯಲ್ಲಿ ನಾಲ್ಕೈದು ಪೂರ್ವಭಾವಿ ಪರೀಕ್ಷೆ ನಡೆಸಿದ್ದರು. ಅದು ನನಗೆ ವರದಾನವಾಗಿತ್ತು ಎಂದು ತಮ್ಮ ಸಾಧನೆಗೆ ಕಾರಣವನ್ನು ವಿವರಿಸಿದರು.

ಮರಿಮಲ್ಲಪ್ಪ ಶಾಲೆ: ಮೈಸೂರಿನ ಮರಿ ಮಲ್ಲಪ್ಪ ಶಾಲೆಯ ವಿದ್ಯಾರ್ಥಿನಿ ಚಾರುಕೀರ್ತಿ ಅವರೂ 625 ಅಂಕ ಪಡೆದು ಸಾಧನೆ ಮಾಡಿದ್ದಾರೆ. ಶಾಲೆಗೇ ಮಾತ್ರವಲ್ಲದೆ ರಾಜ್ಯದಲ್ಲಿ ಅತಿ ಹೆಚ್ಚು ಅಂಕ ಪಡೆದವರ ಸಾಲಿಗೆ ಸೇರಿದ್ದಾರೆ. ಮೈಸೂರಿನ ಕನಕದಾಸ ನಗರದ ನಿವಾಸಿ ಎಲ್.ಕುಮಾರ್ ಹಾಗೂ ವಿಜಯಲಕ್ಷ್ಮಿ ದಂಪತಿ ಪುತ್ರಿಯಾಗಿರುವ ಚಾರುಕೀರ್ತಿ ಎಲ್ಲರ ಗಮನ ಸೆಳೆದಿದ್ದಾರೆ. ತಂದೆ ಎಲ್.ಕುಮಾರ್ ಕೃಷಿಕರಾಗಿದ್ದು, ಮಹದೇವಪುರದ ಬಳಿ ತಮ್ಮ ಜಮೀನಿನಲ್ಲಿ ಕೃಷಿ ಚಟುವಟಿಕೆ ನಡೆಸುತ್ತಿದ್ದಾರೆ.

ಐಎಎಸ್ ಅಧಿಕಾರಿ ಆಗುವ ಬಯಕೆ: 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಚಾರುಲತಾ ನಾನು ಐಎಎಸ್ ಅಧಿಕಾರಿಯಾಗಬೇಕೆಂದು ಬಯಸಿದ್ದೇನೆ. ಮೈಸೂರಲ್ಲಿ ಶಿಖಾ ಹಾಗೂ ರೋಹಿಣಿ ಸಿಂಧೂರಿ ಅವರು ಜಿಲ್ಲಾಧಿಕಾರಿಯಾಗಿ ಕೆಲಸ ಮಾಡಿದ್ದನ್ನು ನೋಡಿ, ಕೇಳಿದ್ದೇನೆ. ಇದರಿಂದ ಆ ಇಬ್ಬರು ನನಗೆ ರೋಲ್ ಮಾಡೆಲ್ ಎಂದಿದ್ದಾರೆ.

ಶೇ.91.38ರಷ್ಟು ತೇರ್ಗಡೆ

ಫಲಿತಾಂಶದಲ್ಲಿ ಶೇ.91.38ರಷ್ಟು ಸಾಧನೆಯಾಗಿರುವುದು ಗಮನಾರ್ಹ. ಪರೀಕ್ಷೆಗೆ ಹಾಜರಾಗಿದ್ದ 16,178 ನಗರ ಪ್ರದೇಶದ ವಿದ್ಯಾರ್ಥಿಗಳಲ್ಲಿ 14,485(ಶೇ.89.54) ಹಾಗೂ ಗ್ರಾಮೀಣ ಪ್ರದೇಶದ 19,950ರಲ್ಲಿ 18,527(ಶೇ.92.87) ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ.

ಈ ಬಾರಿಯೂ ಬಾಲಕಿಯರೇ ಮೇಲುಗೈ ಸಾಧಿಸಿದ್ದಾರೆ. ಪರೀಕ್ಷೆಗೆ ಹಾಜರಾಗಿದ್ದ 18,028ರಲ್ಲಿ 16,898(ಶೇ.93.73) ಬಾಲಕಿಯರು ಉತ್ತೀರ್ಣರಾಗಿದ್ದಾರೆ. ಪರೀಕ್ಷೆ ಬರೆದಿದ್ದ 18,100 ಬಾಲಕರಲ್ಲಿ 16,114(ಶೇ.89.02) ಮಂದಿ ಉತ್ತೀರ್ಣರಾಗಿದ್ದಾರೆ.

ಜಿಲ್ಲೆಯ 276 ಸರ್ಕಾರಿ ಶಾಲೆಗಳ 16,125 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರು. ಇವರಲ್ಲಿ 14,493 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, ಶೇ.89.88 ಫಲಿತಾಂಶ ಬಂದಿದೆ. 134 ಅನುದಾನಿತ ಶಾಲೆಗಳ 7,747 ವಿದ್ಯಾರ್ಥಿಗಳಲ್ಲಿ 6,997(ಶೇ.90.32) ಹಾಗೂ ಅನುದಾನ ರಹಿತ ಖಾಸಗಿ ಶಾಲೆಗಳ 12,256ರಲ್ಲಿ 11,522(ಶೇ.94.01) ವಿದ್ಯಾರ್ಥಿಗಳು ಪಾಸ್ ಆಗಿದ್ದಾರೆ.

620ಕ್ಕಿಂತ ಹೆಚ್ಚು ಅಂಕ: 625ಕ್ಕೆ 625 ಅಂಕ ಗಳಿಸಿರುವ ಆರು ವಿದ್ಯಾರ್ಥಿನಿಯರಲ್ಲಿ ಖಾಸಗಿ ಶಾಲೆಗಳ ನಾಲ್ವರು, ಸರ್ಕಾರಿ ಹಾಗೂ ಅನುದಾನಿತ ಶಾಲೆಯ ತಲಾ ಓರ್ವ ವಿದ್ಯಾರ್ಥಿನಿ ಇದ್ದಾರೆ. ಅನುದಾನಿತ ಶಾಲೆಗಳ ನಾಲ್ವರು ಹಾಗೂ ಖಾಸಗಿ ಶಾಲೆಗಳ 9 ಸೇರಿ 13 ವಿದ್ಯಾರ್ಥಿಗಳು 624, ಸರ್ಕಾರಿ 3, ಅನುದಾನಿತ 8 ಹಾಗೂ ಖಾಸಗಿ ಶಾಲೆಯ 12 ಸೇರಿ 23 ವಿದ್ಯಾರ್ಥಿಗಳು 623, ಸರ್ಕಾರಿ 1, ಅನುದಾನಿತ 9 ಹಾಗೂ ಖಾಸಗಿ ಶಾಲೆಯ 13 ಸೇರಿ 23 ವಿದ್ಯಾರ್ಥಿಗಳು 622, ಅನುದಾನಿತ ಶಾಲೆಯ 6 ಹಾಗೂ ಖಾಸಗಿ ಶಾಲೆಯ 16 ಸೇರಿ 22 ವಿದ್ಯಾರ್ಥಿಗಳು 621, ಸರ್ಕಾರಿ 1, ಅನುದಾನಿತ ಶಾಲೆಯ 15 ಹಾಗೂ ಖಾಸಗಿ ಶಾಲೆಗಳ 17 ಸೇರಿ ಒಟ್ಟು 33 ವಿದ್ಯಾರ್ಥಿಗಳು 620 ಅಂಕಗಳೊಂದಿಗೆ ಉತ್ತೀರ್ಣರಾಗಿದ್ದಾರೆ.

ವಿದ್ಯಾರ್ಥಿಗಳ ಗ್ರೇಡ್: ಒಟ್ಟು ವಿದ್ಯಾರ್ಥಿಗಳಲ್ಲಿ 4,474 'ಎ+', 8,113 'ಎ', 8,415 'ಬಿ+', 7,141 'ಬಿ', 4,194 'ಸಿ+' ಹಾಗೂ 675 'ಸಿ' ಗ್ರೇಡ್‌ನಲ್ಲಿ ಉತ್ತೀರ್ಣರಾಗಿದ್ದಾರೆ.

ಈ ಬಾರಿ ಜಿಲ್ಲೆಯಲ್ಲಿ ಯಾವುದೇ ಶಾಲೆ ಶೂನ್ಯ ಫಲಿತಾಂಶಕ್ಕೆ ಗುರಿಯಾಗಿಲ್ಲ. ಬದಲಾಗಿ 34 ಸರ್ಕಾರಿ, 9 ಅನುದಾನಿತ ಹಾಗೂ 74 ಖಾಸಗಿ ಶಾಲೆಗಳು ಶೇ.100ರಷ್ಟು ಫಲಿತಾಂಶ ದಾಖಲಿಸಿರುವುದು ಗಮನಾರ್ಹ. ಇನ್ನು ಪರೀಕ್ಷೆಗೆ ಹಾಜರಾಗಿದ್ದ 316 ವಿಶೇಷ ಅಗತ್ಯತೆವುಳ್ಳ ಮಕ್ಕಳಲ್ಲಿ 255 ಮಕ್ಕಳು(ಶೇ.80.69) ಉತ್ತೀರ್ಣವಾಗಿ, ತಮ್ಮ ಕಲಿಕಾ ಸಾಮರ್ಥ್ಯವನ್ನು ಸಾಬೀತುಪಡಿಸಿದ್ದಾರೆ ಎಂದು ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕ ರಾಮಚಂದ್ರರಾಜೇ ಅರಸ್ ಸುದ್ದಿಗೋಷ್ಠಿಯಲ್ಲಿ ವಿವರಣೆ ನೀಡಿದರು.

ಫಲಿತಾಂಶ ಸಾಧನೆಗೆ ಶಿಕ್ಷಕರು, ಪೋಷಕರ ಸಹಕಾರ ಕಾರಣ: ಡಿಡಿಪಿಐ ಅರಸ್



ಮೈಸೂರು, ಮೇ 19(ಎಸ್‌ಬಿಡಿ)– ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಜಿಲ್ಲೆಯ ಉತ್ತಮ ಸಾಧನೆಗೆ ಶಿಕ್ಷಕರು ಹಾಗೂ ಪೋಷಕರ ಸಹಕಾರ ಮುಖ್ಯವಾಗಿದೆ ಎಂದು ಡಿಡಿಪಿಐ ರಾಮಚಂದ್ರರಾಜೇ ಅರಸ್ ಹೇಳಿದರು.

ಮೈಸೂರಿನ ಅವರ ಕಚೇರಿಯಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಎಸ್‌ಎಸ್‌ಎಲ್‌ಸಿ ಫಲಿತಾಂಶದ ವಿವರ ನೀಡಿದ ಅವರು, ಎಲ್ಲರ ಪರಿಶ್ರಮದಿಂದ ನಿರೀಕ್ಷಿತ ಫಲಿತಾಂಶ ಬಂದಿರುವುದರಿಂದ ಸಂತಸವಾಗಿದೆ. ಶಿಕ್ಷಕರು, ಮುಖ್ಯಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಪೋಷಕರಿಗೆ ಈ ಸಾಧನೆಯ ಕೀರ್ತಿ ಸಲ್ಲುತ್ತದೆ. ನಂತರದಲ್ಲಿ ಇಲಾಖೆ ಅಧಿಕಾರಿಗಳ ಪರಿಶ್ರಮಕ್ಕೆ ಧನ್ಯವಾದ ತಿಳಿಸುತ್ತೇನೆ ಎಂದರು. ಈ ಬಾರಿ ಉತ್ತಮ ಸಾಧನೆ ಗುರಿಯೊಂದಿಗೆ 53ಕ್ಕಿಂತ ಹೆಚ್ಚು ಶೈಕ್ಷಣಿಕ ಕಾರ್ಯಕ್ರಮ ಗಳನ್ನು ಅನುಷ್ಠಾನಕ್ಕೆ ತಂದು ಸರಣಿ ಸಭೆ ನಡೆಸಲಾಗಿತ್ತು. ಮುಖ್ಯ ಪರೀಕ್ಷೆ ಪೂರ್ವ ಸಿದ್ಧತೆಗಾಗಿ ಎಸ್‌ಎಸ್‌ಎಲ್‌ಸಿ ಮಂಡಳಿ ವತಿಯಿಂದ 2 ಪತ್ರಿಕೆಗಳ ಜೊತೆಗೆ ಜಿಲ್ಲಾ ಮಟ್ಟದಲ್ಲಿ 4 ಹಾಗೂ ತಾಲೂಕು ಮಟ್ಟದ 2 ಸೇರಿದಂತೆ ಒಟ್ಟು 8 ಪತ್ರಿಕೆಗಳಿಗೆ ಈ ಬಾರಿ ಮಕ್ಕಳು ಉತ್ತರಿಸುವ ಮೂಲಕ ಪರೀಕ್ಷೆಗೆ ಸಿದ್ಧರಾಗಿದ್ದರು. ರಾತ್ರಿ ಶಾಲೆಯನ್ನೂ ನಡೆಸಲಾಗಿತ್ತು. ಶಿಕ್ಷಕರು ಇಲಾಖೆ ನೀಡಿದ ಗುರಿ ಮೀರಿ ಶ್ರಮಿಸಿದ್ದಾರೆ ಎಂದು ಶ್ಲಾಘಿಸಿದರು. ಮೂರ್‍ನಾಲ್ಕು ವರ್ಷಗಳ ಹಿಂದೆ ದಾಖಲಾತಿಯಿಲ್ಲದೆ ಮುಚ್ಚಿದ್ದ 2 ಶಾಲೆಗಳ ಪುನಾರಂಭಕ್ಕೆ ಮನವಿ ಸಲ್ಲಿಸಿದ್ದಾರೆ. ಸಿದ್ದರಾಮನಹುಂಡಿ ಶಾಲೆಯಲ್ಲಿ ದಾಖಲಾತಿ ಸಿಗದೆ ತರಗತಿ ಹೆಚ್ಚಿಸಲು ಕರೆ ಮಾಡಿ ಆಗ್ರಹಿಸುತ್ತಿದ್ದಾರೆ. ಒಟ್ಟಾರೆ ಸರ್ಕಾರಿ ಶಾಲೆಗಳಿಗೆ ದಾಖಲಿಸಲು ಮುಂದಾಗುತ್ತಿದ್ದಾರೆ. ಈ ಬಾರಿಯ ಎಸ್‌ಎಸ್‌ಎಲ್‌ಸಿ ಫಲಿತಾಂಶ ಮತ್ತಷ್ಟು ಪ್ರೇರಣೆಯಾಗಲಿದೆ ಎಂದು ಅಭಿಪ್ರಾಯಿಸಿದರು.

ವಿಧಾನಪರಿಷತ್‌ನ ನಾಲ್ಕು ಸ್ಥಾನಗಳಲ್ಲಿ ಅಭೂತಪೂರ್ವ ಗೆಲುವು

ಬಿಜೆಪಿ ಅಭ್ಯರ್ಥಿ ಪರ ಚುನಾವಣಾ ಪ್ರಚಾರ ಸಭೆಯಲ್ಲಿ ರಾಜ್ಯಾಧ್ಯಕ್ಷ ನಳಿನ್‌ಕುಮಾರ್ ಕಟೀಲ್ ವಿಶ್ವಾಸ



ಮೈಸೂರು, ಮೇ 19(ಆರ್‌ಕೆಬಿ)– ವಿಧಾನಪರಿಷತ್ ಚುನಾವಣೆಯಲ್ಲಿ ಈ ಬಾರಿ ಬಿಜೆಪಿ ಪರ ಅಲೆ ವ್ಯಕ್ತವಾಗಿದ್ದು, ನಾಲ್ಕು ಸ್ಥಾನಗಳಲ್ಲೂ ಬಿಜೆಪಿ ಅಭ್ಯರ್ಥಿಗಳು ಅಭೂತಪೂರ್ವ ಗೆಲುವು ದಾಖಲಿಸಲಿದ್ದಾರೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ವಿಶ್ವಾಸ ವ್ಯಕ್ತಪಡಿಸಿದರು.

ಮೈಸೂರಿನ ವಿಜಯನಗರ ಬಂಟರ ಸಮುದಾಯ ಭವನದಲ್ಲಿ ಗುರುವಾರ ಬಿಜೆಪಿ ಆಯೋಜಿಸಿದ್ದ ದಕ್ಷಿಣ ಪದವೀಧರರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಅವರ ಚುನಾವಣಾ ಪ್ರಚಾರದ ಸಭೆಯಲ್ಲಿ ಅವರು ಮಾತನಾಡಿದರು.

ಮೋದಿಗೆ ಕೊಡುಗೆ ನೀಡಿ: ಯೋಗ ದಿನದ ಅಂಗವಾಗಿ ಮೈಸೂರಿಗೆ ಪ್ರಧಾನಿ ನರೇಂದ್ರ ಮೋದಿ ಆಗಮಿಸಲಿದ್ದು, ಪಕ್ಷದ ಕಾರ್ಯಕರ್ತರು ಮತ್ತು ಮುಖಂಡರು, ಅಭ್ಯರ್ಥಿ ಮೈ.ವಿ.ರವಿಶಂಕರ್ ಅವರನ್ನು ಗೆಲ್ಲಿಸುವ ಮೂಲಕ ಮೋದಿ ಅವರಿಗೆ ಕೊಡುಗೆ ನೀಡುವಂತೆ ಮನವಿ ಮಾಡಿದರು.

ಸಿದ್ದರಾಮಯ್ಯ ಕೊಡುಗೆ ಏನು?: ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಕಾಂಗ್ರೆಸ್ ವಿರುದ್ಧ ಟೀಕಾ ಪ್ರಹಾರ ನಡೆಸಿದ ಅವರು, ಕೇವಲ 8 ವರ್ಷಗಳಲ್ಲಿ ರಸ್ತೆ ಮೂಲ ಸೌಲಭ್ಯ ಸೇರಿದಂತೆ ನಾನಾ ಸೌಲಭ್ಯಗಳನ್ನು ನೀಡುವ ಮೂಲಕ ಬಿಜೆಪಿ ಸರ್ಕಾರ ಮೈಸೂರು ಭಾಗವನ್ನು ಅಭಿವೃದ್ಧಿಯತ್ತ ಕೊಂಡೊಯ್ಯುತ್ತಿದೆ ಆದರೆ ಸಿದ್ದರಾಮಯ್ಯ ಮೈಸೂರು ಭಾಗಕ್ಕೆ ನೀಡಿರುವ ಕೊಡುಗೆಯಾದರೂ ಏನು ಎಂಬ ಬಗ್ಗೆ ಶ್ವೇತ ಪತ್ರ ಹೊರಡಿಸಲಿ ಎಂದು ಒತ್ತಾಯಿಸಿದರು.

ಮೈಸೂರಿನ ಒಡೆಯರ್ ಕುಟುಂಬಕ್ಕೆ ಅವಮಾನ ಮಾಡಿದವರನ್ನು ಮೈಸೂರಿನ ಜನತೆ ಇನ್ನೂ ಇಟ್ಟುಕೊಂಡಿದ್ದಾರೆ ರಾಜಕಾರಣ ಮಾಡಲು ಅವಕಾಶ ಮಾಡಿಕೊಟ್ಟಿದ್ದಾರೆ. ನಮ್ಮ ಕಡೆಯಾಗಿದ್ದಾರೆ ಇಷ್ಟೊತ್ತಿಗೆ ಊರಿನಿಂದಲೇ ಓಡಿಸಿ ಬಿಡುತ್ತಿದ್ದೆವು ಎಂದು ಪರೋಕ್ಷವಾಗಿ ಸಿದ್ದರಾಮಯ್ಯ ವಿರುದ್ಧ ವಾಗ್ದಾಳಿ ನಡೆಸಿದರು. ನಂತರ ಮಾತನಾಡಿದ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಸತತ ಐದು ವರ್ಷ ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯ, ಬೇರೆ ವರ್ಗದ ಜನರಿಗಿರಲಿ, ಕುರುಬ ಸಮುದಾಯಕ್ಕೆ ಯಾವ ಕೊಡುಗೆಯನ್ನೂ ನೀಡಿಲ್ಲ ಎಂದು ಆರೋಪಿಸಿದರಲ್ಲದೆ, ವಿಧಾನ ಪರಿಷತ್ ಚುನಾವಣೆಯಲ್ಲಿ ಎಲ್ಲಾ ನಾಲ್ಕು ಸ್ಥಾನಗಳಲ್ಲೂ ಬಿಜೆಪಿ ಅಭ್ಯರ್ಥಿಗಳು ಗೆಲ್ಲುವ ವಾತಾವರಣವಿದೆ. ಈ ಫಲಿತಾಂಶ ಮುಂಬರುವ ವಿಧಾನಸಭಾ ಚುನಾವಣೆಗೆ ನಾಂದಿ ಹಾಡಲಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಸಚಿವರಾದ ಕೆ.ಸಿ.ನಾರಾಯಣಗೌಡ, ಎಸ್.ಟಿ. ಸೋಮಶೇಖರ್, ಸಂಸದ ಪ್ರತಾಪ್ ಸಿಂಹ, ಶಾಸಕರಾದ ಎಸ್.ಎ.ರಾಮದಾಸ್, ಎಲ್.ನಾಗೇಂದ್ರ, ಹರ್ಷವರ್ಧನ್, ಎನ್.ಮಹೇಶ್, ನಿರಂಜನ್‌ಕುಮಾರ್, ರವಿಕುಮಾರ್, ಮಾಜಿ ಎಂಎಲ್‌ಸಿ ಸಿದ್ದರಾಜು, ಜಿಲ್ಲಾಧ್ಯಕ್ಷೆ ಮಂಗಳಾ ಸೋಮಶೇಖರ್, ನಗರಾಧ್ಯಕ್ಷ ಟಿ.ಎಸ್.ಶ್ರೀವತ್ಸ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್, ಎಂ.ರಾಜೇಂದ್ರ ಇನ್ನಿತರರು ಉಪಸ್ಥಿತರಿದ್ದರು.

> ಸತತ ಐದು ವರ್ಷ ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯ ಅವರಿಂದ ಬೇರೆ ವರ್ಗದವರಿಗಿರಲಿ, ಕುರುಬ ಸಮುದಾಯಕ್ಕೆ ಏನೂ ಕೊಡುಗೆ ನೀಡಿಲ್ಲ. ಕಾಂಗ್ರೆಸ್, ಜೆಡಿಎಸ್ ಪಕ್ಷದ ಕೆಲ ನಾಯಕರು ಪಕ್ಷದಲ್ಲಿನ ರಾಜಕಾರಣದಿಂದ ಬೇಸತ್ತಿದ್ದಾರೆ. ಭ್ರಷ್ಟಾಚಾರ ಮುಕ್ತ ಬಿಜೆಪಿಗೆ ಯಾರು ಬೇಕಾದರೂ ಬರಬಹುದಾಗಿದೆ ಈ ಮೂಲಕ ಭದ್ರಬುನಾದಿಯಡಿ ದೇಶ ನಿರ್ಮಾಣ ಮಾಡೋಣ.
> – **ಶೋಭಾ ಕರಂದ್ಲಾಜೆ**, ಕೇಂದ್ರ ಸಚಿವೆ


ಸಭೆಯಿಂದ ದಿಢೀರ್ ಹೊರನಡೆದ ರಘು ಕೌಟಿಲ್ಯ

ಮೈಸೂರು: ಹಿಂದುಳಿದ ವರ್ಗಗಳ ಮುಖಂಡರಾದ ರಘು ಆರ್.ಕೌಟಿಲ್ಯ ಅವರು, ಪ್ರಚಾರ ಸಭೆಯಿಂದ ದಿಢೀರ್ ಹೊರನಡೆದಿದ್ದು ಸಾಕಷ್ಟು ಚರ್ಚೆಗೆ ಗ್ರಾಸವಾಗಿದೆ.

ಈ ಬೆಳವಣಿಗೆಗೆ ಪೂರಕವಾಗಿ ಬಿಜೆಪಿ ಜಾಹಿರಾತುಗಳಲ್ಲಿ ರಘು ಅವರ ಭಾವಚಿತ್ರ ಕಾಣಿಸದಿರುವುದು, ಸಭೆ-ಸಮಾರಂಭಗಳಲ್ಲಿ ಅವರಿಗೆ ಆದ್ಯತೆ ನೀಡದಿರುವುದು, ಸೌಜನ್ಯಕ್ಕಾದರೂ ಅವರ ಹೆಸರು ಪ್ರಸ್ತಾಪಿಸದಿರುವುದು, ಇಂತಹ ಘಟನೆಗಳಿಂದ ಬೇಸರಗೊಂಡು ಸಭೆ–ಸಮಾರಂಭದಿಂದ ದೂರವಿರಲು ನಿರ್ಧರಿಸಿದ್ದಾರೆಂದು ರಘು ಅವರ ಆತ್ಮೀಯರು ತಿಳಿಸಿದ್ದಾರೆ. ಈಗಾಗಲೇ ರಘು ಅವರು ಸಂಸದ ಪ್ರತಾಪ್ ಸಿಂಹ ಅವರ ಬಳಿ ತಮ್ಮ ಬೇಸರ ವ್ಯಕ್ತಪಡಿಸಿದ್ದು, ಇನ್ನು ಮುಂದೆ ಇಂತಹ ಅಚಾತುರ್ಯ ನಡೆಯದಂತೆ ಗಮನಹರಿಸುವುದಾಗಿ ಸಂಸದರು ಭರವಸೆ ನೀಡಿದ್ದಾರೆಂದು ತಿಳಿದುಬಂದಿದೆ.

ಪ್ರೊ.ಎ.ವಿ.ನರಸಿಂಹಮೂರ್ತಿ ಕೃತಿಗಳಲ್ಲಿ ವೈಜ್ಞಾನಿಕ ದೃಷ್ಟಿಕೋನ

'ಇತಿಹಾಸದ ತಾರೆಗಳು' ಕೃತಿ ಬಿಡುಗಡೆ ನಂತರ ಡಾ.ಭಾಷ್ಯಂ ಸ್ವಾಮೀಜಿ ಅಭಿಮತ



ಹಿರಿಯ ವಿದ್ವಾಂಸ, ಇತಿಹಾಸ ತಜ್ಞ ಡಾ.ಎ.ವಿ.ನರಸಿಂಹಮೂರ್ತಿ ಅವರ 'ಇತಿಹಾಸದ ತಾರೆಗಳು' ಕೃತಿಯನ್ನು ನಾಡೋಜ ಡಾ.ಭಾಷ್ಯಂ ಸ್ವಾಮೀಜಿ ಬಿಡುಗಡೆ ಮಾಡಿದರು. ಚಿತ್ರದಲ್ಲಿ ಕರ್ನಾಟಕ ಸಂಸ್ಕೃತ ವಿವಿ ವಿಶ್ರಾಂತ ಕುಲಪತಿ ಡಾ.ಪದ್ಮಾಶೇಖರ್, ಮಾಜಿ ಶಾಸಕ ವಾಸು, ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್ ಇನ್ನಿತರರನ್ನು ಕಾಣಬಹುದು.

ಮೈಸೂರು, ಮೇ 19 (ಆರ್‌ಕೆಬಿ)– ಖ್ಯಾತ ವಿದ್ವಾಂಸ ಮತ್ತು ಇತಿಹಾಸ ತಜ್ಞ ಪ್ರೊ.ಎ.ವಿ.ನರಸಿಂಹಮೂರ್ತಿ ಅವರ ಕೃತಿಗಳು ವೈಜ್ಞಾನಿಕ ಆಯಾಮವನ್ನು ಹೊಂದಿವೆ ಎಂದು ನಾಡೋಜ ಡಾ.ಭಾಷ್ಯಂ ಸ್ವಾಮೀಜಿ ನುಡಿದರು.

ಮೈಸೂರಿನ ವಿಜಯನಗರ ಒಂದನೇ ಹಂತದಲ್ಲಿರುವ ಶ್ರೀ ಯೋಗ ನರಸಿಂಹಸ್ವಾಮಿ ದೇವಸ್ಥಾನದ ಆವರಣದಲ್ಲಿ ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಕನ್ನಡ ಸಾಹಿತ್ಯ ಕಲಾಕೂಟ ಜಂಟಿಯಾಗಿ ಗುರುವಾರ ಆಯೋಜಿಸಿದ್ದ ಪ್ರೊ.ಎವಿಎನ್ ಅವರ 'ಇತಿಹಾಸದ ತಾರೆಗಳು' ಕೃತಿ ಬಿಡುಗಡೆ ಮಾಡಿ ಮಾತನಾಡಿದರು.

ಶೃಂಗೇರಿ ಮಠಾಧೀಶರು, ಸಾಹುಕಾರ್ ಚೆನ್ನಯ್ಯ ಮುಂತಾದ ಅನೇಕ ಮಹಾನ್ ವ್ಯಕ್ತಿಗಳ ಜೀವನವನ್ನು ಕೃತಿಯಲ್ಲಿ ವಿಶ್ಲೇಷಿಸಲಾಗಿದೆ. ಪುಸ್ತಕವು ಗತಿಸಿ ಹೋಗಿರುವವರ ಸ್ಮರಿಸುವಂತೆ ಮಾಡುತ್ತದೆ ಎಂದರು.

ಕೃತಿಯಲ್ಲಿ ಬರುವ 'ಪಗೋಡ' ಪದವು ಭಕ್ಷ್ಯವಲ್ಲ (ಪಕೋಡಾ). ಆದರೆ ಆ ಪದ ಪ್ರಾಚೀನ ಕಾಲದ ನಾಣ್ಯಗಳನ್ನು ಸೂಚಿಸುತ್ತದೆ ಎಂದ ಅವರು, ಪ್ರಾಚೀನ ಕಾಲದಲ್ಲಿ ಅಸ್ತಿತ್ವದಲ್ಲಿದ್ದ ಚಿನ್ನದ ನಾಣ್ಯಗಳನ್ನು 'ಪಗೋಡಗಳು' ಎಂದು ಕರೆಯಲಾಗುತ್ತಿತ್ತು. ಅಂತಹ ನಾಣ್ಯಗಳ ಬಗ್ಗೆ ಪ್ರೊ. ಎವಿಎನ್ ಚೆನ್ನಾಗಿ ವಿಶ್ಲೇಷಿಸಿದ್ದಾರೆ. ಅವರು ನಾಣ್ಯಶಾಸ್ತ್ರ ತಜ್ಞ. ಅವರ ಎಲ್ಲಾ ಕೃತಿಗಳು ಕನ್ನಡ, ಇಂಗ್ಲಿಷ್, ತಮಿಳು, ತೆಲುಗು ಅಥವಾ ಇನ್ನಾವುದೇ ಭಾಷೆಯಲ್ಲಿರಲಿ ಅವರ ಭಾಷೆ ಅಷ್ಟೊಂದು ಶ್ರೀಮಂತವಾಗಿರುವುದರಿಂದ ಸರಳವಾಗಿ ಓದಿಸಿಕೊಂಡು ಹೋಗುತ್ತವೆ ಎಂದು ಹೇಳಿದರು.

ಕೃತಿ ಕುರಿತು ಮಾತನಾಡಿದ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಡಾ.ಪದ್ಮಾಶೇಖರ್, 540 ಪುಟಗಳನ್ನು ಹೊಂದಿರುವ ಪ್ರೊ.ಎವಿಎನ್ ಅವರ 'ಇತಿಹಾಸದ ತಾರೆಗಳು' 540 ಪುಟಗಳ ಕೃತಿ 101 ಲೇಖನಗಳ ಒಳಗೊಂಡಿದೆ. 18 ಲೇಖನಗಳು ಶೃಂಗೇರಿ ಮಠದ ಶ್ರೀಗಳಿಗೆ ಸಮರ್ಪಿತವಾಗಿವೆ. ಇತಿಹಾಸ ಮತ್ತು ಸತ್ಯವನ್ನು ಅನ್ವೇಷಿಸಲು ಲೇಖಕರು ಸಾಕಷ್ಟು ಪ್ರಯತ್ನ ಮಾಡಿದ್ದಾರೆ ಎಂದರು.

ಅನೇಕ ನೆಲೆಯಲ್ಲಿ ಅಧ್ಯಯನ ಮಾಡಬಹುದಾದ ಮೌಲ್ಯಯುತ ಕೃತಿ. ಮರೆತ ಇತಿಹಾಸವನ್ನು ನೆನಪಿಗೆ ತರುವ ಕೃತಿಯು ಅಪರೂಪದ ಮತ್ತು ವೈವಿಧ್ಯಮಯ ವಿಷಯಗಳ ಸಂಗ್ರಹವಾಗಿದೆ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಕೃತಿಕಾರರಾದ ಡಾ.ಎ.ವಿ.ನರಸಿಂಹಮೂರ್ತಿ ಮತ್ತು ಅವರ ಪತ್ನಿ ಕಮಲಾಂಬ ಅವರನ್ನು ಗೌರವಿಸಲಾಯಿತು. ಮಾಜಿ ಶಾಸಕ ವಾಸು ಮುಖ್ಯ ಅತಿಥಿಯಾಗಿದ್ದರು. ಕನ್ನಡ ಸಾಹಿತ್ಯ ಪರಿಷತ್ ಮೈಸೂರು ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್ ಅಧ್ಯಕ್ಷತೆ ವಹಿಸಿದ್ದರು. ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಸಾಪ ಕಾರ್ಯದರ್ಶಿ ಲತಾ ಮೋಹನ್ ಇನ್ನಿತರರು ಉಪಸ್ಥಿತರಿದ್ದರು.

ಬಿಜೆಪಿಯಿಂದ ಬೋರ್‌ವೆಲ್ ಯೋಜನೆಯಲ್ಲೂ ಭ್ರಷ್ಟಾಚಾರ

ಕೆಪಿಸಿಸಿ ರಾಜ್ಯ ವಕ್ತಾರ ಎಂ.ಲಕ್ಷ್ಮಣ ಆರೋಪ

- **160 ಕೋಟಿ ರೂ. ಕಮಿಷನ್ ಪಡೆಯಲಾಗಿದೆ**
- **ಅನರ್ಹರಿಗೆ ಬೋರ್‌ವೆಲ್ ಕೊರೆಯುವ ಗುತ್ತಿಗೆ**



ಮೈಸೂರು, ಮೇ 19(ಆರ್‌ಕೆಬಿ)– ಕರ್ನಾಟಕದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದಾಗಿನಿಂದ ಭ್ರಷ್ಟಾಚಾರ ಮುಗಿಲು ಮುಟ್ಟಿದೆ. ಹಿಂದುಳಿದ ವರ್ಗದವರಿಗೆ ಬೋರ್‌ವೆಲ್ ಕೊರೆಯುವ ಯೋಜನೆಯಲ್ಲೂ ಭಾರೀ ಭ್ರಷ್ಟಾಚಾರ ನಡೆದಿದೆ. ಬೋರ್‌ವೆಲ್ ಕೊರೆಯುವ ಗುತ್ತಿಗೆಯನ್ನು ಅನರ್ಹರಿಗೆ ನೀಡಲಾಗಿದೆ. ಸಮಾಜ ಕಲ್ಯಾಣ ಇಲಾಖೆ ವಿವಿಧ ನಿಗಮಗಳ ಮೂಲಕ ಮೀಸಲಿಟ್ಟ 431 ಕೋಟಿ ರೂ.ಗಳಲ್ಲಿ 160 ಕೋಟಿ ರೂ. ಕಮಿಷನ್ ಪಡೆದಿದ್ದಾರೆ ಎಂದು ಕೆಪಿಸಿಸಿ ರಾಜ್ಯ ವಕ್ತಾರ ಎಂ.ಲಕ್ಷ್ಮಣ ಆರೋಪಿಸಿದರು.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಒಂದು ಕೊಳವೆ ಬಾವಿ ಕೊರೆಯಲು 83 ಸಾವಿರ ಖರ್ಚಾದರೆ ಸಮಾಜ ಕಲ್ಯಾಣ ಇಲಾಖೆಯಲ್ಲಿ 1.93 ಲಕ್ಷ ರೂ. ನಿಗದಿ ಮಾಡಲಾಗಿದೆ. ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವವರು ನಕಲಿ ಕಾಮಗಾರಿ ಪ್ರಮಾಣ ಪತ್ರ, ನಕಲಿ ಆದಾಯ ಪತ್ರ ಸಲ್ಲಿಸಿದ್ದಾರೆ ಎಂದು ಆರೋಪಿಸಿದರು.

ರಾತ್ರೋರಾತ್ರಿ ಬೋರ್‌ವೆಲ್‌ಗಳನ್ನು ಕೊರೆದು, ನಕಲಿ ದಾಖಲೆಗಳನ್ನು ಸೃಷ್ಟಿಸಿ, ಹಣ ಲೂಟಿ ಮಾಡಲಾಗಿದೆ. ಒಂದು ತಿಂಗಳಲ್ಲಿ ಸಾವಿರಕ್ಕೂ ಹೆಚ್ಚು ಬೋರ್‌ವೆಲ್ ಕೊರೆದಿರುವ ಬಗ್ಗೆ ದಾಖಲೆಗಳನ್ನು ಸೃಷ್ಟಿಸಲಾಗಿದೆ. ಇದು ಸರ್ಕಾರದ ವ್ಯವಸ್ಥಿತ ಭ್ರಷ್ಟಾಚಾರವಾಗಿದ್ದು, ಇದರಲ್ಲಿ ಮಂತ್ರಿಗಳು, ಶಾಸಕರು, ಆರ್‌ಎಸ್‌ಎಸ್ ಮುಖಂಡರು ಭಾಗಿಯಾಗಿದ್ದಾರೆ ಎಂದು ದೂರಿದರು.

ಕೊಡಗು ಜಿಲ್ಲೆಯಲ್ಲಿ ಹಿಂದೂಪರ ಸಂಘಟನೆ ಕಾರ್ಯಕರ್ತರಿಗೆ ಬಂದೂಕು ತರಬೇತಿ ನೀಡಿರುವ ಪ್ರಕರಣ ಬೆಳಕಿಗೆ ಬಂದಿರುವ ವಿಚಾರ ಕುರಿತು ಪ್ರತಿಕ್ರಿಯಿಸಿದ ಎಂ.ಲಕ್ಷ್ಮಣ್, ಬಹಿರಂಗವಾಗಿ ಬಂದೂಕು ತರಬೇತಿ ನೀಡಿರುವುದು ಅಕ್ಷಮ್ಯ ಅಪರಾಧವಾಗಿದೆ. ಆದರೂ ಈ ಬಗ್ಗೆ ಸ್ಥಳೀಯ ಶಾಸಕ ಕೆ.ಜಿ.ಬೋಪಯ್ಯ ಉಡಾಫೆಯ ಉತ್ತರ ನೀಡಿದ್ದಾರೆ. ಅದೇ ಬೇರೆ ಸಮುದಾಯದವರು ಈ ರೀತಿ ಮಾಡಿದ್ದರೆ ರಾಜ್ಯದಾದ್ಯಂತ ಬೊಬ್ಬೆ ಹೊಡೆಯುತ್ತಿದ್ದರು ಎಂದು ಹರಿಹಾಯ್ದರು.

ನಗರ ಪಾಲಿಕೆ ಸದಸ್ಯರ ಕತ್ತಿನ ಪಟ್ಟಿ ಹಿಡಿದು ಕೇಳುವಂತೆ ಕರೆ ನೀಡಿರುವ ಸಂಸದ ಪ್ರತಾಪ್ ಸಿಂಹ ವಿರುದ್ಧ ಕಿಡಿಕಾರಿದ ಎಂ.ಲಕ್ಷ್ಮಣ್, ಎಲ್ಲವನ್ನೂ ಇವರೇ ಹೊತ್ತುಕೊಂಡಿರುವಂತೆ ಪ್ರತಾಪ್ ಸಿಂಹ ವರ್ತಿಸುತ್ತಿದ್ದಾರೆ. ನಗರ ಪಾಲಿಕೆ ಸದಸ್ಯರು ಕೂಡ ಇವರಂತೆಯೇ ಜನಪ್ರತಿನಿಧಿಗಳು. ಸ್ಥಳೀಯ ಜನಪ್ರತಿನಿಧಿಗಳ ವಿರುದ್ಧ ಸಂಸದ ಪ್ರತಾಪ್ ಸಿಂಹ ನೀಡಿರುವ ಹೇಳಿಕೆ ಸರಿಯಲ್ಲ ಎಂದು ವಾಗ್ದಾಳಿ ನಡೆಸಿದರು.

ಸುದ್ದಿಗೋಷ್ಠಿಯಲ್ಲಿ ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಪ್ರಧಾನ ಕಾರ್ಯದರ್ಶಿ ಎಂ.ಶಿವಣ್ಣ, ಈಶ್ವರ್ ಚಕ್ಕಡಿ, ಮಾಧ್ಯಮ ವಕ್ತಾರ ಮಹೇಶ್ ಉಪಸ್ಥಿತರಿದ್ದರು.





ಬಿಜೆಪಿ ರಾಜ್ಯಾಧ್ಯಕ್ಷ ನಳಿನ್‌ಕುಮಾರ್ ಕಟೀಲ್, ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಸಂಸದ ಪ್ರತಾಪ್ ಸಿಂಹ, ಶಾಸಕರಾದ ನಿರಂಜನ್‌ಕುಮಾರ್, ಎನ್.ಮಹೇಶ್, ಮಾಜಿ ಸಚಿವ ಸಿ.ಹೆಚ್.ವಿಜಯಶಂಕರ್, ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್ ಹಾಗೂ ಕೇಂದ್ರದ ರಾಜ್ಯ ಕೃಷಿ ಸಚಿವೆ ಶೋಭಾ ಕರಂದ್ಲಾಜೆ ಅವರುಗಳು ಶಾಸಕ ಜಿ.ಟಿ.ದೇವೇಗೌಡರ ಮನೆಗೆ ಭೇಟಿ ನೀಡಿ, ಅವರ ಮೊಮ್ಮಗಳ ನಿಧನದ ಹಿನ್ನೆಲೆಯಲ್ಲಿ ಕುಟುಂಬ ವರ್ಗದವರಿಗೆ ಸಾಂತ್ವನ ಹೇಳಿದರು. ಈ ವೇಳೆ ಲಲಿತಾ ಜಿ.ಟಿ.ದೇವೇಗೌಡ ಉಪಸ್ಥಿತರಿದ್ದರು.

ಶ್ರೀ ಗಣಪತಿ ಸಚ್ಚಿದಾನಂದ ಶ್ರೀಗಳ 80ನೇ ಜನ್ಮ ದಿನಾಚರಣೆ ಅಂಗವಾಗಿ ಶ್ರೀಗಳಿಂದ ವಿವಿಧ ಆಸ್ಥಾನ ವಿದ್ವಾಂಸರಿಗೆ ಸನ್ಮಾನ



ಮೈಸೂರು, ಮೇ 19(ಆರ್‌ಕೆಬಿ)– ಮೈಸೂರಿನ ಅವಧೂತ ದತ್ತಪೀಠ, ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ಪೀಠಾಧಿಪತಿ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ 80ನೇ ಜನ್ಮ ದಿನೋತ್ಸವದ ಅಂಗವಾಗಿ ವಿವಿಧ ಕಾರ್ಯಕ್ರಮಗಳು ಆರಂಭವಾಗಿದೆ. ಇದರ ಅಂಗವಾಗಿ ಗುರುವಾರ ಬೆಳಗ್ಗೆ ವಿವಿಧ ಕ್ಷೇತ್ರಗಳ ಗಣ್ಯರಿಗೆ ಸನ್ಮಾನಿಸಿ, ಗೌರವಿಸಲಾಯಿತು.

ಆಸ್ಥಾನ ವಿದ್ವಾನ್‌ಗಳಾದ ಆರ್.ವಿ.ಶ್ರೀರಾಮ ಘನಪಾಠಿ, ಹೈದರಾಬಾದ್ (ಯಜುರ್ವೇದ), ಹರಿ ಸೀತಾರಾಮ ಮೂರ್ತಿ, ಹೈದರಾಬಾದ್ (ಯಜುರ್ವೇದ), ಕೆ.ಸಂತೋಷ್‌ಕುಮಾರ ಘನಪಾಠಿ, ಮೈಸೂರು (ಋಗ್ವೇದ), ಡಿ.ಸುಬ್ರಹ್ಮಣ್ಯ ಜೋಷಿ, ಮೈಸೂರು (ಯಜುರ್ವೇದ), ಟಿ.ವಿ.ಎಸ್.ರಾಘವೇಂದ್ರಶರ್ಮ, ರಾಜಮಂಡ್ರಿ (ಯಜುರ್ವೇದ), ಆಕೆಳ್ಳ ವೆಂಕಟ ನಾರಾಯಣಮೂರ್ತಿ, ಇಂದುಪಲ್ಲಿ (ಯಜುರ್ವೇದ), ವಿಂಜಮೂರಿ ಕುಮಾರ ಸೂರ್ಯನಾರಾಯಣ, ಪೀಠಾಪುರ (ಯಜುರ್ವೇದ), ಡಾ.ಗೋಪಾಲಕೃಷ್ಣ ಶರ್ಮ, ತಿರುವನಂತಪುರಂ, (ಜ್ಯೋತಿಷ್ಯ), ಆರ್.ಸುಬ್ರಹ್ಮಣ್ಯ ಘನಪಾಠಿ, ತಿರುವನೈಕೋಯಿಲ್ (ಋಗ್ವೇದ ಮತ್ತು ನ್ಯಾಯಶಾಸ್ತ್ರ), ದುವ್ವೂರಿ ಫಣಿಯಾಜಿ, ತಿರುಪತಿ (ಯಜುರ್ವೇದ), ಎಂ.ಶ್ರೀನಿವಾಸ ಘನಪಾಠಿ, ತಿರುಪತಿ (ಯಜುರ್ವೇದ) ಹಾಗೂ ಘನಾಚಾರ್ಯ ಪ್ರಶಸ್ತಿ– ವೆಂಕಟಕೃಷ್ಣ ಘನಪಾಠಿ (ಯಜುರ್ವೇದ) ಇವರುಗಳನ್ನು ಸನ್ಮಾನಿಸಲಾಯಿತು.

ಇದಕ್ಕೂ ಮುನ್ನ ಮಾತನಾಡಿದ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಅವರು, ವೇದ ವಿದ್ಯೆಗೆ ಸಾಕಷ್ಟು ಸೇವೆ ಮಾಡಿದಂತಹ ವಿದ್ವಾಂಸರಿಗೆ ಗೌರವ ಸಲ್ಲಿಸಲಾಗುತ್ತಿದೆ. ಹೀಗೆ ಸನ್ಮಾನ ಮಾಡುತ್ತಿರುವುದು ವಿದ್ಯೆಗೆ ನಾವು ಗೌರವ ಸಲ್ಲಿಸಿದಂತೆ. ವೇದ ಪೂಜೆಯಿಂದಲೇ ಶ್ರೀಗಳ ಜನ್ಮ ದಿನೋತ್ಸವ ಪ್ರಾರಂಭವಾಗುತ್ತಿರುವುದು ಸಂತಸದ ವಿಷಯ ಎಂದು ಹೇಳಿದರು.

ದತ್ತಪೀಠ ಆಸ್ಥಾನ ವಿದ್ವಾನ್ ಪುರಸ್ಕೃತರನ್ನು ಗೌರವಿಸಿ ಆಶೀರ್ವಚನ ನೀಡಿದ ಪೂಜ್ಯ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರು, ಪಂಡಿತ ಜನ ಭಗವಾನನ ಸ್ವರೂಪ. ಭಗವಂತನ ಸೇವೆ ಮಾಡುವ ಇವರು ಅವನಲ್ಲೇ ಮಗ್ನರಾಗಿರುತ್ತಾರೆ. ವಿಷ್ಣು ಸ್ವರೂಪಿಗಳು, ಇವರು ವಿದ್ಯಾದಾನ ಮಾಡುತ್ತಾರೆ ಎಂದು ನುಡಿದರು.

ದತ್ತಪೀಠ ಹಾಗೂ ಈ ಪಂಡಿತರಿಗೂ ಅವಿನಾಭಾವ ಸಂಬಂಧವಿದೆ. ಇವರಿಗೆ ಪುಷ್ಪಾರ್ಚನೆ ಮಾಡಿ ಗೌರವಿಸಬೇಕು ಎಂದು ತಿಳಿಸಿದರು. ಇದೇ ವೇಳೆ ವೇದ ಸಭೆ ಮತ್ತು ವೇದ ಪರೀಕ್ಷೆಗಳನ್ನು ನಡೆಸಿಕೊಟ್ಟವರಿಗೂ ಪ್ರಮಾಣ ಪತ್ರ ನೀಡಿ ಗೌರವಿಸಲಾಯಿತು.

ಮೇ 22ರಿಂದ 31ರವರೆಗೆ ಶ್ರೀ ಗಣಪತಿ ಸಚ್ಚಿದಾನಂದ ಶ್ರೀಗಳ 80ನೇ ಜನ್ಮ ದಿನೋತ್ಸವ

ಮೈಸೂರಿನ ಅವಧೂತ ದತ್ತಪೀಠ, ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ಪೀಠಾಧಿಪತಿಗಳಾದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ 80ನೇ ಜನ್ಮ ದಿನೋತ್ಸವ, ಮಾತಾ ಜಯಲಕ್ಷ್ಮಿಯವರ ಜನ್ಮ ಶತಮಾನೋತ್ಸವ ,ನಾದಮಂಟಪದ 24ನೇ ವಾರ್ಷಿಕೋತ್ಸವ ಸಮಾರಂಭ ಮೇ 22ರಿಂದ ಮೇ 31ರವರೆಗೆ ನೆರವೇರಲಿದೆ. ಇದರ ಅಂಗವಾಗಿ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಅವರು ಮೇ 13ರಿಂದ 18ರವರೆಗೆ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ ಜನ್ಮ ಸ್ಥಳವಾದ ಮೇಕೆದಾಟುವಿನಿಂದ ಮೈಸೂರಿನ ಆಶ್ರಮದವರೆಗೆ ವಿಶ್ವಶಾಂತಿ ಪಾದಯಾತ್ರೆಯನ್ನು ಯಶಸ್ವಿಯಾಗಿ ನೆರವೇರಿಸಿದ್ದಾರೆ.

ಎಸ್‌ಎಸ್‌ಎಲ್‌ಸಿ: ನಂಜನಗೂಡಿಗೆ ಶೇ.92.10ರಷ್ಟು ಫಲಿತಾಂಶ

● ಜಿಲ್ಲೆಯಲ್ಲಿ ತಾಲೂಕಿಗೆ 5ನೇ ಸ್ಥಾನ ● 625 ಅಂಕ ಪಡೆದ ದೇವಿಕಾ ಪ್ರಥಮ: ಬಿಇಓ ಸಿ.ಎನ್.ರಾಜು



ಎಸ್‌ಎಸ್‌ಎಲ್‌ಸಿಯಲ್ಲಿ ನಂಜನಗೂಡು ತಾಲೂಕಿಗೆ ಪ್ರಥಮ ಸ್ಥಾನ ಗಳಿಸಿದ ಕಾರ್ಮಲ್ ಶಾಲೆ ವಿದ್ಯಾರ್ಥಿನಿ ಜೆ.ದೇವಿಕಾಳನ್ನು ಬಿಇಓ ಸಿ.ಎನ್.ರಾಜು ಅಭಿನಂದಿಸಿದರು.

ನಂಜನಗೂಡು, ಮೇ 19– ಗುರುವಾರ ಪ್ರಕಟವಾದ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಫಲಿತಾಂಶದಲ್ಲಿ ನಂಜನಗೂಡು ತಾಲೂಕಿಗೆ ಶೇ 92.10ರಷ್ಟು ಫಲಿತಾಂಶ ಬಂದಿದ್ದು, ಜಿಲ್ಲೆಯಲ್ಲಿ 5ನೇ ಸ್ಥಾನ ಗಳಿಸಿದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಸಿ.ಎನ್.ರಾಜು ತಿಳಿಸಿದರು.

ತಾಲೂಕಿನಲ್ಲಿ 2,356 ಬಾಲಕರು, 2,301 ಬಾಲಕಿಯರು ಸೇರಿದಂತೆ ಒಟ್ಟು 4,657 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರು. ಈ ಪೈಕಿ 2127 ಬಾಲಕರು, 2162 ಬಾಲಕಿಯರು ಸೇರಿದಂತೆ ಒಟ್ಟು 4289 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, 368 ವಿದ್ಯಾರ್ಥಿಗಳು ಅನುತ್ತೀರ್ಣರಾಗಿದ್ದಾರೆ ಎಂದು ಅವರು ಮಾಹಿತಿ ನೀಡಿದರು.

ಕಾರ್ಮಲ್ ಶಾಲೆ ವಿದ್ಯಾರ್ಥಿನಿ ದೇವಿಕಾಗೆ ಪ್ರಥಮ ಸ್ಥಾನ: ನಗರದ ಕಾರ್ಮಲ್ ಇಂಗ್ಲಿಷ್ ಶಾಲೆ ವಿದ್ಯಾರ್ಥಿನಿ ಜಿ.ದೇವಿಕಾ 625 ಅಂಕಗಳಿಗೆ 625 ಅಂಕ ಗಳಿಸುವ ಮೂಲಕ ತಾಲೂಕಿಗೆ ಪ್ರಥಮ ಸ್ಥಾನ ಗಳಿಸಿದ್ದಾಳೆ.

ನಗರದ ದೇವಿರಮ್ಮನಹಳ್ಳಿ ನಿವಾಸಿ, ಸರ್ಕಾರಿ ಪ್ರಾಥಮಿಕ ಶಾಲೆ ಶಿಕ್ಷಕ ಗಣೇಶ್ ಹಾಗೂ ಮಮತಾ ದಂಪತಿ ಪುತ್ರಿ ಜಿ.ದೇವಿಕಾ ತಾಲೂಕಿಗೆ ಪ್ರಥಮ ಸ್ಥಾನ ಗಳಿಸಿದ್ದು, ಈಕೆಯ ಸಾಧನೆಗೆ ಶಾಸಕ ಬಿ.ಹರ್ಷವರ್ಧನ್, ಕಾರ್ಮಲ್ ಶಾಲೆ ಶಿಕ್ಷಕ ವೃಂದ ಮೆಚ್ಚುಗೆ ವ್ಯಕ್ತಪಡಿಸಿದೆ. ಇದೇ ವೇಳೆ ಕ್ಷೇತ್ರ ಶಿಕ್ಷಣಾಧಿಕಾರಿ ಸಿ.ಎನ್.ರಾಜು ಅವರ ಮನೆಗೆ ತೆರಳಿ ವಿದ್ಯಾರ್ಥಿನಿಯನ್ನು ಸನ್ಮಾನಿಸಿದರು.

ಉಳಿದಂತೆ ಕಾರ್ಮಲ್ ಶಾಲೆ ವಿದ್ಯಾರ್ಥಿನಿಯರಾದ ಸಂಜಿತಾ, ಕಾವ್ಯ ಹಾಗೂ ನಗರದ ಯುನಿಟಿ ಪೌಢಶಾಲೆ ವಿದ್ಯಾರ್ಥಿನಿ ತೇಜಸ್ವಿನಿ ತಲಾ 624 ಅಂಕ ಗಳಿಸಿದ್ದಾರೆ. ನಗರದ ಆರ್.ಪಿ.ರಸ್ತೆ ಸರ್ಕಾರಿ ಬಾಲಕಿಯರ (ಜ್ಯೂನಿಯರ್) ಪ್ರೌಢಶಾಲೆ ವಿದ್ಯಾರ್ಥಿನಿ ಅಕ್ಷತಾ 623 ಅಂಕ ಗಳಿಸುವ ಮೂಲಕ ಸರ್ಕಾರಿ ಪ್ರೌಢಶಾಲೆಯಲ್ಲೇ ಅತ್ಯಂತ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿನಿ ಎಂಬ ಖ್ಯಾತಿಗೆ ಪಾತ್ರಳಾಗಿದ್ದಾಳೆ.

ಎಸ್.ಇಂಪನಾಗೆ ಅತ್ಯುತ್ತಮ ಅಂಕ: ಕಾರ್ಮಲ್ ಶಾಲೆ ವಿದ್ಯಾರ್ಥಿನಿ ಎಸ್.ಇಂಪನಾ 625 ಅಂಕಗಳಿಗೆ 592 ಅಂಕ ಗಳಿಸುವ ಮೂಲಕ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾಳೆ. ಈಕೆ ನಗರದ ಉದ್ಯಮಿ ಶೇಖರ್ ಹಾಗೂ ರೂಪ ದಂಪತಿ ಪುತ್ರಿ. ಈಕೆಯ ಸಾಧನೆಗೆ ಶಾಲೆಯ ಶಿಕ್ಷಕ ವೃಂದ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಎಸ್‌ಎಸ್‌ಎಲ್‌ಸಿ: ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ



ಕೆ.ಆರ್.ನಗರ: ನಗರದ ಬಿ.ಎಸ್.ಮಾದಪ್ಪ ಶಾಲೆ ವಿದ್ಯಾರ್ಥಿ ಎಂ.ಡಿ.ಚಿರಾಗ್ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625ಕ್ಕೆ 601 ಅಂಕ (ಶೇ.96.16)ಗಳೊಂದಿಗೆ ಉತ್ತೀರ್ಣನಾಗಿದ್ದಾನೆ. ಕನ್ನಡದಲ್ಲಿ 110, ಇಂಗ್ಲಿಷ್, ಹಿಂದಿ ಹಾಗೂ ಸಮಾಜ ವಿಜ್ಞಾನದಲ್ಲಿ 100ಕ್ಕೆ 100, ಗಣಿತದಲ್ಲಿ 97 ಹಾಗೂ ವಿಜ್ಞಾನದಲ್ಲಿ 94 ಅಂಕ ಗಳಿಸಿದ್ದಾನೆ. ಈತ ಪಿರಿಯಾಪಟ್ಟಣ ತಾಲೂಕು ಮೇಲೂರು ಗ್ರಾಮದ ಎಂ.ಜೆ.ಧರ್ಮ ಹಾಗೂ ಲೀಲಾ ದಂಪತಿ ಪುತ್ರ.



ಮಲ್ಕುಂಡಿ: ನಂಜನಗೂಡು ತಾಲೂಕಿನ ಮಾದನಹಳ್ಳಿ ಗ್ರಾಮದ ನಿವಾಸಿ, ಕೃಷಿ ಟ್ರಾಕ್ಟರ್ ಮಾಲೀಕರ ಸಂಘದ ತಾಲೂಕು ಅಧ್ಯಕ್ಷ ಮೂರ್ತಿ ಅವರ ಸಹೋದರ ಪುತ್ರಿ ಎಂ.ಎಸ್.ಯಮುನಾ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 565 ಅಂಕ ಪಡೆದು ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣಳಾಗಿದ್ದಾಳೆ.



ಸರಗೂರು: ಪಟ್ಟಣದ ಲಯನ್ಸ್ ಅಕಾಡೆಮಿ ಶಾಲೆ ವಿದ್ಯಾರ್ಥಿ ಪುನೀತ್ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 606(96.96) ಅಂಕ ಪಡೆದು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗುವ ಮೂಲಕ ತಾಲೂಕಿಗೆ ಪ್ರಥಮ ಸ್ಥಾನ ಪಡೆದಿದ್ದಾನೆ. ಈತ ಚಾಮರಾಜನಗರ ನಂಜದೇವನಪುರ ಗ್ರಾಮದ ನಿವಾಸಿ ನಂಜಪ್ಪ, ಪೂರ್ಣಿಮಾ ದಂಪತಿ ಪುತ್ರ.



ಮಲ್ಕುಂಡಿ: ನಂಜನಗೂಡು ತಾಲೂಕಿನ ಮಲ್ಕುಂಡಿ ಗ್ರಾಮದ ಎಂ.ಎಸ್.ಮಂಜುನಾಥ್ ಎಂಬುವರ ಪುತ್ರಿ ಎಂ.ದಿಶಾ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625ಕ್ಕೆ 605 ಅಂಕ ಪಡೆದು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾಳೆ.



ಮಲ್ಕುಂಡಿ: ನಂಜನಗೂಡು ತಾಲೂಕಿನ ಕಸುವಿನಹಳ್ಳಿ ಗ್ರಾಮದ ಸಕಲೇಶ್ ಅವರ ಪುತ್ರಿ ಪ್ರಣವಶ್ರೀ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625ಕ್ಕೆ 601 ಅಂಕ ಪಡೆದು ಅತ್ಯುತ್ತಮ ಶ್ರೇಣಿ ಪಡೆದಿದ್ದಾಳೆ.



ಮೈಸೂರು: ನಗರದ ಎಸ್.ಎ.ಸಿ ಸರ್ವೋದಯ(ಬಿಜಿಎಸ್) ಪ್ರೌಢ ಶಾಲೆಯ ವಿದ್ಯಾರ್ಥಿ ಬಿ. ಸೌಂದರ್ಯ ಈ ಬಾರಿಯ ಎಸ್‌ಎಸ್‌ಎಲ್ ಪರೀಕ್ಷೆಯಲ್ಲಿ 625ಕ್ಕೆ 600 ಅಂಕ(ಶೇ.96) ಪಡೆದು ಉನ್ನತ ಶ್ರೇಣಿಯಲ್ಲಿ ಉತ್ತೀರ್ಣಳಾಗಿದ್ದಾರೆ. ಈಕೆ ಮೈಸೂರಿನ ಶಾರದಾ ದೇವಿನಗರದ ನಿವಾಸಿ ಹೆಚ್.ಬಿ.ಬಸವರಾಜು ಮತ್ತು ಸೌಭಾಗ್ಯ ದಂಪತಿ ಪುತ್ರಿ.



ಹೆಚ್.ಡಿ.ಕೋಟೆ: ತಾಲೂಕಿನ ಕ್ಯಾತನಹಳ್ಳಿಯ ಸುಬ್ಬಣ್ಣ ಪ್ರಾಥಮಿಕ ಮತ್ತು ಪ್ರೌಢಶಾಲೆ ವಿದ್ಯಾರ್ಥಿನಿ ಪ್ರಿಯಾಂಕ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 620 ಅಂಕ ಪಡೆದು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾಳೆ. ಈಕೆ ಕ್ಯಾತನಹಳ್ಳಿ ಗ್ರಾಮದ ನಿವಾಸಿ ಅರ್ಕೇಶ್ ಅವರ ಪುತ್ರಿ.

ವಿನಾಯಕ ಜ್ಞಾನವಿದ್ಯಾ ಪ್ರೌಢಶಾಲೆಗೆ ಶೇ.100ರಷ್ಟು ಫಲಿತಾಂಶ



ಬಿ.ಪವಿತ್ರಾ ಎನ್.ರುಚಿತ ಎಸ್.ಲಕ್ಷ್ಮಿ ಬಿ.ಯಾಮಿನಿ ಕೆ.ಶ್ರೀನಿವಾಸ್

ಜಯಪುರ, ಮೇ 19– ಇಲ್ಲಿನ ವಿನಾಯಕ ಜ್ಞಾನವಿದ್ಯಾ ಪ್ರೌಢಶಾಲೆ 2021–22ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.100ರಷ್ಟು ಫಲಿತಾಂಶ ಪಡೆದಿದೆ ಎಂದು ಶಾಲೆಯ ಮುಖ್ಯಶಿಕ್ಷಕ ಹೆಚ್.ಕೆ.ಮಲ್ಲಿಕಾರ್ಜುನಪ್ಪ ತಿಳಿಸಿದ್ದಾರೆ. ನಮ್ಮ ಶಾಲೆಯ 11 ಮಂದಿ ಅತ್ಯುನ್ನತ, 29 ಮಂದಿ ಪ್ರಥಮ, ಓರ್ವ ವಿದ್ಯಾರ್ಥಿ ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣರಾಗಿದ್ದು, ಬಿ.ಪವಿತ್ರಾ 592,, ಎನ್.ರುಚಿತ 591, ಎಸ್.ಲಕ್ಷ್ಮಿ 591, ಬಿ.ಯಾಮಿನಿ 577, ಕೆ.ಶ್ರೀನಿವಾಸ್ 576 ಅಂಕ ಪಡೆದು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ.

ಎಸ್‌ಎಸ್‌ಎಲ್‌ಸಿ: ಶಾಸ್ತ್ರಿ ವಿದ್ಯಾಸಂಸ್ಥೆಗೆ ಉತ್ತಮ ಫಲಿತಾಂಶ



ದಿಪ್ತಿ–618, ಇಂಚರ–617, ಶರಣ್ಯ–610, ತೇನವೋಲಿ–605, ಅಲ್ಫಿಯಾ ರಿಯಾಜ್–605, ಸಂಜನ–605, ಶ್ರೇಯಾ–603

ಹುಣಸೂರು, ಮೇ 19(ಕೆಕೆ)– ನಗರದ ಶಾಸ್ತ್ರಿ ವಿದ್ಯಾಸಂಸ್ಥೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ಪಡೆದಿದೆ ಎಂದು ಸಂಸ್ಥೆ ನಿರ್ದೇಶಕ ರಾಧಾಕೃಷ್ಣ ತಿಳಿಸಿದ್ದಾರೆ.

ನಮ್ಮ ಶಾಲೆಯ 81 ವಿದ್ಯಾರ್ಥಿಗಳು ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆದಿದ್ದು, ಎಲ್ಲರೂ ಉತ್ತೀರ್ಣರಾಗುವ ಮೂಲಕ ಈ ಬಾರಿ 100 ರಷ್ಟು ಫಲಿತಾಂಶ ಪಡೆದಿದ್ದೇವೆ. ಈ ಪೈಕಿ 25 ಅತ್ಯುನ್ನತ ಶ್ರೇಣಿ, 31 ಪ್ರಥಮ, 25 ವಿದ್ಯಾರ್ಥಿಗಳು ದ್ವಿತೀಯ ದರ್ಜೆಯಲ್ಲಿ ತೇರ್ಗಡೆಯಾಗಿದ್ದಾರೆ.

ಶಾಲೆಯ ದಿಪ್ತಿ ಎಂ.ಡಿ–618, ಇಂಚರ.ಹೆಚ್–617, ಶರಣ್ಯ.ಯು.ಕೆ–610, ತೇನವೋಲಿ–605, ಅಲ್ಫಿಯಾ ರಿಯಾಜ್–605, ಸಂಜನ.ಎಂ.ಕೆ–605, ಶ್ರೇಯಾ.ಡಿ.ಕೆ–603 ಅಂಕ ಪಡೆದು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿ ಶಾಲೆಗೆ ಕೀರ್ತಿ ತಂದಿದ್ದಾರೆ. ಗಣಿತದಲ್ಲಿ ಇಬ್ಬರು, ವಿಜ್ಞಾನದಲ್ಲಿ ನಾಲ್ವರು, ಸಮಾಜದಲ್ಲಿ ಐವರು ವಿದ್ಯಾರ್ಥಿಗಳು 100ಕ್ಕೆ 100 ಅಂಕ ಪಡೆದು ಉತ್ತೀರ್ಣರಾಗಿದ್ದಾರೆ ಎಂದರು.

ಭಾರೀ ಮಳೆಗೆ ದೇವಾಲಯದ ಗೋಡೆ ಕುಸಿತ

ಮೂಗೂರು, ಮೇ 19(ಎಂಬಿಆರ್)– ಕಳೆದ ಒಂದು ವಾರದಿಂದ ಸುರಿದ ಭಾರೀ ಮಳೆಗೆ ಗ್ರಾಮದ ಶ್ರೀದೇಶೇಶ್ವರ ಸ್ವಾಮಿ ದೇವಾಲಯದ ಗೋಡೆ ಕುಸಿದಿದೆ.

ಮೂಗೂರಿನ ಅತ್ಯಂತ ಪ್ರಾಚೀನ ಕಾಲದ ಶ್ರೀದೇಶೇಶ್ವರಸ್ವಾಮಿ ದೇವಾಲಯದ ಗೋಡೆ ಕಳೆದ ಒಂದು ವಾರದಿಂದ ಸುರಿದ ಭಾರೀ ಮಳೆಗೆ ಶಿಥಿಲಗೊಂಡು ಗುರುವಾರ ಮುಂಜಾನೆ ಕುಸಿದಿದೆ. ಈ ವೇಳೆ ಸ್ಥಳದಲ್ಲಿ ಯಾರೂ ಇಲ್ಲದಿದ್ದರಿಂದ ಅದೃಷ್ಟವಶಾತ್ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ. ದೇವಾಲಯದ ಸುತ್ತಲೂ ಇರುವ ಗೋಡೆಗಳು ಬಿರುಕು ಬಿಟ್ಟು ಸಂಪೂರ್ಣ ಶಿಥಿಲಾವಸ್ಥೆಗೆ ತಲುಪಿದ್ದು, ಯಾವುದೇ ಸಮಯದಲ್ಲಿ ಕುಸಿಯುವ ಹಂತದಲ್ಲಿದೆ.

ಸುದ್ದಿ ತಿಳಿದು ತಹಶೀಲ್ದಾರ್ ಬಿ.ಗಿರಿಜಾ ಸ್ಥಳಕ್ಕೆ ಆಗಮಿಸಿ ಪರಿಶೀಲಿಸಿದರು. ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಹಾನಿಯ ದೋಷ ಆಧಾರಿಸಿ ಯೋಜನೆ ತಯಾರಿಸುವಂತೆ ಸಂಬಂಧಪಟ್ಟ ಅಭಿಯಂತರರಿಗೆ ಸೂಚನೆ ನೀಡಿದ್ದೇನೆ. ಮುಜರಾಯಿ ಇಲಾಖೆಯ ಕಾಯಕಲ್ಪ ಯೋಜನೆಯಡಿ ರಾಜ್ಯ ಸರ್ಕಾರ ನೀಡುವ ಅನುದಾನವನ್ನು ದೇವಾಲಯದ ದುರಸ್ತಿ ಕಾರ್ಯಕ್ಕೆ ನೀಡುವಂತೆ



ಶಿಫಾರಸ್ಸು ಮಾಡಲಾಗುವುದು ಎಂದರು.

ಈ ವೇಳೆ ಪಾರುಪತೇದಾರ ಎಂ.ಬಿ.ಸಾಗರ್, ಕಂದಾಯ ಇಲಾಖೆ ಆರ್.ಐ.ಬಸವರಾಜು, ದೇವಾಲಯದ ಅರ್ಚಕರಾದ ಸುಬ್ರಹ್ಮಣ್ಯ, ಅಜಯ್ ಶಾಸ್ತ್ರಿ, ಸ್ವಾಮಿ, ಪಿಡಿಓ ಪೂರ್ಣಿಮಾ, ಲೆಕ್ಕ ಸಹಾಯಕರಾದ ಜವರೇಗೌಡ, ಗ್ರಾಪಂ ಸದಸ್ಯ ಗೌರೀಶ್, ಎಂ.ಪಿ.ನಿಂಗಪ್ಪ ಗ್ರಾಮಸ್ಥರು ಇದ್ದರು.

ಜಿಟಿ ಮಳೆಗೆ ಮನೆಗಳ ಕುಸಿತ

ದೇಬೂರು, ಮೇ 19 (ಹುಲ್ಲಹಳ್ಳಿ ಮೋಹನ್)– ಕಳೆದ ಒಂದು ವಾರದಿಂದ ಸುರಿಯುತ್ತಿರುವ ಜಿಟಿ ಮಳೆಗೆ 2 ಮನೆಗಳು ನೆಲಸಮಗೊಂಡಿರುವ ಘಟನೆ ತಾಲೂಕಿನ ಹೆಗ್ಗಡಹಳ್ಳಿ ಗ್ರಾಮದ ಉಪ್ಪಾರ ಶೆಟ್ಟರ ಬೀದಿಯಲ್ಲಿ ಜರುಗಿದೆ.

ಗ್ರಾಮದ ಮಹದೇವಮ್ಮ ಹಾಗೂ ಬಸವಶೆಟ್ಟಿ ಎಂಬುವರ ಹಳೆಯ ಮಣ್ಣಿನ ಮನೆಗಳು ಸಂಪೂರ್ಣ ಕುಸಿದಿದ್ದು, ಅದೃಷ್ಟವಶಾತ್ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ. ಮನೆ ಕಳೆದುಕೊಂಡ ನಿರಾಶ್ರಿತೆ ಮಹದೇವಮ್ಮ ಮಾತನಾಡಿ ಕಳೆದ ಒಂದು ವಾರದಿಂದ ಸುರಿಯುತ್ತಿರುವ ಜಡಿ ಮಳೆಗೆ ಬುಧವಾರ ಮಧ್ಯರಾತ್ರಿ ನಮ್ಮ ಮನೆ ಗೋಡೆ ಹಾಗೂ ಮೇಲ್ಛಾವಣಿ ಕುಸಿದು ಬಿದ್ದಿದೆ. ಇದರಿಂದಾಗಿ ನಮಗೆ ವಾಸ ಮಾಡಲು ಮನೆಯಿಲ್ಲದೆ ಬೇರೆಯವರ ಆಶ್ರಯ ಪಡೆಯುವಂತಾಗಿದೆ. ಕೂಲಿ



ಮಾಡಿಕೊಂಡು ಜೀವನ ಸಾಗಿಸುತ್ತಿರುವ ನಮಗೆ ಮನೆ ಕಟ್ಟುವ ಶಕ್ತಿ ಇಲ್ಲ. ಹಾಗಾಗಿ ಸರ್ಕಾರ ಇತ್ತ ಗಮನ ಹರಿಸಿ ಸೂರು ಕಲ್ಪಿಸಿ ಕೊಡುವಂತೆ ಮನವಿ ಮಾಡಿಕೊಂಡರು. ವಿಷಯ ತಿಳಿದು ಸ್ಥಳಕ್ಕೆ ಕಂದಾಯ ಇಲಾಖೆ ಅಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಿ ಪರಿಹಾರ ಕೊಡಿಸುವ ಭರವಸೆ ನೀಡಿದ್ದಾರೆ.

ಟ್ಯಾಲೆಂಟ್ ವಿದ್ಯಾಸಂಸ್ಥೆಗೆ ಉತ್ತಮ ಫಲಿತಾಂಶ



ಪ್ರಕೃತಿ–618 ಸಾತ್ವಿಕ್–619 ಭಾನುಪ್ರಕಾಶ್–610 ಗೌಸ್ ಮೊಹಿದ್ದೀನ್–615 ತನುಜ.ಹೆಚ್.ಡಿ–617 ಹೇಮ–609

ಹುಣಸೂರು, ಮೇ 19(ಕೆಕೆ)– ನಗರದ ಟ್ಯಾಲೆಂಟ್ ವಿದ್ಯಾಸಂಸ್ಥೆ ಈ ಬಾರಿಯ ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತಮ ಫಲಿತಾಂಶ ಪಡೆದಿದೆ ಎಂದು ಸಂಸ್ಥೆ ನಿರ್ದೇಶಕ ನವೀನ್ ರೈ ತಿಳಿಸಿದರು. ಶಾಲೆಯ 40 ಬಾಲಕರು ಮತ್ತು 32 ಬಾಲಕಿಯರು ಸೇರಿದಂತೆ ಒಟ್ಟು 72 ಜನ ವಿದ್ಯಾರ್ಥಿಗಳು ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆದಿದ್ದು, ಎಲ್ಲಾ ವಿದ್ಯಾರ್ಥಿಗಳು ಪಾಸಾಗಿದ್ದು, ಶೇ.100ರಷ್ಟು ಫಲಿತಾಂಶ ಪಡೆದಿದ್ದೇವೆ ಎಂದರು.

ಸಾತ್ವಿಕ್ 619, ಪ್ರಕೃತಿ 618, ತನುಜ.ಹೆಚ್.ಡಿ.617, ಗೌಸ್‌ಮೊಯಿದ್ದೀನ್ 615, ಭಾನುಪ್ರಕಾಶ್ 610, ಹೇಮ 609 ಅಂಕಗಳನ್ನು ಪಡೆದಿದ್ದಾರೆ.

ಸಿಧುಗೆ ಒಂದು ವರ್ಷ ಜೈಲು ಶಿಕ್ಷೆ

"ಕಾನೂನಿಗೆ ಶರಣು" ಎಂದ ಸಿಧು

ಚಂಡೀಗಢ, ಮೇ 19– 1988ರ ರೋಡ್ ರೇಜ್ ಪ್ರಕರಣಕ್ಕೆ ಸಂಬಂಧಿಸಿದಂತೆ 34 ವರ್ಷಗಳ ನಂತರ ಮಾಜಿ ಕ್ರಿಕೆಟಿಗ–ರಾಜಕಾರಣಿ ನವಜೋತ್ ಸಿಂಗ್ ಸಿಧು ಅವರಿಗೆ ಸುಪ್ರೀಂ ಕೋರ್ಟ್ ಗುರುವಾರ ಒಂದು ವರ್ಷ ಜೈಲು ಶಿಕ್ಷೆ ವಿಧಿಸಿದೆ.



ಸುಪ್ರೀಂಕೋರ್ಟ್ ತೀರ್ಪಿನ ಬಗ್ಗೆ ಪ್ರತಿಕ್ರಿಯಿಸಿದ ಪಂಜಾಬ್ ಕಾಂಗ್ರೆಸ್ ಮಾಜಿ ಅಧ್ಯಕ್ಷ ನವಜೋತ್ ಸಿಂಗ್ ಸಿಧು ಅವರು, "ಘನ ನ್ಯಾಯಾ ಲಯದ ತೀರ್ಪಿಗೆ ತಲೆ ಬಾಗುವು ದಾಗಿ" ತಿಳಿಸಿದ್ದಾರೆ. ಇಂದು ಪಟಿಯಾಲ ದಲ್ಲಿ ಹಣದುಬ್ಬರದ ವಿರುದ್ಧದ ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ಸಿಧು, ""ಘನ ನ್ಯಾಯಾಲಯದ ತೀರ್ಪಿಗೆ ತಲೆ ಬಾಗುವುದಾಗಿ" ಟ್ವೀಟ್ ಮಾಡಿದ್ದಾರೆ.

ಪ್ರಕರಣದ ಸುದೀರ್ಘ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಎ.ಎಂ.ಖಾನ್ವಿಲ್ಕರ್ ಮತ್ತು ಎಸ್.ಕೆ.ಕೌಲ್ ಅವರ ಪೀಠ, ರಸ್ತೆಯಲ್ಲಿ ನಡೆದ ಗಲಾಟೆಗೆ ಸಂಬಂಧಿಸಿದಂತೆ ಸಿಧು ಅವರನ್ನು ಆರೋಪ ಮುಕ್ತಗೊಳಿಸಿದ್ದ ಮೇ 2018ರ ಆದೇಶವನ್ನು ಮರುಪರಿಶೀಲಿಸಿ ಇಂದು 1 ವರ್ಷದ ಜೈಲು ಶಿಕ್ಷೆ ವಿಧಿಸಿ ತೀರ್ಪು ನೀಡಿದೆ.

ರಾಜ್ಯಕ್ಕೆ ನಾಲ್ಕನೇ ಟಾಪರ್

ಹಾಸನ, ಮೇ 19–ಹಾಸನದ ಹೋಲಿ ಚಿಲ್ಡ್ರನ್ ಪ್ರೌಢ ಶಾಲೆಯ ವಿದ್ಯಾರ್ಥಿನಿ ಎಸ್.ನೇಹಾ ರಾಜ್ ಎಸ್‌ಎಸ್‌ಎಲ್‌ಸಿಯಲ್ಲಿ 625ಕ್ಕೆ 623 ಅಂಕ ಪಡೆಯುವ ಮೂಲಕ ರಾಜ್ಯಕ್ಕೆ ನಾಲ್ಕನೇ ಟಾಪರ್ ಆಗಿ ಹೊರ ಹೊಮ್ಮಿದ್ದಾರೆ. ಈಕೆ 'ಮೈಸೂರು ಮಿತ್ರ' ಹಾಸನ ಜಿಲ್ಲಾ ವರದಿಗಾರ ಎನ್. ಸೋಮೇಶ್ ರಾಚೇನಹಳ್ಳಿ ಮತ್ತು ಉಪನ್ಯಾಸಕಿ ಶಾಂತಿರಾಜ್ ದಂಪತಿ ಪುತ್ರಿ.



ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ

ಮೈಸೂರು, ಮೇ 19–ಮೈಸೂರು ವಿಜಯ ನಗರದ ಭಾರತೀಯ ವಿದ್ಯಾಭವನದ ವಿದ್ಯಾರ್ಥಿ ಕೌಸ್ತುಭಗೌಡ ಎಸ್‌ಎಸ್‌ಎಲ್‌ಸಿಯಲ್ಲಿ 613 ಅಂಕ ಗಳಿಸಿ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾನೆ. ಕನ್ನಡ 122, ಇಂಗ್ಲಿಷ್ 100, ಹಿಂದಿ 98, ಗಣಿತ 100, ವಿಜ್ಞಾನ 98 ಹಾಗೂ ಸಾಮಾಜಿಕ ವಿಜ್ಞಾನದಲ್ಲಿ 95 ಅಂಕ ಗಳಿಸಿದ್ದಾನೆ. ಈತ ಜೆಡಿಎಸ್ ಯುವ ಘಟಕದ ಮೈಸೂರು ಜಿಲ್ಲಾಧ್ಯಕ್ಷ ಗಂಗಾಧರಗೌಡ ಹಾಗೂ ಪಲ್ಲವಿ ದಂಪತಿ ಪುತ್ರ.



ಬಸವಣ್ಣನವರ ಅನುಭವ ಮಂಟಪ ಭಾರತದ ಪ್ರಜಾಪ್ರಭುತ್ವಕ್ಕೆ ನಾಂದಿ

ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್ ಅಭಿಪ್ರಾಯ

ತಿ.ನರಸೀಪುರ ಮೇ 19(ಎಸ್‌ಕೆ)– ಸಾಮಾಜಿಕ ಅಸಮಾನತೆ ಅರಿತಿದ್ದ ಬಸವಣ್ಣನವರ ಸಿದ್ಧಾಂತ, ಚಿಂತನೆಗಳು ಬುದ್ಧನ ನಂತರ ಸಮಾನತೆಯ ಸಮಾಜ ನಿರ್ಮಾಣದಲ್ಲಿ ಇಡೀ ವಿಶ್ವಕ್ಕೆ ಮಾದರಿಯಾಗಿದ್ದರೆ, ಬಸವಣ್ಣನವರ ಅನುಭವ ಮಂಟಪ ಭಾರತದ ಪ್ರಜಾಪ್ರಭುತ್ವಕ್ಕೆ ನಾಂದಿಯಾಗಿದೆ ಎಂದು ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್ ಅಭಿಪ್ರಾಯಪಟ್ಟರು.

ಪಟ್ಟಣದ ಗುರುಭವನದಲ್ಲಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್‌ನಿಂದ ಹಮ್ಮಿಕೊಂಡಿದ್ದ ಜಗಜ್ಯೋತಿ ಬಸವೇಶ್ವರರ ಜಯಂತ್ಯುತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ವೈಚಾರಿಕ ಚಿಂತನೆಗಳಿಗೆ ಆಯಾಮ ನೀಡಿದ ಪ್ರತಿಯೊಬ್ಬ ಶರಣರು ವಚನ ಸಾಹಿತ್ಯದ ಅಮೃತವನ್ನು ಜಗತ್ತಿಗೆ ಬಳುವಳಿಯಾಗಿ ಕೊಟ್ಟಿದ್ದಾರೆ ಎಂದರು.

ಪ್ರಭುತ್ವದ ಬದಲು ಪ್ರಜಾಪ್ರಭುತ್ವ ಜಾರಿಗೆ ತಂದ ಬಸವಣ್ಣನವರು ಸಮಾಜ ಸುಧಾರಕರಲ್ಲದೆ ಅತ್ಯುತ್ತಮ ಆಡಳಿತಗಾರ ಹಾಗೂ ಆರ್ಥಿಕ ತಜ್ಞರಾಗಿದ್ದಾರೆ. ಅಂತರ್ಜಾತಿ ಅಥವಾ ಅನ್ಯ ಧರ್ಮಗಳ ಹುಡುಗ–ಹುಡುಗಿ ವಿವಾಹವಾದರೆ ಮರ್ಯಾದೆ ಹತ್ಯೆಯಾಗುವ ಇಂದಿನ ಸನ್ನಿವೇಶದಲ್ಲಿ 12ನೇ ಶತಮಾನದಲ್ಲಿ ಅಂತರ್ಜಾತಿ ವಿವಾಹ ಮಾಡಿದ ಧೈರ್ಯ ಮೆಚ್ಚಲೇಬೇಕು. ಬಸವಣ್ಣನವರ ಜಯಂತ್ಯುತ್ಸವವನ್ನು ಅರ್ಥಪೂರ್ಣವಾಗಿ ಆಚರಿಸುತ್ತಿರುವ ತಾಲೂಕು ಸಾಹಿತ್ಯ ಪರಿಷತ್ ಕಾರ್ಯವನ್ನು ಶ್ಲಾಘಿಸಿದರು.



ಬಸವೇಶ್ವರರ ಪುತ್ಥಳಿಗೆ ಪುಷ್ಪಾರ್ಚನೆ ಮಾಡಿದ ಶರಣ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಹೆಳವರಹುಂಡಿ ಸಿದ್ದಪ್ಪ ಮಾತನಾಡಿ, ವಚನಗಳ ಮೂಲಕ ಕನ್ನಡ ಸಾಹಿತ್ಯ ಶ್ರೀಮಂತಗೊಳಿಸಿದ ಬಸವಣ್ಣನವರ ಜಯಂತ್ಯುತ್ಸವನ್ನು ಪರಿಷತ್‌ನಿಂದ ರಾಜ್ಯ ಮಟ್ಟದಲ್ಲಿ ಆಚರಿಸಲು ರಾಜ್ಯಾಧ್ಯಕ್ಷರಿಗೆ ಜಿಲ್ಲಾ ಹಾಗೂ ತಾಲೂಕು ಸಮಿತಿಯಿಂದ ಪ್ರಸ್ತಾವನೆ ಸಲ್ಲಿಸಬೇಕು. ಮುಂಬರುವ ವರ್ಷದಲ್ಲಿ ಜಯಂತಿ ಆಚರಿಸಲು ಈಗಿನಿಂದಲೇ ಸಿದ್ಧತೆ ಆರಂಭಿಸಬೇಕು ಎಂದು ಮನವಿ ಮಾಡಿದರು.

ಕಾಯಕಯೋಗಿ ಪುರಸ್ಕೃತರಿಗೆ ಸನ್ಮಾನ: ಸಾರ್ವಜನಿಕ ಆಸ್ಪತ್ರೆ ಶಸ್ತ್ರಚಿಕಿತ್ಸಾ ತಜ್ಞ ಡಾ.ರೇವಣ್ಣ ಅವರು ಸಂಗೀತ ವಿದ್ವಾನ್ ಎಂ.ರಾಜಪ್ಪ, ನಿವೃತ್ತ ಸೈನಿಕ ಎಂ. ಶಿವಕುಮಾರ್, ಅನಾಥ ಶವಗಳ ಮೋಕ್ಷದಾತ ಡಾ. ಮಾದೇಶ, ಯುವ ಸಾಹಿತಿ ಸುಹಾಸ್ ಎಂ.ಸುಮುಖ, ಪತ್ರಕರ್ತ ಎಂ.ಮಾದೇಶ, ಹಿರಿಯ ಮಹಿಳಾ ಆರೋಗ್ಯ ಸಹಾಯಕಿ ಪಿ.ಬಿ.ಜಾನ್ಸಿ, ಚಲನಚಿತ್ರ ನಿರ್ಮಾಪಕ ಎಂ.ಪಾಂಡು, ಡ್ರಾಮಾ ಮಾಸ್ಟರ್ ಬಿ.ಲಿಂಗಪ್ಪ ಹಾಗೂ ಸಮಾಜ ಸೇವಕ ವೈ.ಹೆಚ್.ಹನುಮಂತೇಗೌಡ ಅವರಿಗೆ ಕಾಯಕಯೋಗಿ ಪ್ರಶಸ್ತಿ ಪ್ರದಾನ ಮಾಡಿದರು.

ವಾಟಾಳು ಮಠದ ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ ಕಾರ್ಯಕ್ರಮದ ಸಾನಿಧ್ಯ ವಹಿಸಿದ್ದರು. ಹಲವಾರ ಮಠದ ಷಡಕ್ಷರ ದೇಶಿಕೇಂದ್ರ ಸ್ವಾಮೀಜಿ ಬಸವೇಶ್ವರರ ಕುರಿತು ಉಪನ್ಯಾಸ ನೀಡಿದರು. ವಿಚಾರವಾದಿ ಕೆ.ಎನ್.ಪ್ರಭುಸ್ವಾಮಿ ಹಾಗೂ ಪುರಸಭಾಧ್ಯಕ್ಷ ಎಸ್.ಮದನ್‌ರಾಜ್ ಮಾತನಾಡಿದರು. ಎಸ್ಸಿ/ಎಸ್ಟಿ ಗುತ್ತಿಗೆದಾರರ ಸಂಘದ ಜಿಲ್ಲಾಧ್ಯಕ್ಷ ಕೆ.ಮಲ್ಲು, ವಕೀಲರ ಸಂಘದ ಅಧ್ಯಕ್ಷ ಕೆ.ಜಿ.ಪಾಲಾಕ್ಷಮೂರ್ತಿ, ಎಸ್.ಆರ್.ಗ್ಯಾಸ್ ವ್ಯವಸ್ಥಾಪಕಿ ಶಹನಾಜ್ ಬಾನು, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಎಂ.ವಿ.ಶಿವಶಂಕರ ಮೂರ್ತಿ, ಉಪನ್ಯಾಸಕ ಕುಮಾರಸ್ವಾಮಿ, ಶಿಕ್ಷಕರ ಸಂಘದ ಅಧ್ಯಕ್ಷ ಹೆಚ್.ಡಿ.ಮಾದಪ್ಪ, ಪ್ರಧಾನ ಕಾರ್ಯದರ್ಶಿ ಪುಟ್ಟಸ್ವಾಮಿ, ಕಸಾಪ ನಿಕಟಪೂರ್ವ ಜಿಲ್ಲಾಧ್ಯಕ್ಷ ಎಂ.ಚಂದ್ರಶೇಖರ್, ತಾಲೂಕು ಅಧ್ಯಕ್ಷ ಕನ್ನಡ ಪುಟ್ಟಸ್ವಾಮಿ, ಮೈಸೂರು ತಾಲೂಕು ಅಧ್ಯಕ್ಷ ಎ.ಸಿ.ಮಂಜುನಾಥ್, ಖಾಸಗಿ ಬಸ್ ಏಜೆಂಟರ ಸಂಘದ ಅಧ್ಯಕ್ಷ ಪಿ.ಪುಟ್ಟರಾಜು, ಮಜೀದ್ ಇ ನೂರ್ ಅಧ್ಯಕ್ಷ ಬಿ.ಮನ್ಸೂರ್ ಅಲಿ, ಆರ್ಯ ಈಡಿಗರ ಸಂಘದ ಅಧ್ಯಕ್ಷ ಮಂಜುಕುಮಾರ, ಬೃಂದಾ ಆಸ್ಪತ್ರೆ ಗುರು, ಹಾಸ್ಯ ನಟ ಡಿಂಗ್ರಿ ನಾಗರಾಜು, ಮಿನಿ ದ್ವಾರಕೀಶ್, ಕೋಶಾಧ್ಯಕ್ಷ ಎನ್.ಎಸ್. ಜ್ಞಾನೇಂದ್ರ ಮೂರ್ತಿ, ಗ್ರಾಪಂ ಮಾಜಿ ಅಧ್ಯಕ್ಷ ಬಿ.ಎಂ. ಶಿವಕುಮಾರ್, ಮಾಜಿ ಸದಸ್ಯ ಹೆಳವರಹುಂಡಿ ಮೂರ್ತಿ, ಮುಖಂಡರಾದ ಹೆಚ್.ಅಣ್ಣಯ್ಯಸ್ವಾಮಿ, ಸಂತೃಪ್ತಿ ಕುಮಾರ್, ಸೋಮುದಾದಾ, ಡಿ.ಮಾದೇಶ್ ನಾಯಕ, ವಾಟಾಳು ಆರ್.ಸಾಗರ್, ಹಾಲಿನ ಸತ್ಯ ಇನ್ನಿತರರಿದ್ದರು.


ಕೊಹ್ಲಿ ಅಬ್ಬರ: ಆರ್‌ಸಿಬಿಗೆ ಭರ್ಜರಿ ಜಯ

ಮುಂಬೈ, ಮೇ 19– ಗೆಲ್ಲಲೇಬೇಕಾದ ಪಂದ್ಯದಲ್ಲಿ ವಿರಾಟ್ ಕೊಹ್ಲಿ ಅವರ ಅರ್ಧಶತಕದ ನೆರವಿನಿಂದ ರಾಯಲ್ ಚಾಲೆಂಜರ್ಸ್ ಬೆಂಗಳೂರು ಗುಜರಾತ್ ಟೈಟಾನ್ಸ್ ವಿರುದ್ಧ 8 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ. ಈ ಮೂಲಕ ಆರ್‌ಸಿಬಿ ಪ್ಲೇ–ಆಫ್ ಪ್ರವೇಶದ ಕನಸನ್ನು ಜೀವಂತವಾಗಿರಿಸಿದೆ.



ಇಲ್ಲಿನ ವಾಂಖೇಡೆ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಗುಜರಾತ್ ನಿಗದಿತ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 168ರನ್ ಗಳಿಸಿತು. ತಂಡದ ಪರ ವೃದ್ಧಿಮಾನ್ ಸಹಾ 31, ಮ್ಯಾಥ್ಯೂ ವೇಡ್ 16, ನಾಯಕ ಹಾರ್ದಿಕ್ ಪಾಂಡ್ಯ 62, ಡೇವಿಡ್ ಮಿಲ್ಲರ್ 34, ರಶೀದ್ ಖಾನ್ 19 ರನ್ ಗಳಿಸಿದರು. ಆರ್‌ಸಿಬಿ ಪರ ಜೋಸ್ ಹ್ಯಾಸೆಲ್‌ವುಡ್ 2, ಗ್ಲೆನ್ ಮ್ಯಾಕ್ಸ್‌ವೆಲ್, ವಾನಿಂದು ಹಸರಂಗ ತಲಾ ಒಂದೊಂದು ವಿಕೆಟ್ ಉರುಳಿಸಿದರು.

169 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಬೆಂಗಳೂರು 18.4 ಓವರ್‌ಗಳಲ್ಲಿ 2 ವಿಕೆಟ್ ನಷ್ಟಕ್ಕೆ 170 ರನ್ ಗಳಿಸಿ ಗೆಲುವಿನ ನಗೆ ಬೀರಿತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ನಾಯಕ ಫಫ್ ಡುಪ್ಲೆಸಿ ಹಾಗೂ ವಿರಾಟ್ ಕೊಹ್ಲಿ ಮೊದಲ ವಿಕೆಟ್‌ಗೆ 115 ರನ್‌ಗಳ ಜೊತೆಯಾಟವಾಡುವ ಮೂಲಕ ಉತ್ತಮ ಆರಂಭ ಒದಗಿಸಿದರು. ಆದರೆ 44 ರನ್ ಗಳಿಸಿದ್ದ ಡುಪ್ಲೆಸಿ ವಿಕೆಟ್ ಒಪ್ಪಿಸಿದರು. ಮತ್ತೊಂದೆಡೆ ಅಬ್ಬರಿಸಿದ ಕೊಹ್ಲಿ ಅರ್ಧಶತಕ ಸಿಡಿಸಿ ಸಂಭ್ರಮಿಸಿದರು. ಅಲ್ಲದೇ ಪಂದ್ಯದಲ್ಲಿ ತಮ್ಮ ಹಳೆಯ ಬ್ಯಾಟಿಂಗ್ ಲಯ ಕಂಡುಕೊಂಡರು. ಆದರೆ 54 ಎಸೆತಗಳಲ್ಲಿ 2 ಸಿಕ್ಸರ್, 8 ಬೌಂಡರಿ ಒಳಗೊಂಡ 73 ರನ್ ಗಳಿಸಿ ನಿರ್ಗಮಿಸಿದರು. ನಂತರ ಬಂದ ಗ್ಲೆನ್ ಮ್ಯಾಕ್ಸ್‌ವೆಲ್ ಬಿರುಸಿನ 40 ರನ್ ಗಳಿಸಿದರು. ಗುಜರಾತ್ ಪರ ರಶೀದ್ ಖಾನ್ 2 ವಿಕೆಟ್ ಪಡೆದರು. ವಿರಾಟ್ ಕೊಹ್ಲಿ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.






















URGENTLY REQUIRED

Male / Female for Office Work at Samsung Service Centre
Qualification - Any Degree

7899336723


ಮೈಸೂರು ಮಿತ್ರ 43
ಜಾಹೀರಾತಿಗಾಗಿ ಸಂಪರ್ಕಿಸಿ:
Ph: 0821-2496522 / 23
Email: ad@mysurumithra.com


















ALVA'S PU COLLEGE
Vidyagiri - Moodubidire - 574 227

ADMISSIONS OPEN

SCIENCE — PCMB | PCMC | PCMS | PCME — Integrated with NEET/CET/JEE /CLAT/NDA / NATA /KVPY

COMMERCE — EBAC | EBAS | EBAH | BASBm EABBm — Integrated with CA/CS/CLAT/ACCA/NDA

ARTS — HEPS — Integrated with CLAT/NDA /CIVIL SERVICE

Adoption and Scholarship for Meritorious Students in Academics, Sports and Cultural

6366377827, 6366377823, 6366377824, 9448915155

We have no other Branches www.alvaspucollege.org